
ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ನವೆಂಬರ್ 30 ಶನಿವಾರ 2024
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
45
ಸಂಪುಟ: 45 | ಸಂಚಿಕೆ: 223 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಲೂಟಿಯಾಗಿರುವ ತನ್ನ ಸಾವಿರಾರು ಕೋಟಿ ಆಸ್ತಿ ಸಂಬಂಧ 'ಮುಡಾ' ಇಲ್ಲಿಯವರೆಗೂ ಪೊಲೀಸರಿಗೆ ದೂರು ನೀಡಿಲ್ಲ...!

ಸಾವಿರಾರು ಕೋಟಿ ಬೆಲೆ ಬಾಳುವ ಸಾವಿರಾರು ನಿವೇಶನ ಕಂಡ ಕಂಡವರ ಪಾಲಾದರೂ 'ಮುಡಾ' ಸಭೆಯಲ್ಲಿ ದೂರು ನೀಡಬೇಕೆನ್ನುವ ವಿಚಾರವೇ ಪ್ರಸ್ತಾಪವಾಗಲಿಲ್ಲವೇಕೆ?

ಮೈಸೂರು, ನ.29–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಶೇ.50:50, ಪ್ರೋತ್ಸಾಹ ದಾಯಕ ಹಾಗೂ ಬದಲಿ ನಿವೇಶನ ಹೆಸರಿನಲ್ಲಿ ಅಕ್ರಮ ವಾಗಿ ಸಾವಿರಾರು ಕೋಟಿ ರೂ. ಮೌಲ್ಯದ ಮುಡಾ ನಿವೇಶನಗಳನ್ನು ಹಂಚಿಕೆ ಮಾಡುವ ಮೂಲಕ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದ್ದು, ಸರ್ಕಾರ ಮಧ್ಯ ಪ್ರವೇಶಿಸಿ, ಈ ಸಂಬಂಧ ನಾನಾ ತನಿಖೆಗಳಿಗೆ ಮುಂದಾಗಿದೆ.

ದುರಂತವೆಂದರೆ ಸಾವಿರಾರು ಕೋಟಿ ರೂ. ಹಗರಣ ನಡೆದಿರುವುದು ಮುಡಾದಲ್ಲಿ. ಅರ್ಥಾತ್ ಅಧೀನ ಸರ್ಕಾರಿ ಸಂಸ್ಥೆಯಾದ ಮುಡಾದಲ್ಲಿ ಮುಡಾ ಸಭೆಯ ಅನುಮೋದನೆಯನ್ನೇ ಪಡೆಯದೇ ಅಧಿಕಾರಿಗಳೇ ಮನಬಂದಂತೆ ನಿವೇಶನ ಮಂಜೂರು ಮಾಡಿದ್ದಾರೆ. ಒಂದು ರೀತಿಯಲ್ಲಿ ದರೋಡೆಯೇ ನಡೆದು ಹೋಗಿದೆ. ಮುಡಾಗೆ ಸೇರಿದ ಸಾವಿರಾರು ನಿವೇಶನಗಳನ್ನು ಅಕ್ರಮವಾಗಿ ಪರಭಾರೆ ಮಾಡಲಾಗಿದ್ದರೂ, ಈ ಸಂಬಂಧ ಮುಡಾದಿಂದ ಈವರೆವಿಗೂ ಯಾವುದೇ ಪೊಲೀಸ್ ಠಾಣೆಯಲ್ಲೂ ಅಧಿಕೃತವಾಗಿ ದೂರೇ ದಾಖಲಾಗಿಲ್ಲ. ಮುಡಾದ ಅಧಿಕಾರಿಗಳಾಗಲೀ, ಸದಸ್ಯರಾಗಿರುವ ಜನಪ್ರತಿನಿಧಿಗಳಾಗಲೀ, ಹಿಂದೆ ಅಧ್ಯಕ್ಷರಾಗಿದ್ದವರಾಗಲೀ, ನಗರಾಭಿವೃದ್ಧಿ ಇಲಾಖೆ ಸಚಿವರಾಗಲೀ, ಈ ಬಹುಕೋಟಿ ಅಕ್ರಮ ಸಂಬಂಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ತುಟಿಕ್–ಪಿಟಿಕ್ ಎನ್ನದೇ ಇರುವುದು ಅಚ್ಚರಿಗೆ ಕಾರಣವಾಗಿದೆ.

ಒಂದು ಸಣ್ಣ ಪ್ರಕರಣಕ್ಕೂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಮುಡಾ ಅಧಿಕಾರಿಗಳು ತಮ್ಮದೇ ಸಂಸ್ಥೆಯ ಸಾವಿರಾರು ಕೋಟಿ ರೂ. ಆಸ್ತಿ ಲೂಟಿಯಾ ಗಿರುವ ಬಗ್ಗೆ ಮೌನಕ್ಕೆ ಶರಣಾಗಿರುವುದು ಸಾವಿರ ಅನುಮಾನಕ್ಕೆ ಕಾರಣವಾಗಿದೆ. ಅಚ್ಚರಿ ಸಂಗತಿ ಎಂದರೆ ಈ ಭಾರೀ ಹಗರಣ ಬೆಳಕಿಗೆ ಬಂದ ನಂತರವೂ ಮುಡಾ ಸಭೆ ನಡೆದಿದೆ. ಈ



ಸಭೆಯಲ್ಲೂ ಯಾರೊಬ್ಬರೂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಬಗ್ಗೆ ಪ್ರಸ್ತಾಪಿಸಲೇ ಇಲ್ಲ. ತಮಾಷೆ ಯೆಂದರೆ ಮುಡಾ ಸಭೆಯಲ್ಲಿ ಭಾಗವಹಿಸಿದ್ದ ಬಹುತೇಕ ಎಲ್ಲಾ ಸದಸ್ಯರೂ ಶೇ.50:50ರ ಅನುಪಾತದಡಿ ವಿತರಣೆ ಯಾಗಿರುವ ಎಲ್ಲಾ ನಿವೇಶನಗಳನ್ನೂ ವಾಪಸ್ ಪಡೆಯ ಬೇಕೆಂದು ವೀರಾವೇಶದಿಂದ ಮಾತನಾಡಿದ್ದಾರೆ. ಕೊನೆಗೆ ನ್ಯಾಯಮೂರ್ತಿ ದೇಸಾಯಿ ಅವರ ತನಿಖಾ ವರದಿ ಬಂದ ನಂತರ ನಿವೇಶನಗಳನ್ನು ವಾಪಸ್ ಪಡೆಯುವುದು ಎಂದು ನಿರ್ಣಯವನ್ನೂ ಮಾಡಿದ್ದಾರೆ. ಹಂಚಿಕೆಯಾಗಿರುವ ನಿವೇಶನಗಳನ್ನು ವಾಪಸ್ ಪಡೆಯಬೇಕು ಎಂಬ ಅಭಿಪ್ರಾಯ ಯಾವುದೇ ರೀತಿಯ ಅಭಿಪ್ರಾಯ ಭೇದವಿಲ್ಲದೆ ಸಭೆಯಲ್ಲಿ ಮಂಡನೆಯಾಗಿದೆ. ಅಂದರೆ ಅವರೆಲ್ಲರೂ ಮುಡಾಗೆ ಸೇರಿದ ನಿವೇಶನಗಳು ಅಕ್ರಮವಾಗಿ ಹಂಚಿಕೆಯಾಗಿದೆ ಎಂಬುದನ್ನು ಒಪ್ಪಿಕೊಂಡಂತಾಯಿತು. ಆದರೂ ಈ ಮಹಾಶಯರು ಅಕ್ರಮವಾಗಿ ಸಾವಿರಾರು ಕೋಟಿ ರೂ. ಮೌಲ್ಯದ ಮುಡಾಗೆ ಸೇರಿದ ನಿವೇಶನಗಳನ್ನು ಧಾರೆ ಎರೆದಿರುವ ಭ್ರಷ್ಟಾಚಾರಿಗಳ ವಿರುದ್ಧ ಪೊಲೀಸ್ ಠಾಣೆಗೆ ದೂರು ಸಲ್ಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂಬ ಮಾತನ್ನೇ ಆಡಿಲ್ಲ. ಅಷ್ಟಕ್ಕೂ ಇವರ್‍ಯಾರೂ ಕಾನೂನಿನ ಬಗ್ಗೆ ಅರಿವಿಲ್ಲದೇ ಇರುವವರಲ್ಲ. ಮುಡಾ ಆಸ್ತಿ ಅಕ್ರಮ ವಾಗಿ ಬೇರೆಯವರ ಪಾಲಾಗಿದೆ ಅಂದರೆ ಅದೊಂದು ಕ್ರಿಮಿನಲ್ ಕೃತ್ಯ ಎಂಬುದು ಈ ಮಹಾಶಯರಿಗೆ ಮನವರಿಕೆ ಆಗಿಲ್ಲ ಎಂದು ಹೇಳಲಾಗುವುದಿಲ್ಲ. ಯಾಕೆಂದರೆ ಇಲ್ಲಿನ ಬಹುತೇಕ ಸದಸ್ಯರು ಕಾನೂನು ರಚಿಸುವ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ಸದಸ್ಯರಾಗಿದ್ದಾರೆ. ಹೀಗಿ ದ್ದರೂ ಇವರ್‍ಯಾರೂ ಮುಡಾ ಆಸ್ತಿಯನ್ನು ಲೂಟಿ ಮಾಡಿದವರಿಗೆ ಕಾನೂನು ಪ್ರಕಾರ ಶಿಕ್ಷೆ ಕೊಡಿಸಬೇಕು ಎಂಬ ನಿಟ್ಟಿನಲ್ಲಿ ಸೊಲ್ಲೆತ್ತದೇ ಇರುವುದರ ಮರ್ಮ ವೇನು? ಎಂದು ಪ್ರಜ್ಞಾವಂತ ನಾಗರಿಕರು ಪ್ರಶ್ನಿಸುವಂತಾ ಗಿದೆ. ಈ ಮಧ್ಯೆ ನಾಳೆ (ನ.30) ಮತ್ತೊಮ್ಮೆ ಮುಡಾ ಸಭೆ ನಡೆಯುತ್ತಿದೆ. ಈ ಸಭೆಯಲ್ಲಿ ಸದಸ್ಯರು ತಮ್ಮ ಯಾವ ಘನ ಕಾರ್ಯದ ಬಗ್ಗೆ ಚರ್ಚೆ ಮಾಡಿ ನಿರ್ಧಾರ ಕೈಗೊಳ್ಳಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಸಿಎಂ ಸಿದ್ದರಾಮಯ್ಯ ಎಷ್ಟು ದಿನ ಅಧಿಕಾರದಲ್ಲಿರ್ತಾರೋ ಗೊತ್ತಿಲ್ಲ!

ಆಪ್ತ ಬಿ.ಆರ್.ಪಾಟೀಲ್‌ಗೇ ಡೌಟು!



ಆಪ್ತ ಸಲಹೆಗಾರ ಬಿ.ಆರ್.ಪಾಟೀಲ್

ಹುಬ್ಬಳ್ಳಿ: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಆಗಾಗ ಚರ್ಚೆ ಮುನ್ನೆಲೆಗೆ ಬರುತ್ತಿದೆ. ಅಚ್ಚರಿ ಸಂಗತಿ ಎಂದರೆ, ಸಿದ್ದರಾಮಯ್ಯ ಅವರು ಪೂರ್ಣಾವಧಿಯ 5 ವರ್ಷ ಅಧಿಕಾರ ದಲ್ಲಿ ಇರುತ್ತಾರೋ, ಇಲ್ಲವೋ ಗೊತ್ತಿಲ್ಲ ಎಂದು ಅವರ ಆಪ್ತ ಸಲಹೆಗಾರ ಬಿ.ಆರ್.ಪಾಟೀಲ್ ಪ್ರತಿಕ್ರಿಯಿಸಿದ್ದಾರೆ.

ಇಂದು ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಐದು ವರ್ಷ ಇರುತ್ತಾರೋ, ಇರಲ್ವೋ ಗೊತ್ತಿಲ್ಲ. ಆದರೆ, ಅವರು ಐದು ವರ್ಷ ಇರಬೇಕು ಅಂತಾ ಬಯಸುತ್ತೇವೆ. ಹೈಕಮಾಂಡ್ ಏನು ನಿರ್ಧಾರ ಮಾಡುತ್ತೆ ಗೊತ್ತಿಲ್ಲ. ಹೈಕಮಾಂಡ್ ಬೇರೆ ನಿರ್ಧಾರ ತೆಗೆದುಕೊಂಡರೆ ನಾವೇನು ಮಾಡುವುದಕ್ಕೆ ಆಗುತ್ತೆ, ಹೈಕಮಾಂಡ್ ಸಿದ್ದ ರಾಮಯ್ಯ ಅವರಿಗೆ ಇನ್ನೂ ದೊಡ್ಡ ಜವಾಬ್ದಾರಿ ನೀಡಬಹುದು. ಆದರೆ, ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡಬೇಕು ಅಂತಾ ಯಾವ ಶಾಸಕರ ಮನಸ್ಸಿನಲ್ಲೂ ಇಲ್ಲ ಎಂದರು.

ದೊಡ್ಡ ಕನಸನ್ನು ಕಂಡು ಬಡವರ ಪರವಾಗಿ ಕಾರ್ಯ ಕ್ರಮ ಹಮ್ಮಿಕೊಂಡಾಗ ಭೌತಿಕ ಅಭಿವೃದ್ಧಿಗೆ ಹೊಡೆತ ಬೀಳುತ್ತೆ. ಈ ಬಾರಿಯ ಬಜೆಟ್‌ನಲ್ಲಿ ಗ್ಯಾರಂಟಿಯಿಂದ ಆರ್ಥಿಕ ಹೊರೆ ಆಗದಂತೆ ಹೊಸ ಆರ್ಥಿಕ ನೀತಿ ಸಿಎಂ ನೀಡುತ್ತಾರೆ. ನಮಗೆ ಮೊದಲೇ ಗೊತ್ತಿತ್ತು, ಇಷ್ಟು ಖರ್ಚು ಆಗುತ್ತೆ ಅಂತಾ. ಆರ್ಥಿಕ ಸಮಸ್ಯೆ ನಮಗೆ ಮಾತ್ರವಲ್ಲಾ ಎಲ್ಲಾ ರಾಜ್ಯಗಳಿಗಿದೆ. ಸಮಸ್ಯೆ

■ 6ನೇ ಪುಟಕ್ಕೆ

ಸಂಪುಟ ವಿಸ್ತರಣೆ ಇಲ್ಲವೇ ಪುನರ್ರಚನೆ ಸದ್ಯಕ್ಕಿಲ್ಲ

● ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸ್ಪಷ್ಟನೆ ● ಹಾಸನದ ಕಾಂಗ್ರೆಸ್ ಪಕ್ಷ–ಹಿಂದುಳಿದ ವರ್ಗಗಳ ಒಕ್ಕೂಟದಿಂದ 'ಸ್ವಾಭಿಮಾನಿ ಸಮಾವೇಶ'

ಬೆಂಗಳೂರು, ನ.29(ಕೆಎಂಶಿ)–ಸಂಪುಟ ವಿಸ್ತರಣೆ, ಇಲ್ಲವೇ ಪುನರ್ ರಚನೆ ಸದ್ಯಕ್ಕಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದ ನಂತರ ಪ್ರತ್ಯೇಕವಾಗಿ ಉಭಯ ನಾಯಕರು ಮಾಧ್ಯಮಕ್ಕೆ ಈ ವಿಷಯ ತಿಳಿಸಿದ್ದಾರೆ. ವಿಸ್ತರಣೆ ಇಲ್ಲವೇ ಪುನರ್ ರಚನೆ ಮಾಧ್ಯಮದವರ ಸೃಷ್ಟಿ, ನೀವೇ ನಮ್ಮ ಮಂತ್ರಿಮಂಡಲಕ್ಕೆ ಯಾರು ಸೇರುತ್ತಿದ್ದಾರೆ, ಯಾರನ್ನು ಕೈಬಿಡುತ್ತಿದ್ದಾರೆ ಎಂಬ ಪಟ್ಟಿಯನ್ನು ಸೃಷ್ಟಿಸಿದ್ದೀರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ನಮ್ಮಲ್ಲಿ ಇದ್ಯಾವುದೂ ಚರ್ಚೆ ಆಗಿಲ್ಲ, ಪಕ್ಷದ ವರಿಷ್ಠರ ಮುಂದೆಯೂ ಪ್ರಸ್ತಾಪ ಮಾಡಿಲ್ಲ. ಆದರೆ, ನಾಗೇಂದ್ರ ಮಂತ್ರಿಮಂಡಲ ಸೇರು ತ್ತಾರೆ, ಅದೂ ಈಗ ಸದ್ಯಕ್ಕಿಲ್ಲ ಎಂದು ಸ್ಪಷ್ಟಪಡಿಸಿದರು.

ಹಾಸನ ಸಮಾವೇಶ: ಹಾಸನದಲ್ಲಿ ಡಿ.5ರಂದು ಕಾಂಗ್ರೆಸ್ ಪಕ್ಷ ಹಾಗೂ ಹಿಂದುಳಿದ ವರ್ಗಗಳ ಒಕ್ಕೂಟದ ಆಶ್ರಯದಲ್ಲಿ ಸ್ವಾಭಿಮಾನಿ

■ 6ನೇ ಪುಟಕ್ಕೆ

ಮೇಕೆದಾಟು ಅಣೆಕಟ್ಟೆಗೆ ಅನುಮತಿ ಕೊಡಿಸಿ; ನಗರಗಳ ಅಭಿವೃದ್ಧಿಗೆ ಹಣ ಕೊಡಿ; ರಾಜ್ಯಕ್ಕೆ ಸೂಕ್ತ ತೆರಿಗೆ ಪಾಲು ನೀಡಿ

ಪ್ರಧಾನಿ ಮೋದಿ ಬಳಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮನವಿ

ಬೆಂಗಳೂರು, ನ.29(ಕೆಎಂಶಿ)– ಕೃಷ್ಣರಾಜ ಸಾಗರ ಜಲಾಶಯಕ್ಕೆ ಸಮಾನಾಂತರವಾಗಿ ಮೇಕೆದಾಟು ಸಮೀಪ ಅಣೆಕಟ್ಟೆ ನಿರ್ಮಾಣ, ಮಹದಾಯಿ ಕಳಸಾ–ಬಂಡೂರಿ ಯೋಜನೆಗಳಿಗೆ ಅನುಮತಿ ದೊರಕಿಸಿಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

ಕರ್ನಾಟಕ ಅತ್ಯಂತ ವೇಗವಾಗಿ ನಗರೀಕರಣಗೊಳ್ಳುತ್ತಿರುವ ರಾಜ್ಯವಾಗಿದ್ದು, 13 ನಗರಪಾಲಿಕೆಗಳನ್ನು ಹೊರತುಪಡಿಸಿ 2ನೇ ಸ್ಥರದ ನಗರಗಳ ಅಭಿವೃದ್ಧಿಗೆ ಹೆಚ್ಚಿನ ಬಂಡವಾಳ ನೀಡಿ ಎಂದು ಕೋರಿದ್ದಾರೆ.

ಕೇಂದ್ರದಿಂದ ಬರಬೇಕಿರುವ ಅನುದಾನ ಸೇರಿದಂತೆ ರಾಜ್ಯದ ಅಭಿವೃದ್ಧಿ ಯೋಜನೆಗಳ ಪಟ್ಟಿಯನ್ನೇ ದೆಹಲಿಯಲ್ಲಿಂದು ಪ್ರಧಾನಿ ಅವರಿಗೆ ಉಭಯ ನಾಯಕರು ಸಲ್ಲಿಸಿ, ಕುಡಿಯುವ ನೀರಿನ ಯೋಜನೆಗೆ ಅಗತ್ಯವಿರುವ ಮೇಕೆದಾಟು ಹಾಗೂ ಕಳಸಾ–ಬಂಡೂರಿಗೆ ಜಲಸಂಪನ್ಮೂಲ ಮತ್ತು ಪರಿಸರ ಇಲಾಖೆಯಿಂದ ಅನುಮತಿ ಕೊಡಿಸಿ ಎಂದು ಮನವಿಯಲ್ಲಿ ಕೋರಿದ್ದಾರೆ. ರಾಜ್ಯ ಸರ್ಕಾರ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿ ಮುಂದಿನ ಮೂರು ವರ್ಷಗಳ ಅವಧಿಗೆ 2,000 ಕೋಟಿ ರೂ. ತೆಗೆದಿರಿಸಿದೆ, ಆದರೆ, ಈ ನಗರಗಳಿಗೆ ಸಮಗ್ರ ಮೂಲಸೌಕರ್ಯ ಕಲ್ಪಿಸಲು ಅನುದಾನ ಸಾಕಾಗುವುದಿಲ್ಲ.

■ 6ನೇ ಪುಟಕ್ಕೆ



ಶುಕ್ರವಾರ ನವದೆಹಲಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಧಾನಿಮೋದಿ ಭೇಟಿ ಮಾಡಿದರು.

ಗ್ಯಾರಂಟಿ ಯೋಜನೆಗಾಗಿ ವಿಕಲಚೇತನರಿಗೆ ನೀಡಿದ್ದ ಅನುದಾನ ಕಡಿತ: ಜೋಷಿ, ಶೋಭಾ ಕರಂದ್ಲಾಜೆ ಕಿಡಿ

ಬೆಂಗಳೂರು: ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವ ಭರದಲ್ಲಿ ರಾಜ್ಯ ಸರ್ಕಾರ ವಿಕಲಚೇತನರಿಗೆ ಅನುದಾನ ಕಡಿತ ಮಾಡಿದ ಆರೋಪಕ್ಕೆ ಒಳಗಾಗಿದೆ.

ವಿಕಲಚೇತನರ ಅನುದಾನ ಕಡಿತ ಮಾಡಲಾಗಿದೆ ಎಂದು ಆರೋಪಿಸಿ ಬಿಜೆಪಿ ಆಕ್ರೋಶ ಹೊರಹಾಕಿದೆ. ಕಳೆದ ವರ್ಷಕ್ಕಿಂತ ವಿಕಲಚೇತರ ಅನುದಾನದಲ್ಲಿ 80%ರಷ್ಟು ಹಣ ಕಡಿತ ಮಾಡಲಾಗಿದೆ ಎಂದು ಬಿಜೆಪಿ ಆಪಾದಿಸಿದೆ. ಈ ವಿಚಾರವಾಗಿ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಶೋಭಾ ಕರಂದ್ಲಾಜೆ ಎಕ್ಸ್‌ನಲ್ಲಿ ಆಕ್ರೋಶ ಹೊರಹಾಕಿದ್ದಾರೆ. ಕಳೆದ ವರ್ಷ ಸರ್ಕಾರ ವಿಕಲಚೇನರ ವಿವಿಧ ಯೋಜನೆಗಳಿಗೆ 53 ಕೋಟಿ ರೂ. ಅನುದಾನ ಮೀಸಲು ಇಡಲಾಗಿತ್ತು. ಆದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಬರೀ 10 ಕೋಟಿ ರೂ. ಅನುದಾನ ಮಾತ್ರ ಹಂಚಿಕೆ ಮಾಡಲಾಗಿದೆ.

'ಮಿನಿ ಸಿದ್ದರಾಮೋತ್ಸವ'ಕ್ಕೆ ಕಾಂಗ್ರೆಸ್‌ನಲ್ಲೇ ಅಪಸ್ವರ: ಫೋಟೋ ಸಹಿತ ಹೈಕಮಾಂಡ್‌ಗೆ ದೂರು

ಬೆಂಗಳೂರು, ನ.29– ಮುಡಾ ಹಗರಣ, ವಾಲ್ಮೀಕಿ ಹಗರಣ ಸೇರಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿರೋಧ ಪಕ್ಷಗಳ ಆರೋಪಗಳಿಗೆ ಉತ್ತರ ನೀಡಲು ಹಾಸನದಲ್ಲಿ ಸಿದ್ದರಾಮೋತ್ಸವದ ಮಾದರಿಯಲ್ಲಿ ಸಮಾವೇಶವನ್ನು ಹಮ್ಮಿಕೊಂಡಿರುವುದಕ್ಕೆ ಕಾಂಗ್ರೆಸ್ ಪಕ್ಷದಲ್ಲೇ ಆಕ್ಷೇಪ ಎದುರಾಗಿದೆ. ಪ್ರತ್ಯೇಕ ಸಮಾವೇಶದ ಬಗ್ಗೆ ಎಐಸಿಸಿಗೂ ರಾಜ್ಯ ಕಾಂಗ್ರೆಸ್ ನಾಯಕರೊಬ್ಬರು ಪತ್ರ ಬರೆದಿದ್ದಾರೆ.

ಡಿ.5 ರಂದು ಹಾಸನದಲ್ಲಿ ಬೃಹತ್ ಸಮಾವೇಶವನ್ನು ಹಮ್ಮಿಕೊಳ್ಳಲು ನಿರ್ಧಾರ ಮಾಡಲಾಗಿದೆ. ವಿವಿಧ ಪ್ರಗತಿಪರ ಸಂಘಟನೆಗಳು, ಅಹಿಂದ ಒಕ್ಕೂಟಗಳು ಈ ಸಮಾವೇಶವನ್ನು ಆಯೋಜನೆ ಮಾಡಿವೆ ಸಚಿವರಾದ ಕೆ.ಎನ್.ರಾಜಣ್ಣ, ಡಾ.ಹೆಚ್.ಸಿ.ಮಹದೇವಪ್ಪ, ಪಿರಿಯಾಪಟ್ಟಣ ವೆಂಕಟೇಶ್ ಹಾಗೂ ಶಾಸಕ ಶಿವ ಲಿಂಗೇಗೌಡ ಸಮಾವೇಶದ ಸಿದ್ಧತೆ ಯನ್ನು ನಡೆಸುತ್ತಿದ್ದಾರೆ. ಆದರೆ ಈ ಸಮಾವೇಶ ಪಕ್ಷದ ಹೆಸರಿನಲ್ಲಿ ನಡೆಯುತ್ತಿಲ್ಲ. ಬದಲಾಗಿ ವಿರೋಧ ಪಕ್ಷಗಳ ಆರೋಪಗಳಿಗೆ ಉತ್ತರ ನೀಡಲು ಒಂದು ರೀತಿಯ ಶಕ್ತಿ ಪ್ರದರ್ಶನದ ಭಾಗವಾಗಿ ನಡೆಯುತ್ತಿದೆ.

ದೂರು ಪತ್ರದಲ್ಲಿ ಏನಿದೆ?: ಸಿಎಂ ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಯಾದ ದಿನದಿಂದಲೂ ಕಾಂಗ್ರೆಸ್ ಪಕ್ಷದ ವೇದಿಕೆ ಮತ್ತು ಪಕ್ಷದ ಚಿಹ್ನೆಯನ್ನು ದೂರವಿಟ್ಟು ಬೇರೆ ಬೇರೆ ಸಂಘಟನೆಗಳ ಹೆಸರಿನಲ್ಲಿ ಕಾರ್ಯಕ್ರಮ ಆಯೋಜನೆ ಮಾಡುತ್ತಿದ್ದಾರೆ. ಕಳೆದ ಬಾರಿ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಲು ಪಕ್ಷವನ್ನು ದೂರವಿಟ್ಟು ಕಾರ್ಯಕ್ರಮ ಆಯೋಜನೆ ಮಾಡಿದ್ದರು. ಪಕ್ಷದ ಚಿಹ್ನೆಯಡಿಯಲ್ಲೇ ಮಾಡಿದ್ದರೆ ಇದು ಪಕ್ಷಕ್ಕೆ ಮತ್ತಷ್ಟು ಬಲ ತುಂಬುತ್ತಿತ್ತು. ಆದರೆ ಪಕ್ಷದ ಯಾವ ವರಿಷ್ಠರೂ ಕೂಡ ಇದರ ಬಗ್ಗೆ ಗಮನ ಹರಿಸಿರಲಿಲ್ಲ. ಇದೀಗ ಎರಡನೇ ಬಾರಿ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಪರವಾಗಿ ಡಿಸೆಂಬರ್ 5ರಂದು ಹಾಸನ ದಲ್ಲಿ ಸ್ವಾಭಿಮಾನಿಗಳ ಹೆಸರಿನಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರವನ್ನು ದೂರವಿಟ್ಟು ಕಾರ್ಯಕ್ರಮ ಆಯೋಜನೆ ಮಾಡುತ್ತಿರುವುದು ಬೇಸರದ ಸಂಗತಿಯಾಗಿದೆ. ಬೇರೆ ನಾಯಕರು ಕೂಡಾ ಇದೇ ರೀತಿಯಲ್ಲಿ ವೈಯಕ್ತಿಕ ಲಾಭಕ್ಕಾಗಿ ಪಕ್ಷವನ್ನು ದುರುಪ ಯೋಗಪಡಿಸಿಕೊಂಡರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಭವಿಷ್ಯ ಏನಾಗಬಹುದು? ಈ ಹಿನ್ನೆಲೆಯಲ್ಲಿ ಪ್ರತ್ಯೇಕ ಸಮಾವೇಶವನ್ನು ಹಮ್ಮಿಕೊಳ್ಳದೆ ಕಾಂಗ್ರೆಸ್ ಪಕ್ಷದ

■ 6ನೇ ಪುಟಕ್ಕೆ

ಯತ್ನಾಳ್ ಬಣದ ಉಪಟಳ; ದೈವದ ಮೊರೆ ಹೋದ ವಿಜಯೇಂದ್ರ ಬಣ

ಬೆಂಗಳೂರು, ನ.29(ಕೆಎಂಶಿ)–ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಸಮರ ಸಾರಿರುವ ಹಿರಿಯ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತವರ ತಂಡದ ವಿರುದ್ಧ ಕ್ರಮಕ್ಕೆ ಆಗ್ರಹಿಸಿ, ಪಕ್ಷ ಸಂಘಟನೆ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕೈ ಬಲಪಡಿಸಲು ನಿಷ್ಠರ ಬಣ ದೇವಾಲಯಗಳ ಯಾತ್ರೆ ಆರಂಭಿಸಿದೆ.

ನಗರದಲ್ಲಿಂದು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹಾಗೂ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಸೇರಿದಂತೆ 50ಕ್ಕೂ ಹೆಚ್ಚು ಬಿಜೆಪಿ ಮಾಜಿ ಶಾಸಕರು ಹಾಗೂ ಮುಖಂಡರು ಕಟ್ಟಾ ಅವರ ಮನೆಯಿಂದ ದೇವಾಲಯ ಯಾತ್ರೆ ಆರಂಭಿಸಿದರು.

ಕೋಲಾರದ ಕುರುಡುಮಲೆ ಗಣೇಶ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಪಕ್ಷದ ಕಾರ್ಯಕರ್ತರ ಸಭೆ ನಡೆಸಿ, ಚಾಮುಂಡೇಶ್ವರಿದೇವಿ ದರ್ಶನಕ್ಕೆ ಮೈಸೂರಿಗೆ ತೆರಳಿದರು.

ದೇವಾಲಯಗಳ ಯಾತ್ರೆ ತೆರಳುವುದಕ್ಕೂ ಮುನ್ನ ಕಟ್ಟಾ ಅವರ ಮನೆಯಲ್ಲಿ ಸೇರಿದ್ದ ನಿಷ್ಠರು, ವಕ್ಫ್ ಒತ್ತುವರಿ ತೆರವು ವಿರುದ್ಧದ ಹೋರಾಟ ಹೆಸರಿನಲ್ಲಿ ಬಿಜೆಪಿ ನಾಯಕತ್ವದ ವಿರುದ್ಧ ಬಂಡಾಯ ಸಾರಿರುವ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ ಜಾರಕಿಹೊಳಿ, ಅರವಿಂದ ಲಿಂಬಾವಳಿ ಸೇರಿದಂತೆ ಎಲ್ಲ ನಾಯಕರ ಪಕ್ಷ ವಿರೋಧಿ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿ ರಾಜ್ಯಾದ್ಯಂತ ಕಾರ್ಯಕರ್ತರ ಜೊತೆ ಹೋರಾಟ ನಡೆಸಲು

■ 6ನೇ ಪುಟಕ್ಕೆ

ಮುಡಾದಿಂದ ಸ್ಥಳೀಯ ಸಂಸ್ಥೆಗಳಿಗೆ ಮೊದಲ ಹಂತದಲ್ಲಿ 240 ಬಡಾವಣೆಗಳ ಹಸ್ತಾಂತರ

ಉಳಿದ 700 ಬಡಾವಣೆಗಳು ಡಿಸೆಂಬರ್ ಅಂತ್ಯದೊಳಗೆ ಹಸ್ತಾಂತರ

ಮೈಸೂರು, ನ. 29(ಆರ್‌ಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವ್ಯಾಪ್ತಿಯ 240 ವಸತಿ ಬಡಾವಣೆಗಳನ್ನು ಮೈಸೂರು ನಗರಪಾಲಿಕೆ ಹಾಗೂ ಮೈಸೂರು ಹೊರವಲಯದ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುವ ಮೊದಲ ಹಂತದ ಪ್ರಕ್ರಿಯೆ ಪೂರ್ಣಗೊಂಡಿದೆ.

ಮುಡಾ ಕಾರ್ಯದರ್ಶಿ ಪ್ರಸನ್ನಕುಮಾರ್ ಮೈಸೂರು ಮಹಾನಗರ ಪಾಲಿಕೆ, ಹೂಟಗಳ್ಳಿ ನಗರಸಭೆ, ಬೋಗಾದಿ, ಶ್ರೀರಾಂಪುರ ಹಾಗೂ ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ 240 ಬಡಾವಣೆಗಳ ದಾಖಲಾತಿಗಳನ್ನು ಹಸ್ತಾಂತರಿಸಿದರು.

ಮೂಲ ಸೌಕರ್ಯಗಳೊಂದಿಗೆ ಅಭಿವೃದ್ಧಿಗೊಂಡಿರುವ ಉಳಿದ 700 ವಸತಿ ಬಡಾವಣೆಗಳನ್ನು ಡಿಸೆಂಬರ್ ಅಂತ್ಯದೊಳಗಾಗಿ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಿದ್ದು, ಮುಂದೆ ಅಲ್ಲಿ ನಿತ್ಯ ಸ್ವಚ್ಛತೆ, ಕಸ ವಿಲೇವಾರಿ, ರಸ್ತೆ, ಚರಂಡಿ, ವಿದ್ಯುತ್, ಕುಡಿಯುವ ನೀರು ಪೂರೈಕೆ, ಉದ್ಯಾನವನಗಳ ನಿರ್ವಹಣೆ ಮಾಡಲಿರುವ ಸ್ಥಳೀಯ ಸಂಸ್ಥೆಗಳು, ನಿವಾಸಿಗಳಿಂದ ಆಸ್ತಿ ತೆರಿಗೆ, ಕಂದಾಯ ವಸೂಲಿ ಮಾಡಿಕೊಳ್ಳಬೇಕಾಗಿದೆ. ಈಗಾಗಲೇ 240 ಬಡಾವಣೆಗಳ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳು, ಬಡಾವಣೆಯ ಅನುಮೋದಿತ ನಕ್ಷೆಗಳನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಒಪ್ಪಿಸಲಾಗಿದೆ ಎಂದು ಮುಡಾ ಆಯುಕ್ತ ಎ.ಎನ್. ರಘುನಂದನ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಸಂಪೂರ್ಣ ಅಭಿವೃದ್ಧಿಗೊಂಡಿರುವ ಬಡಾವಣೆಗಳ ಹಸ್ತಾಂತರಕ್ಕೆ ಸಿದ್ಧತೆ ಮಾಡುತ್ತಿದ್ದು, 2024ರ ಡಿಸೆಂಬರ್ ಅಂತ್ಯದೊಳಗಾಗಿ ಎಲ್ಲಾ 900 ವಸತಿ ಬಡಾವಣೆಗಳನ್ನೂ ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸುತ್ತೇವೆ ಎಂದು ಅವರು ತಿಳಿಸಿದರು. ಹೂಟಗಳ್ಳಿ ನಗರ ಸಭೆ ಆಯುಕ್ತ ಚಂದ್ರಶೇಖರ, ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಸುರೇಶ್, ಪಾಲಿಕೆ ವಲಯ ಕಚೇರಿ–3ರ ವಲಯಾಧಿಕಾರಿ ಸತ್ಯಮೂರ್ತಿ ಹಾಗೂ ಇತರರು ಬಡಾವಣೆ ಹಸ್ತಾಂತರಿಸುವ ಸಂದರ್ಭ ಉಪಸ್ಥಿತರಿದ್ದರು.




ಮುಡಾ ಕಾರ್ಯದರ್ಶಿ ಪ್ರಸನ್ನಕುಮಾರ್ ಅವರು ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಸುರೇಶ್ ಅವರಿಗೆ ಶುಕ್ರವಾರ ಪ್ರಾಧಿಕಾರದ ಸಭಾಂಗಣದಲ್ಲಿ ಬಡಾವಣೆಗಳ ದಾಖಲೆ ಹಸ್ತಾಂತರಿಸಿದರು. ವಿಶೇಷ ತಹಸೀಲ್ದಾರ್ ರಾಜಶೇಖರ, ಹೂಟಗಳ್ಳಿ ನಗರಸಭೆ ಆಯುಕ್ತ ಚಂದ್ರಶೇಖರ್, ಪಾಲಿಕೆ ವಲಯಾಧಿಕಾರಿ ಟಿ.ಎಸ್. ಸತ್ಯಮೂರ್ತಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮುಸ್ಲಿಮರ ವಿರುದ್ಧ ಹೇಳಿಕೆ

ವಿಚಾರಣೆಗೆ ಹಾಜರಾಗುವಂತೆ ಚಂದ್ರಶೇಖರನಾಥ ಸ್ವಾಮೀಜಿಗೆ ನೋಟಿಸ್

ಬೆಂಗಳೂರು: ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡಬೇಕು ಎಂಬ ಒಕ್ಕಲಿಗ ಮಠದ ಚಂದ್ರಶೇಖರನಾಥ ಶ್ರೀಗಳ ಹೇಳಿಕೆ ಸದ್ಯ ವಿವಾದ ಸೃಷ್ಟಿಸಿದೆ. ಅವರ ವಿರುದ್ಧ ಎಫ್‌ಐಆರ್ ಕೂಡ ದಾಖಲಾಗಿದೆ. ಇದೀಗ ಡಿ.2 ರಂದು ಬೆಳಗ್ಗೆ 11ಕ್ಕೆ ವಿಚಾರಣೆಗೆ ಹಾಜರಾಗುವಂತೆ ಬೆಂಗಳೂರಿನ ಉಪ್ಪಾರಪೇಟೆ ಠಾಣೆ ಪೊಲೀಸರಿಂದ ನೋಟಿಸ್ ಜಾರಿ ಮಾಡಲಾಗಿದೆ.



ಚಂದ್ರಶೇಖರನಾಥ ಸ್ವಾಮೀಜಿ ವಿರುದ್ಧ ಬಿಎನ್‌ಎಸ್ ಸೆಕ್ಷನ್ 299ರ ಅಡಿಯಲ್ಲಿ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಚಂದ್ರಶೇಖರನಾಥ ಸ್ವಾಮೀಜಿ ವಿವಾದದ ಕಿಡಿ ಹೊತ್ತಿಸಿದ್ದಾರೆ. ವಕ್ಫ್ ವಿರುದ್ಧ ವಾಗ್ದಾಳಿ ನಡೆಸುವ ಭರದಲ್ಲಿ, ಮತದಾನದ ಹಕ್ಕಿಗೆ ಕೈ ಹಾಕಿದ್ದಾರೆ. ಮುಸ್ಲಿಮರಿಗೆ

■ 6ನೇ ಪುಟಕ್ಕೆ

ಮೈಸೂರು ಮಿತ್ರ

ಜೆಎಸ್ಎಸ್ ಸಂಗೀತ ಸಭಾ ಟ್ರಸ್ಟ್‌ನ ನೂತನ ಅಧ್ಯಕ್ಷರಾಗಿ ರಮೇಶ್ ಕಣ್ಣನ್ ಆಯ್ಕೆ


ಕೆ.ಕಣ್ಣನ್

ಮೈಸೂರು, ನ. 29–ಮೈಸೂರಿನ ಖ್ಯಾತ ಉದ್ಯಮಿ ರಮೇಶ್ ಕೆ.ಕಣ್ಣನ್ ಅವರನ್ನು ಜೆಎಸ್ಎಸ್ ಸಂಗೀತ ಸಭೆಯ ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ರಮೇಶ್ ಕಣ್ಣನ್ ಅವರು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವೀಧರರು. ಮೈಸೂರಿನ ಪ್ರಮುಖ ಉದ್ಯಮವಾದ ಮೆ. ಕೇನ್ಸ್ ಟೆಕ್ನಾಲಜೀಸ್ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾರೆ. 1988ರಲ್ಲಿ ಈ ಕಂಪನಿ ಪ್ರಾರಂಭಿಸಿದರು. ಇಸ್ರೋ ಸಂಸ್ಥೆಯ ಚಂದ್ರಯಾನ–3ಕ್ಕೆ ಅಗತ್ಯವಾದ ಪ್ರಮುಖ ಬಿಡಿಭಾಗಗಳನ್ನು ಸರಬರಾಜು ಮಾಡಿದ ಹೆಗ್ಗಳಿಕೆ ಈ ಸಂಸ್ಥೆಗಿದೆ. ಮೂರು ದಶಕಗಳಿಗೂ ಹೆಚ್ಚು ಕಾಲ ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಇವರು ಈ ಕ್ಷೇತ್ರದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದಾರೆ. ರಮೇಶ್ ಕಣ್ಣನ್‌ರವರು ಯಶಸ್ವಿ ಉದ್ಯಮಿಗಳಷ್ಟೇ ಅಲ್ಲದೆ, ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ ಇವುಗಳ ಬಗೆಗೆ ಅಪಾರ ಆಸಕ್ತಿಯುಳ್ಳವರು. ಮೈಸೂರಿನಲ್ಲಿ ಕಲಾಂಡಿಕ ಅಕ್ಯಾಡೆಮಿ ಆಫ್ ಆರ್ಟ್ಸ್ ಸಂಸ್ಥೆಯನ್ನು ಸ್ಥಾಪಿಸಿರುವುದು ಹಾಗೂ ಅದರ ವತಿಯಿಂದ ಇತ್ತೀಚೆಗೆ 'ವಸುಂಧರ ಭವನ' ಸಭಾಂಗಣವನ್ನು ನಿರ್ಮಿಸಿರುವುದು ಅವರ ಕಲಾಪ್ರೇಮಕ್ಕೆ ಸಾಕ್ಷಿಯಾಗಿದೆ. ಅವರ ನೇತೃತ್ವದಲ್ಲಿ ಸಂಗೀತ ಸಭೆಯು ಅಭಿವೃದ್ಧಿ ಪಥದಲ್ಲಿ ಸಾಗಬೇಕೆಂಬುದು ಎಲ್ಲರ ಆಶಯವಾಗಿದೆ. ಸಂಗೀತ ಸಭೆ ಪ್ರಾರಂಭವಾದಾಗಿನಿಂದ ಹೆಚ್.ಗಂಗಾಧರನ್ ಮತ್ತು ಕೆ.ವಿ.ಮೂರ್ತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಭಗವದ್ಗೀತಾ ಕಂಠಪಾಠ ಸ್ಪರ್ಧೆ

ಮೈಸೂರು, ನ.29– ಗೀತಾ ಜಯಂತಿ ಪ್ರಯುಕ್ತ ಭಗವದ್ಗೀತಾ ಕಂಠಪಾಠ ಸ್ಪರ್ಧೆಯನ್ನು ನರ್ಸರಿ, ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಾಲೆ, ಕಾಲೇಜು ವಿದ್ಯಾರ್ಥಿಗಳಿಗಾಗಿ ಡಿ. 22 ರಂದು ಬೆಳಗ್ಗೆ 10 ಗಂಟೆಗೆ ಲಕ್ಷ್ಮೀಕಾಂತನಗರದ ದಿವ್ಯಧ್ವನಿ ಸಂಪದ ಆವರಣದಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಡಿ. 19 ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 98450 98426 ಸಂಪರ್ಕಿಸಬಹುದು.

ಸಾಹಿತಿ ಅ.ರಾ.ಮಿತ್ರರಿಗೆ ಇಂದು ಮುದ್ದುರಾಮ ಪ್ರಶಸ್ತಿ ಪ್ರದಾನ

ಚೌಪದಿಗಳ ಹತ್ತು ಸಂಪುಟಗಳ ಲೋಕಾರ್ಪಣೆ

ಮೈಸೂರು, ನ. 29– ಮೈಸೂರಿನ ಮುದ್ದುರಾಮ ಪ್ರತಿಷ್ಠಾನ, ಬೆಂಗಳೂರಿನ ಅಭಿನವ ಮತ್ತು ಬೆಂಗಳೂರು ಭಾರತೀಯ ವಿದ್ಯಾಭವನದ ಸಂಯುಕ್ತ ಆಶ್ರಯದಲ್ಲಿ ನಾಳೆ (ನ.30) ಬೆಳಗ್ಗೆ 10.30ಕ್ಕೆ ಭಾರತೀಯ ವಿದ್ಯಾಭವನದ ಖಿಂಚ ಸಭಾಂಗಣದಲ್ಲಿ ಮುದ್ದುರಾಮ ಪ್ರಶಸ್ತಿ ಪ್ರದಾನ, ಮುದ್ದುರಾಮ ಚೌಪದಿಗಳ ಹತ್ತು ಸಂಪುಟಗಳ ಲೋಕಾರ್ಪಣೆ ಸಮಾರಂಭ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸುವರು. ಹಿರಿಯ ಸಾಹಿತಿ ಪ್ರೊ ಅ.ರಾ.ಮಿತ್ರ ಅವರಿಗೆ ಮುದ್ದುರಾಮ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅಂಕಣಕಾರ, ಶಿಕ್ಷಣ –ಸಂವಹನ ತಜ್ಞ ಡಾ. ಗುರುರಾಜ ಕರಜಗಿ ಮುದ್ದುರಾಮ ಸಂಪುಟಗಳನ್ನು ಕುರಿತು ಮಾತನಾಡುವರು.

ವಿಶ್ರಾಂತ ಪ್ರಾಚಾರ್ಯ ಪ್ರೊ.ಕೃಷ್ಣೇಗೌಡ ಪ್ರಶಸ್ತಿ ಪುರಸ್ಕೃತರನ್ನು ಕುರಿತು ಮಾತನಾಡುವರು. ಮುಖ್ಯ ಅತಿಥಿಗಳಾಗಿ ಕನ್ನಡ ಪೂಜಾರಿ, ಪ್ರಸಿದ್ಧ ವಾಗ್ಮಿ–ಚಿಂತಕರಾದ ಹಿರೇಮಗಳೂರು ಕಣ್ಣನ್, ಮುದ್ದುರಾಮ ಪ್ರತಿಷ್ಠಾನ ಅಧ್ಯಕ್ಷ ಕೆ.ಸಿ.ಶಿವಪ್ಪ ಭಾಗವಹಿಸುವರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ.

ನಟನ ರಂಗಶಾಲೆಯಲ್ಲಿ 'ಶ್ರೀಮನ್ಮಹೀಶೂರ ರತ್ನ ಸಿಂಹಾಸನ' ನಾಟಕ ಪ್ರದರ್ಶನ



ಮೈಸೂರು, ನ. 29–ಮೈಸೂರು ಮತ್ತು ಸುತ್ತಮುತ್ತಲಿನ ಸದಭಿರುಚಿಯ, ಸಹೃದಯ ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಡಿ.1ರಂದು ಸಂಜೆ 6.30ಕ್ಕೆ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ನಟನದ 2024–25ನೇ ಸಾಲಿನ ರಂಗಭೂಮಿ ಡಿಪ್ಲೋಮಾ ವಿದ್ಯಾರ್ಥಿಗಳ ಮೊದಲ ಅಭ್ಯಾಸಿ ಪ್ರಯೋಗ ಸಂಸ ವಿರಚಿತ ವಿಗಡ ವಿಕ್ರಮರಾಯ ಮತ್ತು ಮಂತ್ರಶಕ್ತಿ ನಾಟಕಗಳ ಸಂಕಲಿತ ರೂಪ 'ಶ್ರೀ ಮನ್ಮಹೀಶೂರ ರತ್ನ ಸಿಂಹಾಸನ' ನಾಟಕವು ನಟನ ರಂಗಶಾಲೆಯ ಪ್ರಾಂಶುಪಾಲರೂ, ಯುವ ರಂಗ ನಿರ್ದೇಶಕರೂ ಆದ ಮೇಘ ಸಮೀರ ಅವರ ವಿನ್ಯಾಸ ಮತ್ತು ನಿರ್ದೇಶನದಲ್ಲಿ ಪ್ರದರ್ಶನಗೊಳ್ಳಲಿದೆ. ಮಾಹಿತಿಗಾಗಿ 7259537777, 9480468327, 9845595505 ಸಂಪರ್ಕಿಸಬಹುದು.

ಭಕ್ತ ಕನಕದಾಸರ ಜಯಂತ್ಯುತ್ಸವ



ಶ್ರೀ ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತ್ಯೋತ್ಸವ ಸಮಿತಿ ವತಿಯಿಂದ ಮೈಸೂರಿನ ಕನಕಭವನದಲ್ಲಿ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರದಲ್ಲಿ ಮೈಸೂರು ಜಿಲ್ಲೆಯ ಮಾಕನಹುಂಡಿ ಗ್ರಾಮದ ಸಿಂಚನಾ ಅವರಿಗೆ(ಪಿಯುಸಿ ವಿಜ್ಞಾನ ವಿಭಾಗ 95%) ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪ್ರಶಸ್ತಿ ಪತ್ರ, ನಗದು ಬಹುಮಾನ ನೀಡಿ ಗೌರವಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯರಾದ ಎಂ.ಶಿವಣ್ಣ, ಜೆ.ಗೋಪಿ, ಮಹದೇವೇಗೌಡ, ಕುರುಬಾರಹಳ್ಳಿ ಪ್ರಕಾಶ್, ಧನಂಜಯ ಉಪಸ್ಥಿತರಿದ್ದರು.

ಶ್ರೀ ವೀರನಗೆರೆ ಮನೆ ಮಂಚಮ್ಮ ದೇವಿ ವಾರ್ಷಿಕೋತ್ಸವ

ಮೈಸೂರು, ನ. 29–ಮೈಸೂರಿನ ಲಷ್ಕರ್ ಮೊಹಲ್ಲಾ, ವೀರನಗೆರೆ ಶ್ರೀ ಶ್ರೀ ವಿಶ್ವಕರ್ಮ ಸೀತಾರಾಮಮಂದಿರ ಮತ್ತು ಶ್ರೀ ಮನೆಮಂಚಮ್ಮ ದೇವಸ್ಥಾನದ ಸಂಯುಕ್ತ ಆಶ್ರಯದಲ್ಲಿ ಡಿ.1ರಂದು ಶ್ರೀ ವೀರನಗೆರೆ ಮನೆ ಮಂಚಮ್ಮ ದೇವಿ ವಾರ್ಷಿಕೋತ್ಸವ ಶ್ರೀ ವಿಭೂಷಿತ ಶ್ರೀ ಶಿವ ಸುಜ್ಞಾನತೀರ್ಥ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಉಪ ಮೇಯರ್ ಸಂದೇಶ್ ಸ್ವಾಮಿ, ಶಿಲ್ಪಿ ಅರುಣ್ ಯೋಗಿರಾಜ್ ಭಾಗವಹಿಸಲಿದ್ದಾರೆ.

ಮನ್ವಿತಾ ಪಿ.ಗೆ ಪ್ರತಿಭಾ ಪುರಸ್ಕಾರ



ಮೈಸೂರಿನ ಎನ್‌ಐಇ ಕಾಲೇಜಿನ ನೌಕರರ ಸಂಘದ ಬೋಧಕೇತರರ ಸಂಘದ ವತಿಯಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ (625/597, ಶೇ.95.56) ಮನ್ವಿತಾ ಪಿ. ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಚಿತ್ರದಲ್ಲಿ ವಿದ್ವಾಂಸ ಪ್ರೊ.ಶೆಲ್ವಪಿಳ್ಳೆ ಅಯ್ಯಂಗಾರ್, ಉಪನ್ಯಾಸಕ ಶಿಶಿರಂಜನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಎನ್‌ಐಇ ಕಾಲೇಜಿನ ಕುಲಸಚಿವರಾದ ಮಣಿ, ಸಂಘದ ಅಧ್ಯಕ್ಷ ಸಿಂಗಯ್ಯ, ಸುರೇಶ್, ಪಾಪಣ್ಣ ಅವರನ್ನು ಕಾಣಬಹುದು.

ಕಾಂಗ್ರೆಸ್ ಶಾಸಕರಿಗೆ ತಲಾ 25 ಕೋಟಿ, ವಿಪಕ್ಷ ಶಾಸಕರಿಗೆ 10 ಕೋಟಿ ರೂ. ಅನುದಾನ ಹಂಚಿಕೆ


ಗೃಹ ಸಚಿವ ಡಾ.ಜಿ.ಪರಮೇಶ್ವರ

ತುಮಕೂರು, ನ.29– ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ (ಕಾಂಗ್ರೆಸ್) ಶಾಸಕರಿಗೆ ತಲಾ 25 ಕೋಟಿ ರೂ. ಅನುದಾನ ನೀಡಲು ತೀರ್ಮಾನ ಮಾಡಿದ್ದಾರೆ. ಇದರ ಜೊತೆಗೆ ವಿರೋಧ ಪಕ್ಷದ (ಬಿಜೆಪಿ, ಜೆಡಿಎಸ್) ಶಾಸಕರಿಗೂ 10 ರಿಂದ 15 ಕೋಟಿ ರೂ. ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಮಾಹಿತಿ ನೀಡಿದರು.

ತುಮಕೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಗ್ಯಾರಂಟಿಗಳನ್ನು ನೀಡುವ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಆದ್ಯತೆ ನೀಡಲಾಗುತ್ತಿದೆ. ರಾಜ್ಯದಲ್ಲಿ ನಮ್ಮ ಪಕ್ಷದ ಎಲ್ಲ ಶಾಸಕರಿಗೂ ತಮ್ಮ ಕ್ಷೇತ್ರಗಳ ಅಭಿವೃದ್ಧಿ ಮಾಡುವುದಕ್ಕೆ ಅನುಕೂಲ ಆಗುವಂತೆ ತಲಾ 25 ಕೋಟಿ ರೂ. ಅನುದಾನವನ್ನು ನೀಡುವುದಾಗಿ ಸಿಎಂ ಸಿದ್ದರಾಮಯ್ಯ ಅವರು ಭರವಸೆ ನೀಡಿದ್ದಾರೆ. ಜೊತೆಗೆ, ವಿಪಕ್ಷಗಳ ಶಾಸಕರಿಗೆ ತಲಾ 10 ಕೋಟಿ ರೂ.ಗಳಿಂದ 15 ಕೋಟಿ ರೂ.ವರೆಗೆ ಅನುದಾನ ಕೊಡಲಿದ್ದಾರೆ ಎಂದು ತಿಳಿಸಿದರು.

ಈ ಹಿಂದಿನ ಬಿಜೆಪಿ ಸರ್ಕಾರವು ಕಾಂಗ್ರೆಸ್ ಪಕ್ಷದ ಶಾಸಕರಿಗೆ ಕೇವಲ 10 ಕೋಟಿ ರೂ. ಅನುದಾನವನ್ನು ನೀಡುತ್ತಿದ್ದರು. ಆದರೆ, ತಮ್ಮ ಪಕ್ಷದ ಶಾಸಕರಿಗೆ ಮಾತ್ರ ಬರೋಬ್ಬರಿ ತಲಾ 50 ಕೋಟಿ ರೂ. ಅನುದಾನ ನೀಡಿದ್ದರು. ಆದರೆ, ಇದೀಗ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಮಗಾರಿ, ಶಂಕುಸ್ಥಾಪನೆಗಳಿವೆ. ಹಲವು ಯೋಜನೆಗಳ ಫಲಾನುಭವಿಗಳಿದ್ದಾರೆ. ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಯಾದರೆ ಜಿಲ್ಲೆಯ ಅಭಿವೃದ್ಧಿ ಸಾಧ್ಯವಾಗಲಿದೆ. ಈ ಹಿನ್ನೆಲೆಯಲ್ಲಿ ಅನುದಾನವನ್ನು ಹಂಚಿಕೆ ಮಾಡಲಿದ್ದಾರೆ. ಈ ಮೂಲಕ ರಾಜ್ಯದ ಎಲ್ಲ ಜಿಲ್ಲೆಗಳ ಅಭಿವೃದ್ಧಿಯಾದರೆ ರಾಜ್ಯ ಅಭಿವೃದ್ಧಿಯಾಗುತ್ತದೆ ಎಂಬುದು ನಮ್ಮ ದೂರದೃಷ್ಟಿಯಾಗಿದೆ. ಆದರೆ, ವಿಪಕ್ಷಗಳ ಶಾಸಕರು ತುಮಕೂರಿಗೆ ಬರುತ್ತಿರುವ ಸಿಎಂ ಸಿದ್ದರಾಮಯ್ಯ ಅವರಿಗೆ ಕಪ್ಪು ಭಾವುಟ ತೋರಿಸಲು ಮುಂದಾಗುತ್ತಿದ್ದು, ಅಭಿವೃದ್ಧಿ ಕಾರ್ಯಗಳನ್ನು ಮಾಡುವವರಿಗೆ ಇದರ ಅಗತ್ಯವಿಲ್ಲ ಎಂದು ಹೇಳಿದರು.

ನಾನು ಸಿದ್ದರಾಮಯ್ಯ ಒಟ್ಟಾಗಿದ್ದೇವೆ: ಹಾಸನದಲ್ಲಿ ಡಿ.5ರಂದು ನಡೆಯುವ ಕಾರ್ಯಕ್ರಮದ ಕುರಿತು ನನ್ನ ಪ್ರತಿಕ್ರಿಯೆಯನ್ನು ಖಾಸಗಿ ಸುದ್ದಿ ವಾಹಿನಿಯೊಂದು ತಪ್ಪಾಗಿ ಸುದ್ದಿ ಪ್ರಸಾರ ಮಾಡಿದೆ. ಹಾಸನದ ಕಾರ್ಯಕ್ರಮದ ಕುರಿತು ನನ್ನ ಪ್ರತಿಕ್ರಿಯೆ ಕೇಳಿದಾಗ, ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳಿದ್ದೇನೆ. ಆದರೆ, ಇದನ್ನು ಪರಮೇಶ್ವರ ಮತ್ತು ಸಿದ್ದರಾಮಯ್ಯ ಅವರು ಎಣ್ಣೆಸೀಗೆಕಾಯಿ ಎಂದು ತಪ್ಪಾಗಿ ಸುದ್ದಿ ಪ್ರಸಾರ ಮಾಡಲಾಗಿದೆ. ನಾನು ಮತ್ತು ರಾಜಣ್ಣ ಮಾತಾಡಿಕೊಂಡು, ಮೊದಲು ತುಮಕೂರಿನಲ್ಲಿ ಸ್ವಾಭಿಮಾನ ಸಮಾವೇಶ ಮಾಡಲು ಚಿಂತನೆ ನಡೆಸಿ, ಎರಡು ಸಭೆಗಳನ್ನು ಮಾಡಿದ್ದೇವೆ. ನಾನು ಮತ್ತು ಸಿದ್ದರಾಮಯ್ಯ ಅವರು ಯಾವಾಗಲೂ ಒಟ್ಟಿಗೆ ಕೆಲಸ ಮಾಡಿಕೊಂಡು ಬಂದಿದ್ದೇವೆ. ಈಗಲೂ ಒಟ್ಟಿಗಿದ್ದೇವೆ, ಮುಂದೆಯೂ ಒಟ್ಟಿಗೆ ಕೆಲಸ ಮಾಡುತ್ತೇವೆ. ನಮ್ಮ ಮಧ್ಯೆ ಯಾವ ಭಿನ್ನಾಭಿಪ್ರಾಯಗಳಿಲ್ಲ. ಯಾವ ಎಣ್ಣೆ ಸೀಗೆಕಾಯಿಯು ಇಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಸ್ಪಷ್ಟಪಡಿಸಿದರು.

ಪ್ರಿಯಾಂಕ ವಾದ್ರಾ ಅಭಿನಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ


ವಯನಾಡು ಲೋಕಸಭಾ ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದರು.

ಬೆಂಗಳೂರು, ನ.29(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲಿಂದು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಹಾಗೂ ಇತ್ತೀಚೆಗೆ ನಡೆದ ವಯನಾಡು ಲೋಕಸಭಾ ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಭೇಟಿ ಮಾಡಿ ಅಭಿನಂದಿಸಿದರು.


ಸಂಸತ್ ಭವನದಲ್ಲಿನ ಲೋಕಸಭೆಯ ಪ್ರತಿಪಕ್ಷದ ನಾಯಕರ ಕಚೇರಿಯಲ್ಲಿ ರಾಹುಲ್ ಗಾಂಧಿ ಅವರನ್ನು ಸಿದ್ದರಾಮಯ್ಯ ಭೇಟಿ ಮಾಡಿದರು. ಕರ್ನಾಟಕ ವಿಧಾನ ಸಭೆಯ ಮೂರು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಗೆಲುವು ಸಾಧಿಸಿರುವುದಕ್ಕೆ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದರು.

ಸಿಎಂ ಇರೋ ಕೆಲಸ ಮೊದಲು ಮಾಡಲಿ; ರಾಜ್ಯಪಾಲರ ಕೆಲಸ ಯಾಕೆ ಕಡಿತ ಮಾಡ್ತೀರಾ?


ಅಶ್ವಥ್‌ನಾರಾಯಣ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿವಿ ಕುಲಾಧಿಪತಿ ಅಧಿಕಾರವನ್ನು ರಾಜ್ಯಪಾಲರಿಂದ ಸಿಎಂಗೆ ನೀಡಿರುವ ಸಂಪುಟ ನಿರ್ಧಾರವನ್ನು ಮಾಜಿ ಡಿಸಿಎಂ ಅಶ್ವಥ್‌ನಾರಾಯಣ ಖಂಡಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಲೇ ಪಾಪ ಮುಖ್ಯಮಂತ್ರಿಗಳಿಗೆ ಇರುವುದನ್ನು ನೋಡಲು ಸಮಯ ಇಲ್ಲ. ಇದನ್ನೆಲ್ಲಾ ಯಾಕೆ ತೆಗೆದುಕೊಳ್ಳುತ್ತೀರಾ? ಶಿಕ್ಷಣದ ವಿರೋಧಿಗಳು ನೀವು, ನಿಮಗೆ ರಾಷ್ಟ್ರೀಯ ಶಿಕ್ಷಣ ನೀತಿ ಬೇಡ, ಬಡವರಿಗೆ ನ್ಯಾಯ ಕೊಡುವುದು ಬೇಡ. ಸಿದ್ದರಾಮಯ್ಯನವರೇ ನೀವು ಮತ್ತು ನಿಮ್ಮ ಸಂಪುಟ ಸಹೋದ್ಯೋಗಿಗಳು ನೀವು ಪಡೆದ ಶಿಕ್ಷಣದಿಂದ ಇಂದು ಎತ್ತರದ ಸ್ಥಾನದಲ್ಲಿದ್ದೀರಿ. ನೀವು ಕುಲಾಧಿಪತಿಗಳಾಗಿ ಮಾಡುವುದು ಏನೂ ಇಲ್ಲ. ಇಂತಹ ಪ್ರಯತ್ನ, ರಾಜಕೀಯ ಬಿಟ್ಟುಬಿಡಿ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.11.2024 ಶನಿವಾರ, ಮಳೆ ನಕ್ಷತ್ರ: ಅನೂರಾಧ, 19.11.2024 ರಿಂದ 01.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೀವರಕ್ಷಾ ಸಂಸ್ಥೆ ಮತ್ತು ರೋಟರಿ ಸಂಸ್ಥೆಗಳು :** ಸಂಚಾರ ನಿಯಮ ಪಾಲನೆ ಕುರಿತು ಗ್ರಾಮೀಣ ಜನರಲ್ಲಿ ಅರಿವು ಮೂಡಿಸಲು ಬೈಕಾಥಾನ್ ರ್‍ಯಾಲಿ, ಸ್ಥಳ: ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 7ಕ್ಕೆ

■ **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಕಿನ್‌ಸನ್ಸ್ ಕಾಯಿಲೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ನವ ಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್:** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಪುಸ್ತಕ ಮಾರಾಟ, ಸ್ಥಳ: ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್ ಬೆಳಗ್ಗೆ 9.30 ರಿಂದ.

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಬೆಳಗ್ಗೆಯಿಂದ.

■ **ಶ್ರೀ ವ್ಯಾಸತೀರ್ಥ ವಿದ್ಯಾಪೀಠ :** ವಿದ್ಯಾರ್ಥಿ ಪರಿಷದ್, ವಿಶ್ವಪಾವನ ಯುವ ವಿಚಾರಗೋಷ್ಠಿ, ಉದ್ಘಾಟನೆ : ಶ್ರೀ 1008 ಶ್ರೀ ವಿದ್ಯಾಶ್ರೀಷ ತೀರ್ಥ ಶ್ರೀಪಾದಂಗಳವರು, ಮುಖ್ಯ ಅತಿಥಿಗಳು: ತಿರುಪತಿ ನ್ಯಾಷನಲ್ ಸಂಸ್ಕೃತ ವಿವಿ ಕುಲಪತಿ ಜಿಎಸ್‌ಆರ್ ಕೃಷ್ಣಮೂರ್ತಿ, ಪ್ರಾಸ್ತಾವಿಕ ಭಾಷಣ : ಶ್ರೀ ವ್ಯಾಸತೀರ್ಥ ವಿದ್ಯಾಪೀಠ ಪ್ರಿನ್ಸಿಪಾಲ್ ವಿದ್ವಾನ್ ಎಸ್. ಸುಘೋಷಚಾರ್ಯ, ಉಪಸ್ಥಿತರು: ಡಿ.ಕೆ. ಶ್ರೀಹರಿ, ಮಹಿಧಾರಾ, ಸ್ಥಳ: ಶ್ರೀ ವಿದ್ಯಾತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆಯ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ಮಹಾವೀರ ವಿದ್ಯಾ ಮಂದಿರ (ಶ್ರೀ ಜೈನ್ ಎಜುಕೇಶನ್ ಸೊಸೈಟಿ) ಶಾಲೆ:** ತೆರೆದ ಮನೆ ಮತ್ತು ವಿಜ್ಞಾನ ಮೇಳ, ಮುಖ್ಯ ಅತಿಥಿಗಳು: ಡಾ.ಎನ್.ಎಂ.ಶಾಮ ಸುಂದರ್ ಹಾಗೂ ಚಾಮರಾಜನಗರದ ಗ್ರಾವಿಟಿ ಸೈನ್ಸ್ ಫೌಂಡೇಷನ್ ಕಾರ್ಯದರ್ಶಿ ಎ.ಎಸ್.ಅಭಿಷೇಕ್, ಅಧ್ಯಕ್ಷತೆ: ಶ್ರೀ ಜೈನ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಡಾ.ಬಾಹುಬಲ್ ಜಿ.ನಗಾವಿ, ಸ್ಥಳ: ಮಹಾವೀರ ವಿದ್ಯಾಮಂದಿರ, ಶ್ರೀರಾಂಪುರ ಬೆಳಗ್ಗೆ 10ರಿಂದ

■ **ಬೇಸ್ ಪಿಯು ಕಾಲೇಜು :** ಉತ್ಸವ–2024–25, ಬೀಳ್ಕೊಡುಗೆ ಸಮಾರಂಭ, ಮುಖ್ಯ ಅತಿಥಿಗಳು : ಡಾ. ಲೆಫ್ಟಿನೆಂಟ್ ಕರ್ನಲ್ ಎಸ್.ಎನ್. ಪ್ರಸಾದ್, ಡಾ. ಕಾಮಿನಿ ಕುರ್‌ಪಾದ್, ಅನಂತಕುಮಾರ್ ಕುಲಕರ್ಣಿ, ಸ್ಥಳ: ಜೆ.ಕೆ. ಮೈದಾನದ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಕಸ್ತೂರಿ ಸಿರಿಗನ್ನಡ ವೇದಿಕೆ, ಜಿಲ್ಲಾ ಘಟಕ, ಕೀರ್ತಿ ಯುವತಿ ಮಹಿಳಾ ಮಂಡಳಿ :** ಕನ್ನಡ ರಾಜ್ಯೋತ್ಸವ, ಸಾಧಕರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಆಶೀರ್ವಚನ : ಶ್ರೀ ಮುಮ್ಮಡಿ ಷಡಕ್ಷರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ : ಮಾಜಿ ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ, ಪ್ರಸ್ತಾವನೆ : ವೇದಿಕೆ ಅಧ್ಯಕ್ಷೆ ಶ್ರೀಮತಿ ಕೆ. ಮಂಜುಳಾ ರಮೇಶ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ

■ **ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ :** ಉಸಿರಾಯಿತು ಕನ್ನಡ ಬದುಕಾಗಲಿ ಕನ್ನಡ, ಕನ್ನಡ ರಾಜ್ಯೋತ್ಸವ ಸಂಭ್ರಮಾಚರಣೆ, ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಸಂಗೀತ ವಿವಿ ಕುಲಪತಿ ಡಾ. ನಾಗೇಶ್ ವಿ. ಬೆಟ್ಟಕೋಟೆ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಎಚ್.ಎಸ್. ಗೋಪಿನಾಥ್, ಸಂಗೀತ ನಿರ್ದೇಶಕ ಡಾ. ಹಂಸಲೇಖ, ಪ್ರಧಾನ ಭಾಷಣ : ಸಾಹಿತಿ ಪ್ರೊ. ಕಾಳೇಗೌಡ ನಾಗವಾರ, ಅತಿಥಿಗಳು : ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಕುಲಸಚಿವ ಪ್ರೊ. ಜಿ.ವಿ. ವೆಂಕಟರಮಣ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು: ವಿದುಷಿ ಡಾ. ವಸುಂಧರಾ ದೊರೆಸ್ವಾಮಿ, ಸಾಹಿತಿ ಡಾ. ಕೆ. ಮರುಳಸಿದ್ದಪ್ಪ, ವಿದ್ವಾನ್ ಪ್ರೊ. ಎಸ್.ಸಿ. ಶರ್ಮ, ಡಾ. ನಾಗರಾಜ ರಾವ್ ಹವಾಲ್ದಾರ್, ಜಾನಪದ ವಿದ್ವಾಂಸ ಮುಖವೀಣೆ ಅಂಜನಪ್ಪ, ಸ್ಥಳ: ವಿಶ್ವವಿದ್ಯಾಲಯ ಆವರಣ, ಬೆಳಗ್ಗೆ 10ಕ್ಕೆ.

■ **ಸೇಂಟ್ ಜೋಸೆಫ್ ಕಾಲೇಜ್ ಆಫ್ ಎಜುಕೇಷನ್ :** 52ನೇ ಬಿ.ಇಡಿ ತಂಡದ ಪದವಿ ಪ್ರದಾನ ಸಮಾರಂಭ, ಉಪಸ್ಥಿತರು : ಮೈಸೂರು ಧರ್ಮಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಧರ್ಮಾಧ್ಯಕ್ಷ ಬರ್ನಾಡ್ ಮೊರಸ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಎಂಡಿಇಎಸ್‌ನ ಕಾರ್ಯದರ್ಶಿ ಎಡ್ವರ್ಡ್ ವಿಲಿಯಂ ಸಲ್ಡಾನ, ಖಜಾಂಚಿ ನವೀನ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ ಸೆಬಿ ಮಾವೆಲಿ, ಕಾಲೇಜು ಪ್ರಾಂಶುಪಾಲರಾದ ಡಾ. ಪ್ರಿಯಾ ಮ್ಯಾಥ್ಯೂ, ಸ್ಥಳ: ಕಾಲೇಜು ಆವರಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ.

■ **ದಲಿತ ಸಾಹಿತ್ಯ ಪರಿಷತ್ತು, ಜಿಲ್ಲಾ ಘಟಕ, ಮೈವಿವಿ ಸಂಶೋಧಕರ ಸಂಘ:** ಡಾ. ರಾಜಣ್ಣ ಅವರ ಸಂಶೋಧನಾ ಕೃತಿ ಮ.ನ. ಜವರಯ್ಯ ಅವರ ಸೃಜನಶೀಲ ಸಾಹಿತ್ಯದ ಒಳನೋಟಗಳು ಲೋಕಾರ್ಪಣಾ ಸಮಾರಂಭ, ಕೃತಿ ಬಿಡುಗಡೆ: ಡಾ. ಎಸ್.ತುಕಾರಾಮ್, ಕೃತಿ ಕುರಿತು: ಗಾಂಧಿ ಭವನ ನಿರ್ದೇಶಕ ಡಾ. ಎಸ್. ನರೇಂದ್ರಕುಮಾರ್, ಅಧ್ಯಕ್ಷತೆ: ಅಂಕಣಕಾರ ನಾ. ದಿವಾಕರ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.45ಕ್ಕೆ.

■ **ಗಾಯತ್ರಿಪುರಂ ಶಿಕ್ಷಣ ಸಂಸ್ಥೆ, ಉದಯಗಿರಿ ಕನ್ನಡ ಸಂಘ:** ಕನ್ನಡ ರಾಜ್ಯೋತ್ಸವ ಆಚರಣೆ, ಧ್ವಜಾರೋಹಣ: ಶಾಸಕ ಕೆ. ಹರೀಶ್‌ಗೌಡ, ಉದ್ಘಾಟನೆ: ಸಾಹಿತಿ ಡಾ. ಸಿಪಿಕೆ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅತಿಥಿಗಳು: ಡಾ.ಹೆಚ್.ವಿ. ಬೆಟ್ಟಸ್ವಾಮಿ, ವಿದ್ಯಾಸಾಗರ ಕದಂಬ, ಸ್ಥಳ: ಯಾದವಗಿರಿ, ಧೋಬಿ ಘಾಟ್ ಹತ್ತಿರ, ಬೆಳಗ್ಗೆ 11ಕ್ಕೆ.

■ **ಜೈ ಭುವನೇಶ್ವರಿ ಸೇವಾ ಟ್ರಸ್ಟ್ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ಸಾಧಕರಿಗೆ ಸನ್ಮಾನ, ಉದ್ಘಾಟನೆ: ಸಾಹಿತಿ ಬನ್ನೂರು ರಾಜು, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ತಿಪ್ಪಯ್ಯ, ಮುಖ್ಯ ಅತಿಥಿಗಳು : ಅರಕಲವಾಡಿ ನಾಗೇಂದ್ರ, ಸ್ಥಳ:ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಮೈಸೂರು ಜಿಲ್ಲಾ ಚಿನ್ನ–ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘ :** ಕನ್ನಡ ರಾಜ್ಯೋತ್ಸವ, ಉಚಿತ ಆರೋಗ್ಯ ತಪಾಸಣಾ ಶಿಬಿರ, ಉದ್ಘಾಟನೆ : ಇಳೈ ಆಳ್ವಾರ್ ಸ್ವಾಮೀಜಿ, ಪುಷ್ಪಾರ್ಚನೆ : ನಾಗರಾಜ್ ಭೈರಿ, ಆರಕ್ಷಕ ನಿರೀಕ್ಷಕ ಕೆ.ಆರ್. ಪ್ರಸಾದ್, ಮುಖ್ಯ ಅತಿಥಿಗಳು : ವೈದ್ಯಕೀಯ ಅಧೀಕ್ಷಕರಾದ ಡಾ. ಹೆಚ್.ಪಿ. ಶೋಭಾ, ಡಾ. ನಂದೀಶ್ ಕುಮಾರ್ ಕೆ.ಸಿ., ಡಾ. ಚೇತನ್, ಬಿ. ರವಿಪ್ರಕಾಶ್, ಪೂರ್ಣಚಂದ್ರ ತೇಜಸ್ವಿ, ಎಂ. ಚಂದ್ರಶೇಖರ್, ತೇಜೇಶ್ ಲೋಕೇಶ್‌ಗೌಡ, ಸ್ಥಳ: ರವಿಪ್ರಕಾಶ್ ಕಾಂಪ್ಲೆಕ್ಸ್, ಅಶೋಕ ರಸ್ತೆ, ಬೆಳಗ್ಗೆ 10 ರಿಂದ.

■ **ಭಾರತೀಯ ಸ್ಟೇಟ್ ಬ್ಯಾಂಕ್ :** ಬೃಹತ್ ಗೃಹ ಮತ್ತು ಕಾರು ಸಾಲಗಳ ಉತ್ಸವ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು: ಕ್ರೆಡಾಯ್ ಅಧ್ಯಕ್ಷ ಶ್ರೀಹರಿ, ಜೆಎಸ್ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಬೆಟಸೂರು ಮಠ, ಪುಟ್ಟಸುಬ್ಬಪ್ಪ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 10 ರಿಂದ.

■ **ಪತ್ರಿಕೋದ್ಯಮ, ಸಮೂಹ ಸಂವಹನ ಅಧ್ಯಯನ ವಿಭಾಗ:** ಕನ್ನಡ ರಾಜ್ಯೋತ್ಸವ ಆಚರಣೆ, ಉದ್ಘಾಟನೆ: ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು, ಅಧ್ಯಕ್ಷತೆ: ವಿಭಾಗದ ಅಧ್ಯಕ್ಷೆ ಪ್ರೊ.ಎಂ.ಎಸ್.ಸಪ್ನ, ಮುಖ್ಯ ಅತಿಥಿಗಳು: ಕೆ.ದೀಪಕ್, ಎಂ.ಚಂದ್ರಶೇಖರ್, ಸೋಸಲೆ ಸಿದ್ದರಾಜು, ಸ್ಥಳ:ಪತ್ರಿಕೋದ್ಯಮ ವಿಭಾಗ, ಬೆಳಗ್ಗೆ 10.30ಕ್ಕೆ.

■ **ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ :** ಕರಾಮುವಿವಿಯಲ್ಲಿ ನಡೆಯುತ್ತಿರುವ ಅನಗತ್ಯ ನೇಮಕಾತಿಯ ವಿರುದ್ಧ ಪತ್ರ ಚಳವಳಿ, ಸ್ಥಳ: ಮಹಾನಗರ ಪಾಲಿಕೆ ಎದುರು, ಬೆಳಗ್ಗೆ 11.30ಕ್ಕೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ :** ಬಹುಮಾನ ವಿತರಣೆ, ಬಹುಮಾನ ವಿತರಣೆ: ಸಹಕಾರ ಸಂಘಗಳ ಜಂಟಿ ನಿಬಂಧಕ ಸಿ. ಪ್ರಸಾದ್ ರೆಡ್ಡಿ, ಅಧ್ಯಕ್ಷತೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ: ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣ, ಮಧ್ಯಾಹ್ನ 1.30ಕ್ಕೆ.

■ **ಮೈಸೂರು ಲಿಟರರಿ ಫೋರಮ್ ಚಾರಿಟಬಲ್ ಟ್ರಸ್ಟ್ :** ಮೈಸೂರು ಚಿಲ್ಡ್ರನ್ಸ್ ಲಿಟರೇಚರ್ ಫೆಸ್ಟಿವಲ್, ಉದ್ಘಾಟನೆ : ಶಿಲ್ಪಿ ಅರುಣ್ ಯೋಗಿರಾಜ್, ಮುಖ್ಯ ಅತಿಥಿಗಳು : ನಗರ ಪೊಲೀಸ್ ಆಯುಕ್ತರಾದ ಶ್ರೀಮತಿ ಸೀಮಾ ಲಾಟ್ಕರ್, ಸ್ಥಳ: ವಿಂಡ್ ಚಿಮ್ಸ್, ನಜರ್‌ಬಾದ್, ಮಧ್ಯಾಹ್ನ 2ಕ್ಕೆ.

■ **ಕನ್ನಡಾಂಬೆ ರಕ್ಷಣಾ ವೇದಿಕೆ:** ಕನ್ನಡಾಂಬೆ ಹಬ್ಬ ಪ್ರಯುಕ್ತ ಕನ್ನಡಾಂಬೆ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಉದ್ಘಾಟನೆ: ಶ್ರೀ ಅರ್ಜುನ ಅವಧೂತ ಗುರೂಜಿ, ಪ್ರಾಸ್ತಾವಿಕ ನುಡಿ: ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಬಿ. ರಾಜಶೇಖರ್, ಉಪಸ್ಥಿತರು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ ವಿನಯ್ ಕುಲಕರ್ಣಿ, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಸ್ಥಳ: ಹೂಟಗಳ್ಳಿ, ಸಂತೇಮಾಳ ಮೈದಾನ, ಸಂಜೆ 4ಕ್ಕೆ.

■ **ಶಾಶ್ವತ ಸೇವಾ ಶಾಲೆ :** ಕನ್ನಡ ರಾಜ್ಯೋತ್ಸವ ಆಚರಣೆ, ಅಧ್ಯಕ್ಷತೆ: ಶಾಲೆ ಕಾರ್ಯದರ್ಶಿ ಎಂ.ಆರ್. ಚೌಧರಿ, ಉದ್ಘಾಟನೆ: ನಿವೃತ್ತ ಪ್ರಾಂಶುಪಾಲ ಶಿ.ಶಿವಕುಮಾರಸ್ವಾಮಿ, ಉಪಸ್ಥಿತರು: ಪ್ರಕಾಶ್, ಗೋವಿಂದಸ್ವಾಮಿ ಗುಂಡಾಪುರ, ಮಡ್ಡೀಕೆರೆ ಗೋಪಾಲ್, ಎಂ. ಚಂದ್ರಶೇಖರ್, ಸ್ಥಳ: ಶಾಲೆ ಆವರಣ, ಸಂಜೆ 4ಕ್ಕೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಪ್ರಿಸಿಮ್ಸ್ ಆಫ್ ಸೈಕಾಲಜಿ ಇನ್ ದಿ ಲಿಟರರಿ ರೀಲ್ಮ್ ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ತಿರುಪತಿ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಮತ್ತು ಮನೋವಿಜ್ಞಾನ ವಿಭಾಗದ ಪ್ರೊ.ವಿ.ಶ್ರೀಕಾಂತರೆಡ್ಡಿ, ಮುಖ್ಯ ಅತಿಥಿಗಳು: ಕರಾಮುವಿವಿ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ, ಡೀನ್ ಪ್ರೊ.ಎನ್.ಲಕ್ಷ್ಮೀ, ಮನೋವಿಜ್ಞಾನ ಮುಖ್ಯಸ್ಥರಾದ ಡಾ.ಎಸ್.ಶ್ರೀಕಾಂತ್, ಡಾ.ಪಿ.ಮಂಜುನಾಥ, ಸ್ಥಳ:ಕಾವೇರಿ ಸಭಾಂಗಣ, ಸಂಜೆ 4.30ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಶ್ರೀಮತಿ ಅನಿತಾ ಎಂ ಆರ್, ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಡನಹಳ್ಳಿ, ಮೈಸೂರು ತಾಲೂಕು, ಸ್ಥಳ: ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.


■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಪ್ರತಿನಿತ್ಯ ಬೆಳಗ್ಗೆ ರುದ್ರಾಭಿಷೇಕ, ಸಂಜೆ 7ಕ್ಕೆ ಪ್ರಾಕಾರೋತ್ಸವ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಸ್ಪಿರಿಚ್ಯುಲೈಸಿಂಗ್ ವರ್ಕ್ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ಚುಂಚನಕಟ್ಟೆಯಲ್ಲಿಂದು, ಸಾಲಿಗ್ರಾಮ ತಾಲೂಕು

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ :** ಚುಂಚನಕಟ್ಟೆ ಜಲಪಾತೋತ್ಸವ–2024, ಘನ ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಸಚಿವರಾದ ಕೆ. ವೆಂಕಟೇಶ್, ಶಿವರಾಜ ಎಸ್. ತಂಗಡಗಿ, ಶಾಸಕರಾದ ಸಿ. ಅನಿಲ್‌ಕುಮಾರ್, ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಡಾ. ಪುಷ್ಪಾ ಅಮರನಾಥ್, ಅಧ್ಯಕ್ಷತೆ : ಶಾಸಕ ಡಿ. ರವಿಶಂಕರ್, ಮುಖ್ಯ ಅತಿಥಿಗಳು : ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಎಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಜಿ.ಡಿ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್. ಶ್ರೀವತ್ಸ, ಕೆ. ಹರೀಶ್‌ಗೌಡ, ಡಾ. ಯತೀಂದ್ರ, ಕೆ. ವಿವೇಕಾನಂದ, ಸ್ಥಳ: ಶ್ರೀರಾಮ ದೇವಸ್ಥಾನದ ಆವರಣ, ಚುಂಚನಕಟ್ಟೆ, ಸಾಲಿಗ್ರಾಮ ತಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಜೀವನ ಜೋಪಾನ–ಹೆಚ್‌ಐವಿ–ಅಂದು ಇಂದು, ಪ್ರಾಯೋಜಕರು – ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಿ. ವಿ. ಬಾಲಸಾಯಿ–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ– ಶ್ರೀಗುರು ಮಹಾಂತೇಶ್ವರ ಆಂಗ್ಲ ಮಾಧ್ಯಮ ಶಾಲೆ ಹೊಸಕೋಟೆ, ನಂಜನಗೂಡು ತಾಲೂಕು, 4.00 ನಾಟಕ–ಕನಸು ನನಸಾಯಿತು, ರಚನೆ–ಡಾ. ಕಮಲಾ ಹಂಪನಾ, ನಿರ್ಮಾಣ–ಡಾ. ಎನ್. ರಘು, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಂ. ಎನ್. ಜೋಯಿಸ್ ಅವರೊಂದಿಗೆ ಆರ್.ಕೆ. ದಿವಾಕರ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ: ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ತೋಟಗಾರಿಕೆ ಬೆಳೆಗಳ ಮಾರುಕಟ್ಟೆ ಅವಕಾಶಗಳನ್ನು ಕುರಿತ ಸಂವಾದ. ಭಾಗವಹಿಸುತ್ತಾರೆ : ಮೈಸೂರು ತಾಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ. ಕೆ.ಪಿ. ಮಂಗಳಾ ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ತನ್ವೀರ್ ಅಹಮದ್, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸುಚೇತ ಭಟ್ಟಾಚಾರ್ಯ – ಹಾಡುಗಾರಿಕೆ

ಜಮೀನು ಮಾರಿ ಕೂಲಿಗೆ ಹೋಗುವ ಸ್ಥಿತಿಗೆ ಬರಬೇಡಿ

●ರೈತರಿಗೆ ಶಾಸಕ ಜಿ.ಟಿ.ದೇವೇಗೌಡರ ಕಿವಿಮಾತು ●ದೇಶದ ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರ ಕ್ಷೇತ್ರ ಹೆಬ್ಬಾಗಿಲು ●ಕರ್ನಾಟಕದಲ್ಲಿ ಪ್ರತಿ ದಿನ 1 ಕೋಟಿ ಲೀಟರ್ ಹಾಲು ಉತ್ಪಾದನೆ ●ಹಾಲು ಉತ್ಪಾದಕರಿಗೆ ಪ್ರತಿದಿನ 28 ಕೋಟಿ ಸಂದಾಯ ●ಯುವ ಜನರು ಸಹಕಾರ ಕ್ಷೇತ್ರದಲ್ಲಿ ಹೆಚ್ಚಾಗಿ ಭಾಗಿಯಾಗಬೇಕು



ತುಮಕೂರಿನ ಹೆಚ್.ಎಂ.ಗಂಗಾಧರಯ್ಯ ಸ್ಮಾರಕ ಭವನದಲ್ಲಿ ಶುಕ್ರವಾರ ನಡೆದ ಸ್ವಯಂ ಚಾಲಿತ ಹಾಲು ಶೇಖರಣಾ ಘಟಕದ ತಂತ್ರಾಂಶದ ಅನುಷ್ಠಾನ ಮತ್ತು ಕಾರ್ಯದರ್ಶಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ 20 ಹಿರಿಯ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಶಾಸಕರೂ ಆದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡ, ಸಹಕಾರ ಸಚಿವ ಕೆ.ಎನ್.ರಾಜಣ್ಣ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ತುಮಕೂರು, ನ.29(ಬಿಎಲ್‌ಯು)– ಯಾವುದೇ ಕಾರಣಕ್ಕೂ ರೈತರು ಜಮೀನು ಮಾರಾಟ ಮಾಡಿ ಬೇರೊಬ್ಬರ ಬಳಿ ಕೂಲಿಗೆ ಹೋಗುವ ಪರಿಸ್ಥಿತಿ ತಂದುಕೊಳ್ಳಬೇಡಿ ಎಂದು ಶಾಸಕರೂ ಆದ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡರು ಕಿವಿಮಾತು ಹೇಳಿದ್ದಾರೆ.

ತುಮಕೂರಿನ ಹೆಚ್.ಎಂ.ಗಂಗಾಧರಯ್ಯ ಸ್ಮಾರಕ ಭವನದಲ್ಲಿ ಇಂದು ನಡೆದ ಸ್ವಯಂ ಚಾಲಿತ ಹಾಲು ಶೇಖರಣಾ ಘಟಕದ ತಂತ್ರಾಂಶದ ಅನುಷ್ಠಾನ ಮತ್ತು ಕಾರ್ಯದರ್ಶಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ರೈತರು ಜಮೀನು ಮಾರಾಟ ಮಾಡಿ ಅದ್ದೂರಿಯಾಗಿ ಮಕ್ಕಳ ಮದುವೆ ಮಾಡುತ್ತಾರೆ. ತರುವಾಯ ಬಂದ ಹಣವೆಲ್ಲಾ ಖಾಲಿಯಾದ ಮೇಲೆ ಬೇರೆಯವರ ಬಳಿ ಕೂಲಿ ಕೆಲಸಕ್ಕೆ ಹೋಗುವ ಪರಿಸ್ಥಿತಿಗಿಳಿಯುತ್ತಾರೆ. ಆದ ಕಾರಣ ರೈತರು ಯಾವುದೇ ಕಾರಣಕ್ಕೂ ತಮ್ಮ ಜಮೀನು ಮಾರಾಟ ಮಾಡಿ ಕೂಲಿ ಕೆಲಸಕ್ಕೆ ಹೋಗುವ ಸ್ಥಿತಿ ತಂದುಕೊಳ್ಳಬೇಡಿ ಎಂದು ಸಲಹೆ ನೀಡಿದರು.

ಭಾರತದ ಪ್ರಪ್ರಥಮ ಪ್ರಧಾನಿ ಜವಾಹರ ಲಾಲ್ ನೆಹರು ಅವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಪಂಚವಾರ್ಷಿಕ ಯೋಜನೆ ಮೂಲಕ ಸಹಕಾರ ಕ್ಷೇತ್ರದಲ್ಲಿ ಹಲವು ಯೋಜನೆ ಜಾರಿಗೊಳಿಸಿದರು. ಈ ಮೂಲಕ ಆಹಾರ, ಗೊಬ್ಬರ ಉತ್ಪಾದನೆಗೆ ಹೆಚ್ಚು ಒತ್ತು ನೀಡಿ ವ್ಯಾಪಾರ–ವಹಿವಾಟು ಹಾಗೂ ಕೈಗಾರಿಕೆಗಳ ಬೆಳವಣಿಗೆಗೆ ಉತ್ತೇಜನ ನೀಡಿದರು ಎಂದರು. ಇದರಿಂದ ಭಾರತ ದೇಶದ ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರ ಕ್ಷೇತ್ರ ಹೆಬ್ಬಾಗಿಲು ಎಂದು ಕರೆ ನೀಡಿದರು. ಅವರ ನೆನಪಿಗಾಗಿ ನವೆಂಬರ್ 14 ರಿಂದ 20 ರವರೆಗೆ ದೇಶಾದ್ಯಂತ ಅಖಿಲ ಭಾರತ ಸಹಕಾರ ಸಪ್ತಾಹ ಆಚರಿಸಲಾಗುತ್ತದೆ ಎಂದು ಜಿ.ಟಿ.ದೇವೇಗೌಡರು ಸಹಕಾರ ಸಪ್ತಾಹದ ಮಹತ್ವವನ್ನು ವಿವರಿಸಿದರು.

ಸರ್ದಾರ್ ವಲ್ಲಭಭಾಯ್ ಪಟೇಲ್ ಅವರು ಹಾಲಿನ ಕೇಂದ್ರ ಸ್ಥಾಪಿಸಬೇಕೆಂಬ ಕನಸು ಇಟ್ಟುಕೊಂಡು ಹಲವು ಕಾರ್ಯಕ್ರಮ ರೂಪಿಸಿದರು. ಸಹಕಾರ ಚಳವಳಿಯ ಪಿತಾಮಹಾ ತ್ರಿಭುವನ್ ದಾಸ್ ಪಟೇಲ್ ಅವರು ಗುಜರಾತ್‌ನ ಮೇಡಕ್ ಜಿಲ್ಲೆಯ ಒಂದು ಹಳ್ಳಿಯಲ್ಲಿ ಒಂದು ಸಹಕಾರ ಸಂಘ ಪ್ರಾರಂಭಿಸಿದರು. ಜೊತೆಯಲ್ಲಿ ಎನ್‌ಡಿಡಿಬಿ ಸಹ ಆರಂಭಿಸಿದರು ಎಂದು ಹೇಳಿದರು.

ಡಾ.ವರ್ಗೀಸ್ ಕುರಿಯನ್ ಅವರನ್ನು ಅಧ್ಯಕ್ಷರಾಗುವಂತೆ ಕೇಳಿಕೊಂಡಾಗ, ಸಹಕಾರ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಇಲ್ಲದೆ ಇದ್ದರೆ ಮಾತ್ರ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವುದಾಗಿ ಅವರು ಷರತ್ತು ವಿಧಿಸಿದರು. ತರುವಾಯ ದೇಶದಲ್ಲಿ ಕ್ಷೀರ ಕ್ರಾಂತಿ ನಡೆಯಿತು ಎಂದು ತಿಳಿಸಿದರು.

ಅದೇ ರೀತಿ ಕರ್ನಾಟಕದಲ್ಲಿ ಕೋಲಾರದ ಎಂ.ವಿ.ಕೃಷ್ಣಪ್ಪ ಅವರು ಸಚಿವರಾಗಿದ್ದಾಗ ಹಾಲೆಂಡ್‌ನಿಂದ ಹಡಗಿನ ಮೂಲಕ ಹಸುಗಳನ್ನು ತಂದು ರೈತರಿಗೆ ವಿತರಣೆ ಮಾಡಿ ಕರ್ನಾಟಕದಲ್ಲಿ ಕೆಎಂಎಫ್ ಸ್ಥಾಪಿಸಿದರು. ಇದರ ಫಲವಾಗಿ ಇಂದು ಪ್ರತಿ ದಿನ ಕರ್ನಾಟಕದಲ್ಲಿ 90 ಲಕ್ಷದಿಂದ 1 ಕೋಟಿ ಲೀಟರ್ ತನಕ ಹಾಲು ಉತ್ಪಾದನೆಯಾಗುತ್ತಿದೆ. ಇದರಿಂದ ಹಾಲು ಉತ್ಪಾದಕರಿಗೆ ಪ್ರತಿದಿನ 28 ಕೋಟಿ ರೂಪಾಯಿ ಹಣ ಸಂದಾಯವಾಗುತ್ತಿದೆ. ಇದರಿಂದ ಹಾಲು ಉತ್ಪಾದನೆಯಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ ಎಂದು ಜಿ.ಟಿ.ದೇವೇಗೌಡರು ಸಂತಸ ವ್ಯಕ್ತಪಡಿಸಿದರು. ಮಹಾತ್ಮಗಾಂಧಿ ಅವರ ರಾಮರಾಜ್ಯದ ಕನಸು ನನಸಾಗಲು ಪ್ರತಿಯೊಂದು ಹಳ್ಳಿಯಲ್ಲಿ ಸಹಕಾರ ಸಂಘ ತೆರೆದರೆ ರೈತರ ಕಲ್ಯಾಣ ಕಾರ್ಯಕ್ರಮಗಳು ರೂಪುಗೊಳ್ಳಲಿದೆ. ಈ ಮೂಲಕ ರೈತರಿಗೆ ಕೃಷಿ ಸಲಕರಣೆಗಳು, ಗೊಬ್ಬರ, ಕ್ರಿಮಿನಾಶಕಗಳು ಹಾಗೂ ಗ್ರಾಹಕರಿಗೆ ಸೂಕ್ತ ದರದಲ್ಲಿ ಎಲ್ಲಾ ಪದಾರ್ಥಗಳು ಸಹಕಾರ ಸಂಘಗಳ ಮೂಲಕ ನೀಡಬಹುದು ಎಂದು ಅಭಿಪ್ರಾಯಪಟ್ಟರು. ಅದೇ ರೀತಿ ಒಂದು ಹಳ್ಳಿಯಲ್ಲಿ ಶಾಲೆ ತೆರೆದರೆ ಶಿಕ್ಷಣ ದೊರೆಯುತ್ತದೆ. ಹಾಗೆಯೇ ಗ್ರಾಮ ಪಂಚಾಯತ್ ರಚನೆಯಿಂದ ಹಳ್ಳಿಗೆ ಕುಡಿಯುವ ನೀರು, ವಿದ್ಯುತ್ ಸೌಲಭ್ಯ ಸೇರಿದಂತೆ ಹಲವು ಮೂಲಭೂತ ಸೌಕರ್ಯ ದೊರೆಯುತ್ತದೆ. ಇದರಿಂದ ಮಹಾತ್ಮ ಗಾಂಧಿ ಕಂಡ ರಾಮರಾಜ್ಯ ಸಾಕಾರಗೊಳ್ಳಲಿದೆ. ಆದ ಕಾರಣ ಈ ಕಾರ್ಯಕ್ಕೆ ಎಲ್ಲಾ ಸಹಕಾರಿಗಳು ಕೈಜೋಡಿಸಬೇಕು ಎಂದು ಕರೆ ನೀಡಿದರು. ಸಹಕಾರ ಸಂಸ್ಥೆಗಳಲ್ಲಿ ಹಸು ಸಾಲ, ಗುಡಿ ಕೈಗಾರಿಕೆ ಸಾಲ, ಬೀದಿ ಬದಿ ವ್ಯಾಪಾರಿಗಳಿಗೆ ಸಾಲ, ಶಿಕ್ಷಣಕ್ಕೆ ಸಾಲ ಸೇರಿದಂತೆ ಹಲವು ರೀತಿಯ ಸಾಲ ದೊರೆಯುತ್ತದೆ. ಇದರಿಂದ ಸಹಕಾರ ಸಂಸ್ಥೆಗಳಿಗೆ ನಿರ್ದೇಶಕರಾಗುವ ಅವಕಾಶ ಕೂಡ ದೊರೆಯುತ್ತದೆ. ಆದರೆ ನಾನೊಬ್ಬ ಸಹಕಾರಿಯಾಗಿ ಇಷ್ಟು ಜನರಿಗೆ ಸಹಾಯ ಮಾಡಿದ್ದೀನಿ ಎಂದು ಯಾವೊಬ್ಬ ಸಹಕಾರಿ ಧ್ವನಿ ಎತ್ತುವುದಿಲ್ಲ. ಇದು ಈಗಿನ ಪರಿಸ್ಥಿತಿಯಾಗಿದೆ. ಇದರಿಂದ ಸಹಕಾರ ಕ್ಷೇತ್ರದ ಬೆಳವಣಿಗೆ ಕುಂಠಿತವಾಗುತ್ತದೆ ಎಚ್ಚರಿಸಿದರು.

ಕಾರ್ಯಾಗಾರದ ವೇಳೆ ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ 20 ಹಿರಿಯ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಹಕಾರ ಸಚಿವ ಕೆ.ಎನ್.ರಾಜಣ್ಣ, ಶಾಸಕ ಜ್ಯೋತಿ ಗಣೇಶ್, ಸಹಕಾರ ಇಲಾಖೆ ನಿಬಂಧಕ ಟಿ.ಹೆಚ್.ಎಂ. ಕುಮಾರ್, ಮಹಾ ಮಂಡಳದ ನಿರ್ದೇಶಕ ಗಂಗಣ್ಣ, ಕೆಎಂಎಫ್ ನಿರ್ದೇಶಕ ವೆಂಕಟೇಗೌಡ, ವ್ಯವಸ್ಥಾಪಕ ನಿರ್ದೇಶಕ ಜಗದೀಶ್, ಮಹಾ ಮಂಡಳದ ವ್ಯವಸ್ಥಾಪಕ ನಿರ್ದೇಶಕ ನವೀನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿ–ಲೀಡ್‌ಗೆ ಟೈಟನ್ ವ್ಯವಸ್ಥಾಪಕ ನಿರ್ದೇಶಕ ಭೇಟಿ



ಮೈಸೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಶಿಕ್ಷಣ ವಲಯದ ಮುಖ್ಯಸ್ಥ ಪ್ರವೀಣ್ ಕುಮಾರ್ ಅವರು ಬೆಂಗಳೂರಿನ ಟೈಟನ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಸಿ.ಕೆ.ವೆಂಕಟರಾಮನ್ (ಎಡದಿಂದ ಎರಡನೆಯವರು) ಅವರಿಗೆ ವಿ–ಲೀಡ್‌ನಲ್ಲಿ ಕೈಗೊಂಡಿರುವ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಎಸ್‌ವಿವೈಎಂ ಸಿಇಓ ಎಸ್.ಸವಿತಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ನ.29(ಆರ್‌ಕೆ)–ಬೆಂಗಳೂರಿನ ಟೈಟನ್ ಕಂಪನಿ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಸಿ.ಕೆ.ವೆಂಕಟರಾಮನ್ ಅವರು ಇಂದು ಮೈಸೂರಿನ ವಿವೇಕಾನಂದ ಇನ್‌ಸ್ಟಿಟ್ಯೂಟ್ ಫಾರ್ ಲೀಡರ್‌ಶಿಪ್ ಡೆವೆಲಪ್‌ಮೆಂಟ್ (V-LEAD)ಗೆ ಭೇಟಿ ನೀಡಿದ್ದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (SVYM) ಸಿಎಸ್‌ಆರ್ ಅಡಿ ಕೈಗೊಂಡಿರುವ ಕಾರ್ಯಕ್ರಮಗಳು ಹಾಗೂ ವಿವಿಧ ಚಟುವಟಿಕೆಗಳನ್ನು ವೀಕ್ಷಿಸಿದ ಅವರು, ದಿನವಿಡೀ ಸಂಸ್ಥೆಯ ವಿವಿಧ ಕೇಂದ್ರಗಳಿಗೆ ಪ್ರವಾಸ ಕೈಗೊಂಡಿದ್ದರು.

ಸಿಎಸ್‌ಆರ್ ಅಡಿ ಟೈಟನ್ ಕಂಪನಿಯು ಅನುದಾನ ನೀಡಿದ್ದು, ವಿ–ಲೀಡ್ ಮೂಲಕ ಪ್ರಗತಿಯಲ್ಲಿರುವ ಕಾರ್ಯಕ್ರಮಗಳನ್ನು ಸಿ.ಕೆ.ವೆಂಕಟರಾಮನ್ ವೀಕ್ಷಿಸಿದರು.

ಪ್ರವಾಸದ ವೇಳೆ ಮೈಸೂರಿನ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟೂಡೆಂಟ್ಸ್ (VIIS)ಗೆ ಭೇಟಿ ನೀಡಿದ್ದ ವೆಂಕಟರಾಮ್ ಮತ್ತು ತಂಡವು ಜೊಂಪಟಿಹಳ್ಳಿಯ ಹೋಂ ಬೇಸ್ಡ್ ಬಯೋಗ್ಯಾಸ್ ಘಟಕ ಉದ್ಘಾಟಿಸಿದರು. ಅಣ್ಣೂರು ಹಾಡಿಯ ಚಿಪ್ಸ್ ತಯಾರಿಕಾ ಘಟಕದ ತಂಡದೊಂದಿಗೆ ಸಂವಾದ ನಡೆಸಿದ ಅವರು, ಸರಗೂರಿನ ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆ, ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್, ಜನಧ್ವನಿ ಕಮ್ಯೂನಿಟಿ ರೇಡಿಯೋ ಸ್ಟೇಷನ್ ಕೆಂಚನಹಳ್ಳಿಯ ವಿವೇಕ ರೂರಲ್ ಲೈವ್ಲಿಹುಡ್ ಸೆಂಟರ್, ಹೊಸಹಳ್ಳಿಯ ವಿವೇಕ ಟ್ರೈಬಲ್ ಸೆಂಟರ್ ಫಾರ್ ಲರ್ನಿಂಗ್ ಸೆಂಟರ್‌ಗಳಿಗೂ ಭೇಟಿ ನೀಡಿದರು.

ಕನ್ನಡ ನಮ್ಮ ಮನದ ಭಾಷೆಯಾಗಿರಬೇಕು: ಮಾಜಿ ಶಾಸಕ ಎಂಕೆಎಸ್



ಚಾಮುಂಡಿಪುರಂ ವೃತ್ತದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಉದ್ಘಾಟಿಸಿದರು

ಮೈಸೂರು, ನ.29– ಕರ್ನಾಟಕ ರಾಜ್ಯ ರಿಯಲ್ ಎಸ್ಟೇಟ್ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಚಾಮುಂಡಿಪುರಂ ವೃತ್ತದಲ್ಲಿ ಕನ್ನಡ ರಾಜ್ಯೋತ್ಸವ ಜರುಗಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಭಾಷೆಯ ಕಲಿಕೆಗೆ ಗಡಿ, ಜಾತಿ, ಧರ್ಮ, ಸಮಯದ ಮಿತಿ ಇಲ್ಲ. ಆದರೆ ಕನ್ನಡವೇ ನಮ್ಮ ಮನದ ಭಾಷೆ, ವ್ಯಾವಹಾರಿಕ ಭಾಷೆಯಾಗಿರಬೇಕು. ಇತ್ತೀಚೆಗೆ ಆಂಗ್ಲ ಭಾಷೆಯ ವ್ಯಾಮೋಹಕ್ಕೆ ಬಲಿಯಾಗಿ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ದಾಖಲಿಸುವ ಪ್ರವೃತ್ತಿಯನ್ನು ಪೋಷಕರು ರೂಢಿಸಿಕೊಳ್ಳುತ್ತಿದ್ದಾರೆ. ಅದು ಮಕ್ಕಳ ಭವಿಷ್ಯದ ದೃಷ್ಟಿಯಲ್ಲಿ ತಪ್ಪಲ್ಲ, ಆದರೆ ಕನ್ನಡ ಭಾಷೆಯನ್ನು ನಿರ್ಲಕ್ಷ್ಯ ಮಾಡುವುದು ಅಪರಾಧ. ಬದುಕಿನ ಭಾಷೆಯಾಗಿ ಕನ್ನಡವನ್ನು ಕಲಿಯಬೇಕು. ಉಳಿಸಬೇಕು, ಬೆಳೆಸಬೇಕು. ಕನ್ನಡ ಭಾಷೆ ಅತ್ಯಂತ ಶ್ರೀಮಂತ ಭಾಷೆ. ಕನ್ನಡ ಭಾಷೆಯ ಅಭಿವೃದ್ಧಿಗೆ ಹಲವಾರು ಮಹನೀಯರು, ಸಂತರು, ಶರಣರು, ಸಾಹಿತಿಗಳು ದುಡಿದಿದ್ದಾರೆ. ಹೀಗಾಗಿ ದೇಶದಲ್ಲಿ ಕನ್ನಡ ಅತ್ಯಂತ ಹಿರಿಮೆ ಗರಿಮೆಯನ್ನು ಹೊಂದಿದೆ. ಬದುಕಿಗಾಗಿ ಹೊರಗಿನಿಂದ ಬಂದವರು ಸಹ ಕನ್ನಡ ಕಲಿಯಬೇಕು. ಕನ್ನಡ ರಾಜ್ಯೋತ್ಸವ ನವೆಂಬರ್ ಮಾಸಕ್ಕೆ ಮಾತ್ರ ಸೀಮಿತ ಮಾಡದೇ ವರ್ಷಪೂರ್ತಿ ಕನ್ನಡ ಹಬ್ಬವನ್ನು ಆಚರಿಸೋಣ ಸಂಭ್ರಮಿಸೋಣಾ ಎಂದರು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪಾಲಿಕೆ ಮಾಜಿ ಸದಸ್ಯರಾದ ಪ್ರದೀಪ್ ಕುಮಾರ್, ಮಾ.ವಿ.ರಾಮಪ್ರಸಾದ್, ಪರಿಸರವಾದಿ ಭಾನು ಮೋಹನ್, ಬ್ರಾಡ್‌ವೇ ಕಿರಣ್, ಮಹೇಶ್, ಪ್ರಕಾಶ್, ಖಾನಾವಳಿ ನಾಗೇಂದ್ರ, ನಟರಾಜು, ಸಮತಾ ಗ್ರೂಪ್ಸ್‌ನ ಅರುಣ್ ಪಂಡಿತ್, ರೇಣುಕಾ ಪ್ರಸಾದ್, ಯೋಗೇಶ್, ರವಿಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಎಂ. ಮಂಜುಳ ಹೆಗ್ಡೆ ಕೋಂ ಹೆಚ್.ಧೀರಜ್ ಹೆಗ್ಡೆ, ವಾಸ ನಂ.51, 3ನೇ ಕ್ರಾಸ್, ಬ್ಯಾಂಕ್ ಕಾಲೋನಿ, ಬೋಗಾದಿ, ಮೈಸೂರು ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಈ ಬಗ್ಗೆ ಯಾರಿಗಾದರು ತಂಟೆ, ತಕರಾರು, ಹಕ್ಕು, ಇತ್ಯಾದಿಗಳು ಇದ್ದಲ್ಲಿ ಈ ಪ್ರಕಟಣೆಯ 15 ದಿನಗಳ ಒಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಕೆಳಕಂಡ ಕಛೇರಿಯಲ್ಲಿ ಸಂಪರ್ಕಿಸಿ ತಕರಾರು ಸಲ್ಲಿಸಬಹುದಾಗಿರುತ್ತದೆ. ಒಂದು ವೇಳೆ ಸದರಿ ಅವಧಿಯೊಳಗೆ ಯಾವುದೇ ತಂಟೆ, ತಕರಾರು, ಹಕ್ಕು, ಇತ್ಯಾದಿ ಬಾರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕ್ರಯದ ಪ್ರಕ್ರಿಯೆಯನ್ನು ಪೂರೈಸಲು ಮುಂದುವರೆಯುತ್ತಾರೆಂದು ತಿಳಿಯುವುದು.

ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ದೇವರಾಜ ಮೊಹಲ್ಲಾ, ಕಸಬಾ ಹೋಬಳಿ, ಹೆಬ್ಬಾಳು ಗ್ರಾಮದ ಹಳೇ ಸರ್ವೆ ನಂ.330/4, ಹೊಸ ಸರ್ವೆ ನಂ.330/6 ರ ವಿಸ್ತೀರ್ಣ 0.04.00(ನಾಲ್ಕು ಗುಂಟೆ) ಜಮೀನಿಗೆ ಚೆಕ್ ಬಂದಿ:–
ಪೂರ್ವಕ್ಕೆ : ಸರ್ವೆ ನಂ.330/3 ಮತ್ತು 330/5 ರ ಜಮೀನುಗಳು,
ಪಶ್ಚಿಮಕ್ಕೆ : ಸರ್ವೆ ನಂ.330/4 ರ ಜಮೀನು, ಉತ್ತರಕ್ಕೆ : ರಸ್ತೆ,
ದಕ್ಷಿಣಕ್ಕೆ : ರಸ್ತೆ,

ಶ್ರೀ ರಾಘವೇಂದ್ರ ಅಸೋಸಿಯೇಟ್ಸ್, ಹೆಚ್.ಹೆಚ್. ಹರೀಶ್, ಬಿ.ಎ, ಎಲ್.ಎಲ್.ಬಿ, ನಂ.2514, 1ನೇ ಮಹಡಿ, ಹಳೇ ಕಾಂತರಾಜ ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು,
ಮೊ: ನಂ.7892417177.
ದಿನಾಂಕ : 30–11–2024 ಸ್ಥಳ : ಮೈಸೂರು

ವ್ಯವಹಾರಿಕವಾಗಿ ಮಕ್ಕಳು ಯಾವ ಭಾಷೆಯಾದರೂ ಕಲಿಯಲಿ; ಆದರೆ ಕನ್ನಡ ಮಾತ್ರ ಕಡ್ಡಾಯವಾಗಿ ಕಲಿಸಿ

●ಪೋಷಕರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಕಿವಿಮಾತು ●ವಿಜಯನಗರದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ಪುಣ್ಯಕೋಟಿ ಸೇವಾ ಟ್ರಸ್ಟ್ ಹಾಗೂ ಇತರೆ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹಾಸ್ಯನಟ ಟೆನ್ನಿಸ್ ಕೃಷ್ಣ, ಸಾಯಿರಂಗ ವಿದ್ಯಾಸಂಸ್ಥೆಯ ಮುಖ್ಯಶಿಕ್ಷಕ ವೈ.ವಿ.ರಘುನಾಥ್‌ಗೌಡ ಅವರನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಸೇರಿದಂತೆ ಇತರರು ಸನ್ಮಾನಿಸಿದರು.

> 800 ಕನ್ನಡ ಸಿನಿಮಾಗಳಲ್ಲಿ ಹಾಸ್ಯ ನಟನಾಗಿ ಅಭಿನಯಿಸಿದ್ದೇನೆ. ಈ ಸೇವೆಯನ್ನು ಗುರುತಿಸಿ ಸರ್ಕಾರ ಬೇರೆ ಬೇರೆ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಈ ಪ್ರಶಸ್ತಿ ಪಡೆದವರಿಗೆ ಬೆಂಗಳೂರಿನ ಬಿಡಿಎನಲ್ಲಿ ನಿವೇಶನ ನೀಡುವ ವಾಡಿಕೆ ಇತ್ತು. ಪ್ರಸ್ತುತ ನನಗೆ ಪ್ರಶಸ್ತಿ ಬಂದರೂ ಬೆಂಗಳೂರಿನಲ್ಲಿ ನಿವೇಶನ ಕೊಟ್ಟಿಲ್ಲ ಮೈಸೂರಿನಲ್ಲಾದರೂ ಮುಡಾದಿಂದ ಒಂದು ನಿವೇಶನ ಪಡೆಯುವ ಹಂಬಲದಿಂದ ಹಲವು ವರ್ಷಗಳ ಹಿಂದೆ ಹಣ ಕಟ್ಟಿ ಕಾಯುತ್ತಿದ್ದೇನೆ. ಅದೂ ಸಾಧ್ಯವಾಗುತ್ತೋ ಇಲ್ಲವೂ ತಿಳಿಯದು.
> - ಟೆನ್ನಿಸ್ ಕೃಷ್ಣ, ಹಾಸ್ಯನಟ

ಮೈಸೂರು. ನ.29(ಎಸ್‌ಪಿಎನ್)–ವ್ಯವಹಾರಿಕ ಭಾಷೆಯಾಗಿ ಯಾವ ಭಾಷೆಯನ್ನಾದರೂ ಮಕ್ಕಳು ಕಲಿಯಲಿ. ಆದರೆ, ಮಾತೃ ಭಾಷೆ ಕನ್ನಡವನ್ನು ಕಡ್ಡಾಯವಾಗಿ ಅವರಿಗೆ ಕಲಿಸಿ ಎಂದು ಶಾಸಕ ಜಿ.ಡಿ.ಹರೀಶ್‌ಗೌಡರು ಸಲಹೆ ನೀಡಿದರು.

ಮೈಸೂರು ವಿಜಯನಗರ ಒಂದನೇ ಹಂತದ ಯೋಗಾನರಸಿಂಹ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಪುಣ್ಯಕೋಟಿ ಸೇವಾ ಟ್ರಸ್ಟ್, ವಿಜಯನಗರ ಒಂದು ಮತ್ತು ಎರಡನೇ ಹಂತದ ನಿವಾಸಿಗಳು, ಓವೈಹೆಚ್‌ಎಸ್ ನಿವಾಸಿಗಳು, ಐಶ್ವರ್ಯ ಫೌಂಡೇಷನ್, ಚಾಮುಂಡೇಶ್ವರಿ ಟ್ರಸ್ಟ್, ನಾದಾಂಮೃತ ಟ್ರಸ್ಟ್ ಹಾಗೂ ಸಾರ್ವಜನಿಕರ ಸಹಯೋಗದೊಂದಿಗೆ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಉದ್ಘಾಟಿಸಿದರು.

ಕನ್ನಡ ಏಕೀಕರಣದಲ್ಲಿ ಹಲವರ ತ್ಯಾಗ–ಬಲಿದಾನವಿದೆ. ಅದರಲ್ಲಿ ಕನ್ನಡದ ಕುಲಪುರೋಹಿತ ಎಂದೇ ಖ್ಯಾತರಾದ ಆಲೂರ ವೆಂಕಟರಾಯರು ಮೊದಲಿಗರು. ಆಲೂರು ವೆಂಕಟರಾಯರ ಕನ್ನಡ ಭಾಷಾವಾರು ರಾಜ್ಯಕ್ಕಾಗಿ ಆಂದೋಲನ ಆರಂಭಿಸಿದರು. ಕ್ರಮೇಣ ಈ ಹೋರಾಟ ವೇಗ ಪಡೆಯಲಾರಂಭಿಸಿತು. ಜೊತೆಗೆ ಭಾರತದ ಸ್ವಾತಂತ್ರ್ಯ ಚಳುವಳಿಯ ವೇಗ ಪಡೆಯುತ್ತಿದ್ದ ಕಾಲವಾಗಿತ್ತು. ಒಟ್ಟಿನಲ್ಲಿ ಭಾಷಾವಾರು ಪ್ರಾಂತ್ಯಕ್ಕಾಗಿ ನಡೆದ ಚಳುವಳಿಯಿಂದ ಬೀದರ್‌ನಿಂದ ಚಾಮರಾಜನಗರದವರೆಗೆ ವಿಶಾಲ ಮೈಸೂರು ರಾಜ್ಯ 1956ರ ನ.1ರಂದು ಉದಯವಾಯಿತು ಎಂದರು.

ಹೀಗೆ ಉದಯವಾದ ಮೈಸೂರು ರಾಜ್ಯದ ಹೆಸರನ್ನು 1973ರಲ್ಲಿ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ನೇತೃತ್ವದಲ್ಲಿ 'ಕರ್ನಾಟಕ' ಎಂದು ಮರು ನಾಮಕರಣಗೊಂಡಿತು. ಅಂದಿನಿಂದ ಕರ್ನಾಟಕ ಎಂಬ ಹೆಸರಿನಲ್ಲಿ ಖ್ಯಾತಗೊಂಡಿತು. ಇದನ್ನು ಉಳಿಸಿಕೊಂಡು ಹೋಗಲು ನಾವು–ನೀವೆಲ್ಲರೂ ಪಣ ತೊಡಬೇಕು ಎಂದು ಕಿವಿ ಮಾತು ಹೇಳಿದರು.

ಪುಣ್ಯಕೋಟಿ ಸೇವಾ ಟ್ರಸ್ಟ್ ಅಧ್ಯಕ್ಷ ಹನುಮಂತೇಶ್ ಹಾಗೂ ಇತರೆ ಪದಾಧಿಕಾರಿಗಳು ವಿಜಯನಗರ ಒಂದನೇ ಹಂತದಲ್ಲಿ ನವೆಂಬರ್ ತಿಂಗಳು ಮಾತ್ರವಲ್ಲದೆ, ವರ್ಷ ಪೂರ್ತಿ ಹಲವು ಕನ್ನಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡ ಬಾಷಾ ಪ್ರೇಮವನ್ನು ಮೆರೆಯುತ್ತಿದ್ದಾರೆ ಎಂದ ಅವರು, ಪ್ರಸ್ತುತ ತಂತ್ರಜ್ಞಾನ ಮುಂದುವರೆದಂತೆ ಜಗತ್ತಿನ ಸಂಪರ್ಕ ಭಾಷೆಯಾದ ಇಂಗ್ಲಿಷ್ ಕಲಿಕೆ ಅನಿವಾರ್ಯ. ಆದರೆ, ನಮ್ಮ ಸ್ವಾಭಿಮಾನದ ಸಂಕೇತವಾಗಿರುವ ಕನ್ನಡವನ್ನು ಮಕ್ಕಳಿಗೆ ಕಲಿಸುವುದನ್ನು ಪೋಷಕರು ಮರೆಯಬಾರದು ಎಂದು ಸಲಹೆ ನೀಡಿದರು.

ಈ ಟ್ರಸ್ಟ್ ಸದಸ್ಯರು ಈ ವೇದಿಕೆಯಲ್ಲಿ ಕನ್ನಡ ನಾಡು–ನುಡಿಗಾಗಿ ಸೇವೆ ಸಲ್ಲಿಸುತ್ತಿರುವ ಹಾಸ್ಯನಟ ಟೆನ್ನಿಸ್‌ಕೃಷ್ಣ ಹಾಗೂ ವಿಕಲಚೇತನರಿಗೆ ಹಲವು ವರ್ಷಗಳಿಂದ ಶಿಕ್ಷಣ ನೀಡುತ್ತಿರುವ ಸಾಯಿರಂಗ ವಿದ್ಯಾಸಂಸ್ಥೆಯ ಮುಖ್ಯಶಿಕ್ಷಕ ವೈ.ವಿ.ರಘುನಾಥ್‌ಗೌಡ ಅವರನ್ನು ಸನ್ಮಾನಿಸಿದ್ದಾರೆ. ಈ ಕಾರ್ಯ ಮೆಚ್ಚುವಂತಹದು ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಡಳಿತಾವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿ, ಕನ್ನಡಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ. ಅಲ್ಲದೆ, ಸಾಹಿತ್ಯ, ಸಂಗೀತ, ನೃತ್ಯ ಸೇರಿದಂತೆ ಇತರೆ ಕಲೆಗಳಿಗೆ ರಾಜಾಶ್ರಯ ಒದಗಿಸಿ, ಸಾಂಸ್ಕೃತಿಕ ನಗರಿ ಮೈಸೂರು ಎಂಬ ಬಿರುದು ಬರಲು ಕಾರಣರಾಗಿದ್ದಾರೆ. ಈ ದಿಸೆಯಲ್ಲಿ ಕನ್ನಡ ಶ್ರೀಮಂತಗೊಳ್ಳಲು ಮೈಸೂರು ಸಂಸ್ಥಾನ ತನ್ನದೇ ಕೊಡುಗೆ ನೀಡಿದೆ ಎಂದರೆ ತಪ್ಪಾಗಲಾರದು ಎಂದರು.

ವೇದಿಕೆಯಲ್ಲಿ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ಮುಖ್ಯಸ್ಥ, ಬಿಜೆಪಿ ಮುಖಂಡ ಡಾ.ಸುಶೃತ್‌ಗೌಡ, ವಿಜಯನಗರ ಒಂದನೇ ಹಂತ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಉದಯ್, ವಿಜಯನ ಓವೈಹೆಚ್‌ಎಸ್ ಅಧ್ಯಕ್ಷ ಬಸಣ್ಣ, ವಿಜಯನಗರ ಎರಡನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಗಿರಿಜೇಶ್, ನಗರ ಪಾಲಿಕೆ ಮಾಜಿ ಸದಸ್ಯ ಸುಬ್ಬಯ್ಯ, ಐಶ್ವರ್ಯ ಫೌಂಡೇಶನ್ ಅಧ್ಯಕ್ಷ ಗೋಪಾಲಸ್ವಾಮಿ, ಪ್ರಥಮ ದರ್ಜೆ ಗುತ್ತಿಗೆದಾರರಾದ ದಿನೇಶ್ ಕಾರ್ಲೆ, ಶಿವಪ್ರಕಾಶ್, ಸೆಸ್ಕ್ ಕಾರ್ಯಪಾಲಕ ಅಭಿಯಂತರ ಚಿಕ್ಕಸಿದ್ದೇಗೌಡ, ಎಸ್‌ಎಲ್‌ವಿ ಬುಕ್ ಏಜೆನ್ಸಿ ಮಾಲೀಕ ದಿವಾಕರ್, ದಿ.ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕ ಎಸ್.ಆರ್.ರವಿಕುಮಾರ್ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಆಕಾಶವಾಣಿ ಕಲಾವಿದ ಮೈಸೂರು ಮಹಾಲಿಂಗು ಮತ್ತು ತಂಡದ ಕಲಾವಿದರಿಂದ ಕನ್ನಡ ಸಿನಿಮಾ ಹಾಡುಗಳನ್ನು ಹಾಡಿ, ಪ್ರೇಕ್ಷಕರನ್ನು ರಂಜಿಸಿದರು.

ನಕ್ಕರೆ ಅದೇ ಸ್ವರ್ಗ

ಕೊನೆ ಆಸೆ ಕೇಳಿ ಜೈಲರ್ ಸುಸ್ತು

ಜೈಲರ್ : ನಾಳೆ ನಿನ್ನನ್ನು ಗಲ್ಲಿಗೇರಿಸುತ್ತೇವೆ, ಕೊನೆ ಆಸೆ ಏನು ಹೇಳು?
ಕೈದಿ : ತಲೆ ಕೆಳಗೆ ಮಾಡಿ, ಕಾಲು ಮೇಲೆ ಮಾಡಿ ನೇಣು ಹಾಕಿ

ಮೈಸೂರು ಮಿತ್ರ
ಶನಿವಾರ, 30 ನವೆಂಬರ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........
ನಿನ್ನೆಯ ನೆನಪಲ್ಲಿ ಇಂದು ಜೀವಿಸಿದರೂ ನಾಳಿನ ಭರವಸೆಗಾಗಿ ಪ್ರಶ್ನೆ ಕೇಳುವುದನ್ನು ನಿಲ್ಲಿಸಬಾರದು, –ಐನ್‌ಸ್ಟೀನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಡ್ಡನಿಗೆ ಹಗಲು ಕಳೆಯುವುದಿಲ್ಲ, ಒಳ್ಳೆಯವನಿಗೆ ರಾತ್ರಿ ಸಾಲುವುದಿಲ್ಲ.

ನಿಮ್ಮ ಪತ್ರಗಳು

ಹಿಂದಿನ ಪ್ರಮಾದಗಳು ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಮರುಕಳಿಸದಿರಲಿ!

ಮಾನ್ಯರೆ,

ಮಂಡ್ಯ ಜಿಲ್ಲೆಯಲ್ಲಿ ಬರುವ ಡಿಸೆಂಬರ್ 20 ರಿಂದ 22 ರವರೆಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಈ ಹಿಂದೆ ನಡೆದ ವಾಡಿಕೆಯ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಆದ ಪ್ರಮಾದಗಳು ಮುಂಬರುವ ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮರುಕಳಿಸದಿರಲಿ ಎಂಬುದು ಕನ್ನಡ ಸಾಹಿತ್ಯಾಸಕ್ತರ ಆಶಯವಾಗಿದೆ. ಏಕೆಂದರೆ ಇತ್ತೀಚಿಗೆ ಕನ್ನಡ ಸಾಹಿತ್ಯ ಸಮ್ಮೇಳನಗಳು ಕಳೆಗುಂದುತ್ತಿವೆ. ಬರೀ ಸದ್ದು–ಗದ್ದಲ, ಕಾಟಚಾರದ ಕೆಲವೊಂದು ಭಾಷಣ ಹಾಗೂ ಗೋಷ್ಠಿಗಳಿಗಷ್ಟೇ ಸೀಮಿತಗೊಂಡು ಮುಕ್ತಾಯಗೊಳ್ಳುತ್ತಿವೆ. ಕೆಲವರಂತೂ ವೇದಿಕೆಯಲ್ಲಿ ಸಾಹಿತ್ಯಕ ಪರಿಸರವನ್ನು ರಾಜಕೀಯ ಪರಿಸರವಾಗಿ ಪ್ರತಿಬಿಂಬಿಸುತ್ತಿದ್ದಾರೆ. ಅದರಲ್ಲೂ ಸಾಹಿತ್ಯ ಸಮ್ಮೇಳನ ನಡೆಯುವ ನಗರಗಳಲ್ಲಂತೂ ವಿವಿಧ ಪಕ್ಷಗಳ ನಾಯಕರು ಶುಭ ಕೋರುವ ನೆಪದಲ್ಲಿ ಫ್ಲೆಕ್ಸ್‌ಗಳನ್ನು ಸೃಷ್ಟಿಸಿ ನಗರದ ಸೌಂದರ್ಯವನ್ನು ಹಾಳು ಮಾಡುತ್ತಿರುವುದರ ಜೊತೆಗೆ ಸಾಹಿತ್ಯದ ವಲಯದಲ್ಲೂ ರಾಜಕೀಯ ಬೆರೆಸಿ ತಮ್ಮ ಬೇಳೆ ಬೇಯಿಸಿಕೊಳ್ಳುವುದರಲ್ಲಿ ನಿರತರಾಗಿರುತ್ತಾರೆ. ಇದು ಖಂಡನಾರ್ಹ.

ಅಲ್ಲದೇ ಸಾಕಷ್ಟು ಪೂರ್ವ ತಯಾರಿ ಹಾಗೂ ಸಮರ್ಥ ನಿರ್ವಹಣೆಯ ಕೊರತೆ ಯಿಂದ ಪ್ರತಿಸಲದ ಸಾಹಿತ್ಯ ಸಮ್ಮೇಳನಗಳು ಗೊಂದಲಮಯ ಗೂಡುಗಳಾಗುತ್ತಿವೆ. ಸಮ್ಮೇಳನಕ್ಕೆ ದೂರದೂರಿನಿಂದ ಬರುವ ಸಾಹಿತ್ಯ ಪ್ರೇಮಿಗಳಿಗೆ ಸರಿಯಾದ ಊಟ, ವಸತಿ ಹಾಗೂ ಸರ್ಕಾರಿ ನೌಕರರಿಗೆ ಒ.ಒ.ಡಿ ಸೌಲಭ್ಯವನ್ನು ಸಮರ್ಪಕವಾಗಿ ನೀಡದೇ ಸಮ್ಮೇಳನಗಳು ಮತ್ತಷ್ಟು ಹದಗೆಡಲು ದಕ್ಷ ನಿರ್ವಹಣೆಯ ಕೊರತೆ ಪ್ರತಿವರ್ಷ ಕಂಡುಬರುತ್ತಿರುವುದು ಬೇಸರದ ಸಂಗತಿಯಾಗಿದೆ. ಸರಿಯಾದ ಸಮಯಪಾಲನೆ, ಗೋಷ್ಠಿಗಳ ಸಮರ್ಥ ನಿರ್ವಹಣೆ, ಉತ್ತಮ ಹಾಗೂ ಯೋಗ್ಯ ಸಾಹಿತ್ಯಾಸಕ್ತರ ಆಯ್ಕೆಯಲ್ಲಿ ವಿಫಲ. ಇವೇ ಮೊದಲಾದ ಸಮಸ್ಯೆಗಳಿಂದ ಪ್ರತಿಸಲದ ಸಮ್ಮೇಳನಗಳು ಅರ್ಥವಿಲ್ಲದೇ ಸೊರಗುತ್ತಿವೆ.

ಸಮ್ಮೇಳನಗಳಲ್ಲಿ ನಡೆಯುವ ಕವಿಗೋಷ್ಠಿಗಳ ಪಾಡಂತೂ ಹೇಳತೀರದು. ಅರ್ಥವಿಲ್ಲದ ಪದಗಳು ಹಾಗೂ ಪ್ರಾಸಗಳನ್ನು ಸೇರಿಸಿದರೆ ಕವನ ರಚನೆಯಾಗಿ ಬಿಡುತ್ತದೆ ಎಂಬ ಭ್ರಮೆ ಕೆಲವು ಕವಿಮಿತ್ರರಲ್ಲಿದೆ. ಹೀಗಾಗಿ ಕವಿಗೋಷ್ಠಿಗೆ ಆಯ್ಕೆ ಯಾಗುವ ಕವಿಗಳ ಪೂರ್ವಪರಗಳನ್ನು ವಿಚಾರಿಸದೇ, ಸಮ್ಮೇಳನಗಳಲ್ಲಿ ಅವರು ವಾಚಿಸುವ ಕವನಗಳ ಸತ್ವವನ್ನು ಪರೀಕ್ಷಿಸದೇ ಕವಿಗೋಷ್ಠಿಗಳನ್ನು ನಡೆಸುವುದರಲ್ಲಿ ಅರ್ಥವಿಲ್ಲ. ಇದರಿಂದ ಸಾಹಿತ್ಯಾಸಕ್ತರ ಕೊರತೆಯುಂಟಾಗಿ ಸಮ್ಮೇಳನ ಸೊರಗುವಂತೆ ಆಗುತ್ತದೆ.

ಇನ್ನೂ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುವ ಕೊನೆಯ ದಿನದ ಸಂಧರ್ಭದಲ್ಲಿ ಕೆಲವೊಂದು ನಿರ್ಣಯಗಳನ್ನು ಮಂಡಿಸುವುದು ವಾಡಿಕೆ. ಮಂಡಿಸಿದ ನಿರ್ಣಯಗಳು ಏನು ಎಂಬುದು ಮಾಧ್ಯಮಗಳಲ್ಲಿ ಬರುವುದು ಸಹ ವಾಡಿಕೆ. ಆದರೆ ಇವು ಬಂದಷ್ಟೇ ವೇಗದಲ್ಲಿ ಮೂಲೆಗುಂಪಾಗುತ್ತಿರುವುದು ಮಾತ್ರ ದುರ್ದೈವದ ಸಂಗತಿ. ಆ ನಿರ್ಣಯಗಳ ಪರ ಸರ್ಕಾರ ಗಮನ ಕೊಟ್ಟಿದ್ದು ಎಷ್ಟು? ಜಾರಿಗೆ ತಂದದ್ದು ಎಷ್ಟು ಎಂಬುದೇ ಇದುವರೆಗಿನ ಯಕ್ಷ ಪ್ರಶ್ನೆಯಾಗಿ ಉಳಿದಿದೆ. ಇಷ್ಟಕ್ಕೂ ಸರ್ಕಾರ ಸಾರ್ವಜನಿಕರ ದುಡ್ಡನ್ನು ಸಮ್ಮೇಳನಕ್ಕಾಗಿ ಕೋಟಿಗಟ್ಟಲೇ ಖರ್ಚು ಮಾಡುತ್ತದೆ. ಈ ಹಣದ ಸರಿಯಾದ ಸದ್ಬಳಕೆಯ ಜೊತೆ ಜೊತೆಗೆ ಕನ್ನಡಿಗರ ಅಂತರಂಗವನ್ನು ಏಕೀಕರಣಗೊಳಿಸುವ ಹಾಗೂ ಕನ್ನಡಿಗರ ಮನಸ್ಸನ್ನು ಸೃಜನಗೊಳಿಸುವ ಮಹತ್ಕಾರ್ಯವನ್ನು ಪ್ರತಿಯೊಂದು ಕನ್ನಡ ಸಮ್ಮೇಳನಗಳು ಮಾಡಿ ಆಚರಣೆಗೆ ತರುವುದೊಳಿತು. ಆಗ ಕನ್ನಡ ಸಾಹಿತ್ಯ ಸಮ್ಮೇಳನಗಳು ಅರ್ಥಪೂರ್ಣವಾಗುತ್ತವೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಇವಿಎಂ ಬಗ್ಗೆ ಕಾಂಗ್ರೆಸ್ ಅಪಸ್ವರ ಸಮಂಜಸವಲ್ಲ

ಮಾನ್ಯರೆ,

ಇವಿಎಂ ಮತಯಂತ್ರಗಳ ಸಾಚಾತನದ ಬಗ್ಗೆ ಅನುಮಾನ ವ್ಯಕ್ತಪಡಿಸುವ ಕಾಂಗ್ರೆಸ್, ತಮ್ಮ ಪಕ್ಷ ಗೆದ್ದಾಗ ಇವಿಎಂ ಓಕೆ, ಸೋತಾಗ ಮಾತ್ರ ಮತಯಂತ್ರ ಸರಿ ಇಲ್ಲಾ ಏಕೆ? ಎಂದು ಹೇಳುವ ಮೂಲಕ ತನ್ನ ಇಬ್ಬಗೆ ಧೋರಣೆಯನ್ನು ಪ್ರದರ್ಶಿಸುತ್ತಿರುವುದು ದುರಾದೃಷ್ಟಕರ.

ಇತ್ತೀಚಿನ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಇಂಡಿ ಒಕ್ಕೂಟ ದಯಾನೀಯ ಸೋಲು ಕಂಡಿದೆ. ಮತದಾರ ನೀಡಿರುವ ಈ ತೀರ್ಪನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲದ ಕಾಂಗ್ರೆಸ್ ಈ ಸೋಲಿಗೆ ಎಲೆಕ್ಟ್ರಾನಿಕ್ ಮತಯಂತ್ರಗಳ ದೋಷವೇ ಕಾರಣವೆಂದು ವ್ಯಾಖ್ಯಾನಿಸುವ ಮೂಲಕ ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದಂತೆ ಕಂಡುಬರುತ್ತಿದೆ. ಇದೇ ಕಾಂಗ್ರೆಸ್ ಮಿತ್ರಪಕ್ಷಗಳು ಜಾರ್ಖಂಡ್ ವಿಧಾನಸಭಾ ಚುನಾವಣೆಗಳಲ್ಲಿ ಬಹುಮತಗಳಿಸಿವೆ. ಇಲ್ಲಿ ಇವಿಎಂಗಳ ಬಗ್ಗೆ ಇರದ ಸಂಶಯ ಮಹಾರಾಷ್ಟ್ರ ಚುನಾವಣೆಯಲ್ಲಿ ಮಾತ್ರ ಏಕೆ? ಎಂಬುದನ್ನು ಪಕ್ಷದ ನಾಯಕರು ಸ್ಪಷ್ಟಪಡಿಸಬೇಕಿದೆ. ಕಳೆದ ಹಲವಾರು ವರ್ಷಗಳಿಂದ ಬಳಕೆಯಾಗುತ್ತಿರುವ ವಿದ್ಯುನ್ಮಾನ ಮತಯಂತ್ರಗಳ ಕಾರ್ಯಕ್ಷಮತೆ ಬಗ್ಗೆ ಯಾವುದೇ ತಕರಾರಿನ ಪುರಾವೆಗಳಿಲ್ಲ. ಹೀಗಿದ್ದೂ ಕಾಂಗ್ರೆಸ್ ಪಕ್ಷ ಮಾತ್ರ ಈ ಬಗ್ಗೆ ಅಪಸ್ವರ ಎತ್ತುತ್ತಿರುವುದು ಸಮಂಜಸವಲ್ಲ. – ಹೆಚ್.ಆರ್.ಪ್ರಸಾದ್, ವಿವೇಕಾನಂದ ನಗರ, ಮೈಸೂರು.

ಭ್ರೂಣ ಹತ್ಯೆ ಸಂಬಂಧ ಪರೋಕ್ಷ ಎಚ್ಚರಿಕೆ ಉತ್ತಮ!

ಮಾನ್ಯರೆ,

ಬಾಲ್ಯವಿವಾಹ ಮತ್ತು ಹೆಣ್ಣು ಭ್ರೂಣ ಹತ್ಯೆಗಳು ನಮ್ಮ ಸಮಾಜದಲ್ಲಿ ಇನ್ನೂ ಪಿಡುಗುಗಳಾಗಿಯೇ ಉಳಿದುಕೊಂಡಿವೆ. ಸಾಮಾನ್ಯರಲ್ಲಿ ಈ ಕುರಿತು ಹೆಚ್ಚಿನ ಜಾಗೃತಿ ಮೂಡಿಸಬೇಕಾಗಿದೆ.

ಒಂದು ಅಲ್ಪಪ್ರಯತ್ನವಾಗಿ ಮದುವೆಯ 'ಲಗ್ನ ಪತ್ರಿಕೆ'ಗಳ ಹಾಗೂ ವೈದ್ಯರ 'ಔಷಧಿ–ಚೀಟಿ'ಗಳ ಮೂಲಕ ಅರಿವು ಮೂಡಿಸಬಹುದೇನೋ!

ಎಲ್ಲಾ ಲಗ್ನಪತ್ರಿಕೆ, ಕರೆಯೋಲೆಗಳ ಮೇಲೆ ಶಾಸನವಿಧಿತ ಸಂದೇಶವನ್ನು ಮುದ್ರಿಸುವಂತೆ ಮಾಡಬಹುದು. 18ಕ್ಕಿಂತ ಕಡಿಮೆ ವಯಸ್ಸಿನ ವಧು–ವರರಿಗೆ ವಿವಾಹ ಸಲ್ಲದು ಎಂಬ ಸಂದೇಶ. ಲಗ್ನಪತ್ರಿಕೆ, ಕಾರ್ಡುಗಳನ್ನು ಪ್ರಿಂಟಿಸುವ ಮುದ್ರಕರಿಗೂ ಈ ಸಂದೇಶದ ಅರಿವು ಇರತಕ್ಕದ್ದು.

ವೈದ್ಯರು ನೀಡುವ ತಮ್ಮ ಪ್ರಿಸ್ಕ್ರಿಪ್ಷನ್–ಚೀಟಿಯಲ್ಲೂ ಕಡ್ಡಾಯವಾಗಿ ಈ ಸಂದೇಶ ಇರತಕ್ಕದ್ದು. ಹೆಣ್ಣು ಭ್ರೂಣ ಹತ್ಯೆಯು ಶಿಕ್ಷಾರ್ಹ ಅಪರಾಧ ಎಂಬ ಕಡ್ಡಾಯ ಸೂಚನೆ.

ಈ ಬಗೆಯ ಸೂಚನೆಗಳು ವಿವಾಹದ ಆಹ್ವಾನ ಪತ್ರಿಕೆಗಳ ಹಾಗೂ ವೈದ್ಯರ ಮದ್ದು ಶಿಫಾರಸ್ಸು ಚೀಟಿಗಳ ಮೂಲಕ ಜನಸಾಮಾನ್ಯರನ್ನು ಮುಟ್ಟುವಂತೆ ಮಾಡಬಹುದೇನೋ! ಈ ಕುರಿತು ಮಹಿಳಾ ಮತ್ತು ಸಮಾಜ ಕಲ್ಯಾಣ ಇಲಾಖೆಗಳು ಆಲೋಚಿಸಿ, ಸೂಕ್ತ ಕ್ರಮಗಳನ್ನು ತೆಗೆದುಕೊಂಡೀತೆಂಬ ಆಶಯ.

–ಡಿವಿಎಂ ಪ್ರಕಾಶ್, ಗೋಕುಲ ರಸ್ತೆ, 2ನೇ ಬ್ಲಾಕ್, ಮೈಸೂರು.

ದಿಕ್ಕುದೆಸೆ




ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ಮಹಾರಾಷ್ಟ್ರದಲ್ಲಿ ಸಂಚಲನ ಉಂಟು ಮಾಡಿದ ಯೋಗಿಯ 'ಕಟ್ಟಾಡಿದರೆ ನಾಶವಾದಿರಿ'; ಮೋದಿಯ 'ಒಂದಾಗಿದ್ದರೆ ಸುರಕ್ಷಿತ' ಮಂತ್ರ



ಫಡ್ನವೀಸ್, ಏಕನಾಥ್ ಶಿಂಧೆ, ಅಜಿತ್ ಪವಾರ್ ಸಂಭ್ರಮದ ಕ್ಷಣ.

> **ಉತ್ತರ ಪ್ರದೇಶದ ನಂತರ 48 ಲೋಕಸಭೆ ಹಾಗೂ 288 ವಿಧಾನಸಭಾ ಕ್ಷೇತ್ರಗಳಿರುವ ದೇಶದ ಎರಡನೇ ಅತೀ ದೊಡ್ಡ ರಾಜ್ಯವೆನಿಸಿದೆ. ಮಹಾರಾಷ್ಟ್ರ ದೇಶದ ಆರ್ಥಿಕ ರಾಜಧಾನಿಯಾಗಿದೆ. ಒಟ್ಟು ದೇಶೀಯ ಉತ್ಪನ್ನದಲ್ಲಿ (ಜಿಎಸ್‌ಡಿಪಿ) ಪ್ರಥಮ ಸ್ಥಾನದಲ್ಲಿದ್ದು, ದೇಶದ ಜಿಡಿಪಿಗೆ ಮಹಾರಾಷ್ಟ್ರ ಶೇ. 14 ರಷ್ಟು ಕೊಡುಗೆ ನೀಡುತ್ತಿದೆ. ಈ ರಾಜ್ಯವೊಂದರಲ್ಲೇ ಶೇ.38.9 ರಷ್ಟು ನೇರ ತೆರಿಗೆ (ಡೈರೆಕ್ಟ್ ಟ್ಯಾಕ್ಸ್) ಸಂಗ್ರಹವಾಗುತ್ತಿದೆ. ಲೋಕಸಭಾ ಚುನಾವಣೆಯಲ್ಲಾದ ಹಿನ್ನಡೆಯಿಂದಾಗಿ ಈ ಬೃಹತ್ ರಾಜ್ಯದಲ್ಲಿ ಬಿಜೆಪಿಗೆ ಗೆಲುವು ಅನಿವಾರ್ಯವಾಗಿತ್ತು.**



ಮಹಾರಾಷ್ಟ್ರದಲ್ಲಿ ಮಹಾಯುತಿ (ಮೈತ್ರಿಕೂಟ) ಮತ್ತೆ ಅಧಿಕಾರದ ಗದ್ದುಗೆ ಏರಿದೆ. ಎನ್‌ಡಿಎ ಮೈತ್ರಿ ಕೂಟ ಸರಳ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೇರಲಿದೆ ಎಂದು ಚುನಾವಣೋತ್ತರ ಸಮೀಕ್ಷೆಗಳು ಭವಿಷ್ಯ ನುಡಿದಿದ್ದವು. ಆದರೆ ಸಮೀಕ್ಷೆಗಳ ಲೆಕ್ಕಾಚಾರಗಳ ಮೀರಿ ಎನ್‌ಡಿಎ ಅಭೂತಪೂರ್ವ ಸಾಧನೆ ತೋರಿದೆ. ಮಯಾಯುತಿಯ ಸುನಾಮಿಗೆ ಮಹಾವಿಕಾಸ ಅಘಾಡಿಯ ಪಕ್ಷಗಳು ತರಗೆಲೆಗಳಂತೆ ಉದುರಿ ಬಿದ್ದಿವೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕೇವಲ 17 ಸ್ಥಾನ ಗಳಿಸಿ ಕಳಪೆ ಸಾಧನೆ ತೋರಿದ್ದ ಎನ್‌ಡಿಎ ಕೇವಲ ಐದಾರು ತಿಂಗಳಲ್ಲೇ ಫೀನಿಕ್ಸ್ ಪಕ್ಷಿಯಂತೆ ಎದ್ದು, ಗೆದ್ದು ಬೀಗಿರುವ ವಿಶೇಷ ಸಾಧನೆ ಮಾಡಿದೆ. ಮೊದಲ ಬಾರಿಗೆ ಮೈತ್ರಿಕೂಟವೊಂದು 200ರ ಗಡಿ ದಾಟುವ ಅಸಾಮಾನ್ಯ ಸಾಧನೆ ಮಾಡಿದೆ. ಮಹಾವಿಕಾಸ ಅಘಾಡಿಯ ಮಿತ್ರ ಪಕ್ಷಗಳು ಹೀನಾಯ ಸೋಲನನುಭವಿಸಿ ಪ್ರತಿಪಕ್ಷ ನಾಯಕನ ಸ್ಥಾನವನ್ನೂ ಕಳೆದುಕೊಂಡಿದೆ.

ಮಹಾರಾಷ್ಟ್ರದ ಮಹತ್ವ: ಉತ್ತರ ಪ್ರದೇಶದ ನಂತರ 48 ಲೋಕಸಭೆ ಹಾಗೂ 288 ವಿಧಾನ ಸಭಾ ಕ್ಷೇತ್ರಗಳಿರುವ ದೇಶದ ಎರಡನೇ ಅತೀ ದೊಡ್ಡ ರಾಜ್ಯವೆನಿಸಿದೆ. ಮಹಾರಾಷ್ಟ್ರ ದೇಶದ ಆರ್ಥಿಕ ರಾಜಧಾನಿಯಾಗಿದೆ. ಒಟ್ಟು ದೇಶೀಯ ಉತ್ಪನ್ನದಲ್ಲಿ (ಜಿಎಸ್‌ಡಿಪಿ) ಪ್ರಥಮ ಸ್ಥಾನದಲ್ಲಿದ್ದು, ದೇಶದ ಜಿಡಿಪಿಗೆ ಮಹಾರಾಷ್ಟ್ರ ಶೇ. 14 ರಷ್ಟು ಕೊಡುಗೆ ನೀಡುತ್ತಿದೆ. ಈ ರಾಜ್ಯವೊಂದರಲ್ಲೇ ಶೇ. 38.9 ರಷ್ಟು ನೇರ ತೆರಿಗೆ (ಡೈರೆಕ್ಟ್ ಟ್ಯಾಕ್ಸ್) ಸಂಗ್ರಹವಾಗುತ್ತಿದೆ. ಲೋಕಸಭಾ ಚುನಾವಣೆಯಲ್ಲಾದ ಹಿನ್ನಡೆಯಿಂದಾಗಿ ಈ ಬೃಹತ್ ರಾಜ್ಯದಲ್ಲಿ ಬಿಜೆಪಿಗೆ ಗೆಲುವು ಅನಿವಾರ್ಯವಾಗಿತ್ತು.

ಅಮೇರಿಕಾ, ಚೀನಾ, ಯುರೋಪಿಯನ್ ದೇಶಗಳು ದೇಶದ ಆರ್ಥಿಕ ರಾಜಧಾನಿಯಲ್ಲಿ ಬಿಜೆಪಿಯ ಸೋಲನ್ನು ಬಯಸಿದ್ದವು. ಅದಕ್ಕಾಗಿ ಪರೋಕ್ಷವಾಗಿ ಕೆಲಸವನ್ನೂ ಮಾಡಿದ್ದವು ಎಂಬ ಆರೋಪವಿದೆ. ಮುಂಬೈ ಮೇಲೆ ಜಿಹಾದಿಗಳ ಕಣ್ಣಿತ್ತು. ಜಾತಿ ಸಮೀಕ್ಷೆಯ ನೆಪದಲ್ಲಿ ಹಿಂದೂ ಸಮಾಜ ಒಡೆಯುವ ಹುನ್ನಾರ, ಅದಾನಿ ಮೂಲಕ ಭಾರತದ ಷೇರು ಪೇಟೆಯನ್ನು ಪತನಗೊಳಿಸಿ ದೇಶದ ಆರ್ಥಿಕತೆಯನ್ನು ನಾಶ ಮಾಡುವ ಷಡ್ಯಂತ್ರ. ಅಗ್ನಿವೀರ ವಿರುದ್ಧ ಗುಲ್ಲೆಬ್ಬಿಸಿ ದೇಶದ ರಕ್ಷಣೆಯನ್ನು ದುರ್ಬಲಗೊಳಿಸುವುದು. ಮೋದಿಯವರು ಸಂವಿಧಾನ ಬದಲಾಯಿಸಿ ಮೀಸಲಾತಿ ರದ್ದುಗೊಳಿಸುವ ಕಥನದ ಮೂಲಕ ದಲಿತರನ್ನು ಎತ್ತಿಕಟ್ಟುವುದು. ಅಲ್ಪ ಸಂಖ್ಯಾತರಿಗೆ ದೇಶದಲ್ಲಿ ರಕ್ಷಣೆ ಇಲ್ಲ ಎಂದು ಜಾಗತಿಕ ಮಟ್ಟದಲ್ಲಿ ಸುದ್ದಿ ಮಾಡಿ ಸರಕಾರಕ್ಕೆ ಮುಜುಗರ ಉಂಟು ಮಾಡುವುದು. ಈ ರೀತಿ ದೇಶವನ್ನು ದುರ್ಬಲ ಗೊಳಿಸುವ, ದೇಶದಲ್ಲಿ ಗೊಂದಲ ಸೃಷ್ಟಿಸುವ ಅಪಪ್ರಚಾರಗಳಿಗೆ ಅಂತ್ಯ ಹಾಡಲು ಈ ಚುನಾವಣೆಯಲ್ಲಿ ಗೆಲ್ಲಲೇಬೇಕಾದ ಸ್ಥಿತಿ ಎನ್‌ಡಿಎಗೆ ಎದುರಾಗಿತ್ತು. ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ ನಾಮುಂದು ತಾಮುಂದು ಎಂದು ಪರಸ್ಪರ ಸ್ಪರ್ಧೆಯಲ್ಲಿದ್ದ ಅಘಾಡಿಯ ಮಿತ್ರ ಪಕ್ಷಗಳಿಗೆ ಸರಿಯಾದ ಪಾಠ ಕಲಿಸಬೇಕಾಗಿತ್ತು. ಈ ವಿಪರೀತ ಪರಿಸ್ಥಿತಿಯಲ್ಲಿ ಅಘಾಡಿ ಕೂಟವನ್ನು ಸೋಲಿಸಲು ಎನ್‌ಡಿಎ ಮೈತ್ರಿಕೂಟ ಚಾಣಾಕ್ಷ ಕಾರ್ಯತಂತ್ರ ರೂಪಿಸಿ ಚುನವಣಾ ಕಣಕ್ಕಿಳಿಯಿತು.

ಈ ಚುನಾವಣೆಯ ಮಹತ್ವ ಅರಿತಿದ್ದ ಬಿಜೆಪಿಯು ಚುನಾವಣಾ ಪೂರ್ವದಿಂದಲೇ ಭಾರೀ ತಯಾರಿ ನಡೆಸಿತ್ತು. ಅತಿಯಾದ ಆತ್ಮವಿಶ್ವಾಸದಿಂದ ಲೋಕಸಭಾ ಚುನಾವಣೆಯಲ್ಲಿ ಸೋಲಾಗಿತ್ತು ಎಂದು ದೇವೇಂದ್ರ ಫಡ್ನವೀಸ್ ಹೇಳಿಕೆ ನೀಡಿದ್ದರು. ಆ ನಂತರದ ದಿನಗಳಲ್ಲಿ ಫಡ್ನವೀಸ್ ರಾಜ್ಯಾದ್ಯಂತ ಪ್ರವಾಸ ನಡೆಸಿ ಪಕ್ಷವನ್ನು ಪುನರ್ ಸಂಘಟಿಸಿದರು. ಹತಾಶಗೊಂಡಿದ್ದ ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ತುಂಬಿ ವಿಧಾನಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಿದರು. ಫಡ್ನವೀಸ್‌ರೊಂದಿಗೆ ನಿತಿನ್ ಗಡ್ಕರಿಯವರು ಜತೆಗೂಡಿದರು. ಮಧ್ಯ ಪ್ರದೇಶದಲ್ಲಿ ಬಿಜೆಪಿಯ ಅಭೂತಪೂರ್ವ ಜಯಕ್ಕೆ ಕಾರಣರಾಗಿದ್ದ ಕೇಂದ್ರ ಸಚಿವರಾದ ಭೂಪೇಂದ್ರ ಯಾದವ್–ಅಶ್ವಿನ್ ವೈಷ್ಣವ್‌ರು ತೆರೆಯ ಮರೆಯಲ್ಲಿ ಮೌನವಾಗಿ ಕಾರ್ಯನಿರ್ವಹಿಸಿದರು. ಅರ್ಹರಿಗೆ ಟಿಕೆಟ್ ನೀಡುವ, ಭಿನ್ನರನ್ನು ಸಮಾಧಾನಪಡಿಸುವಲ್ಲಿ ಯಶಸ್ವಿಯಾದರು. ಪಕ್ಷದ ಪ್ರಣಾಳಿಕೆ ಬಿಡುಗಡೆಯ ಸಂದರ್ಭದಲ್ಲಿ ಇಬ್ಬರೂ ವೇದಿಕೆಯಲ್ಲಿ ಕಾಣಿಸದೇ ಕಾರ್ಯಕರ್ತರೊಂದಿಗೆ ಕುಳಿತು ಪಕ್ಷದ ವಿಜಯದಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದರು.

ಮಹಾಯುತಿ ಗೆಲ್ಲಿಸಿದ ಅಂಶಗಳು: ಲೋಕಸಭಾ ಚುನಾವಣೆಯಲ್ಲಿ 288 ವಿಧಾನಸಭಾ ಸ್ಥಾನಗಳಲ್ಲಿ 125ರಲ್ಲಿ ಮಹಾಯುತಿ ಹಾಗೂ 153 ರಲ್ಲಿ ಮ.ವಿ. ಅಘಾಡಿ ಮುನ್ನಡೆ ಗಳಿಸಿದ್ದವು. ಆದರೆ ಎರಡು ಮೈತ್ರಿಕೂಟಗಳ ಮತ ಗಳಿಕೆ ಪ್ರಮಾಣದಲ್ಲಿನ ಅಂತರ ಕೇವಲ ಶೇ.1ರಷ್ಟೂ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಜಿಲ್ಲಾವಾರು ಹಿನ್ನಡೆಯಾದ ಸ್ಥಾನಗಳನ್ನು ಗುರುತಿಸಿ ವಿಶೇಷ ಗಮನ ನೀಡಲಾಯಿತು. ಹರಿಯಾಣದಂತೆ ಈ ಬಾರಿ ಮಹಾರಾಷ್ಟ್ರದಲ್ಲೂ ಕೇಂದ್ರ ನಾಯಕರ ಬದಲು ರಾಜ್ಯ ನಾಯಕರಾದ ಫಡ್ನವೀಸ್, ಗಡ್ಕರಿ, ಏಕನಾಥ ಸಿಂಧೆ ಅಜಿತ್ ಪವಾರ್ ಮೊದಲಾದವರಿಗೆ ಚುನಾವಣಾ ಪ್ರಚಾರದ ಹೊಣೆ ವಹಿಸಲಾಯಿತು. ನಿತಿನ್ ಗಡ್ಕರಿ ಒಬ್ಬರೇ ಎಪ್ಪತ್ತಕ್ಕಿಂತ ಹೆಚ್ಚು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು. ಕೇಂದ್ರವು ಈರುಳ್ಳಿ, ಸೋಯಾಬಿನ್, ಹತ್ತಿ ಮೊದಲಾದ ಕೃಷಿ ಉತ್ಪನ್ನಗಳನ್ನು ಬೆಳೆಸುವ ರೈತರಿಗೆ ಸ್ಪಂದಿಸುತ್ತಿಲ್ಲ ಎಂಬ ಆರೋಪದಿಂದ ಲೋಕಸಭೆಯಲ್ಲಿ ಹಿನ್ನಡೆಯಾಗಿತ್ತು. ಅದಕ್ಕಾಗಿ ರಾಜ್ಯ ಬಜೆಟ್‌ನಲ್ಲಿ 7.5 ಅಶ್ವಶಕ್ತಿಯ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಘೋಷಣೆ, ಸಾಲ ಮನ್ನಾ, ಈರುಳ್ಳಿ ಮೇಲಿನ ರಫ್ತು ಶುಲ್ಕ ರದ್ದು. ಖಾದ್ಯ ತೈಲಗಳ ಆಮದು ಸುಂಕ ಹೆಚ್ಚಳ. ಚುನಾವಣೆಯಲ್ಲಿ ಮಹಾಯುತಿಗೆ ಭಾರೀ ಲಾಭ ನೀಡಿತು. ಕರ್ನಾಟಕದ ಗೃಹಲಕ್ಷ್ಮೀ ಯೋಜನೆಯಂತೆ 2.5 ಲಕ್ಷಕ್ಕಿಂತ ಕಡಿಮೆ ಆದಾಯವಿರುವ ಕುಟುಂಬದ ಓರ್ವ ಮಹಿಳೆಯಗೆ ಮಾಸಿಕ ರೂ. 1500 ನೀಡುವ ಲಡ್ಕಿ ಬಹಿನ್ ಯೋಜನೆಯಿಂದ ದೊಡ್ಡ ಪ್ರಮಾಣದಲ್ಲಿ ಮಹಿಳಾ ಮತಗಳು ಒಲಿದವು. ವರ್ಷಕ್ಕೆ ಮೂರು ಅಡುಗೆ ಅನಿಲ ಸಿಲಿಂಡರ್ ಉಚಿತ ನೀಡುವ ಯೋಜನೆ. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮನೋಜ್ ಜಾರಂಗೆಯವರು ಆರಂಭಿಸಿದ ಮರಾಠಾ ಮೀಸಲಾತಿ ಚಳುವಳಿ ಬಿಜೆಪಿಗೆ ಹೊಡೆತ ನೀಡಿತ್ತು. ವಿಧಾನಸಭಾ ಚುನಾವಣೆಯಲ್ಲಿ ಮರಾಠ ಮೀಸಲಾತಿ ವಿಚಾರ ಹೆಚ್ಚು ಸದ್ದು ಮಾಡಲಿಲ್ಲ. ಮರಾಠಾ ಮನಿಸು ಶಮನಗೊಳಿಸುವ ಯತ್ನದೊಡನೆ, ದೊಡ್ಡ ಪ್ರಮಾಣದಲ್ಲಿರುವ ಒಬಿಸಿ ಸಮುದಾಯಗಳ ಮತ ಸೆಳೆಯುವುದಕ್ಕೆ ಬಿಜೆಪಿ ಯತ್ನಿಸಿತು. ಭೂಪೇಂದ್ರ ಯಾದವ್‌ರು ಮಹಾರಾಷ್ಟ್ರದಲ್ಲಿರುವ ಒಬಿಸಿಯ 350 ಸಮುದಾಯದವರನ್ನು ಭೇಟಿಯಾಗಿ ಮನವೊಲಿಸಿದ್ದು ಪಕ್ಷಕ್ಕೆ ವರದಾನವಾಯಿತು. ವಿಶೇಷವೆಂದರೆ ಈ ಚುನಾವಣೆಯಲ್ಲಿ ಚಲಾವಣೆಯಾದ ಸುಮಾರು 80.22 ಲಕ್ಷ ಹೆಚ್ಚುವರಿ ಮತಗಳಲ್ಲಿ ದೊಡ್ಡ ಪಾಲು ಬಿಜೆಪಿ ಮೈತ್ರಿಕೂಟಕ್ಕೆ ಲಭಿಸಿದ್ದು ಅಭೂತಪೂರ್ವ ಜಯವನ್ನು ನೀಡಿತು.

ಮ.ವಿ. ಅಘಾಡಿಗೆ ಸೋಲಿನ ಕಾರಣಗಳು: ಲೋಕಸಭಾ ಚುನಾವಣೆಯಂತೆ ವಿಧಾನಸಭಾ ಚುನಾವಣೆಯಲ್ಲೂ ಗೆಲುವು ತಮ್ಮದೇ ಎಂಬ ಅತಿಯಾದ ಆತ್ಮವಿಶ್ವಾಸದಿಂದ ಅಘಾಡಿ ನೆಲಕಚ್ಚಿತು. ವಿಧಾನಸಭಾ ಚುನಾವಣೆಗೆ ಅವಶ್ಯವಾದ ಕಾರ್ಯತಂತ್ರ ರೂಪಿಸಲೇ ಇಲ್ಲ. ಸ್ಥಾನ ಹೊಂದಾಣಿಕೆಯಲ್ಲಾದ ಎಡವಟ್ಟುಗಳು, ಸಮನ್ವಯದ ಕೊರತೆ, ಚುನಾವಣೆಯ ಆರಂಭದಲ್ಲೇ ಮುಖ್ಯಮಂತ್ರಿ ಸ್ಥಾನಕ್ಕಾಗಿ ಕಚ್ಚಾಟ, ಅಘಾಡಿ ನಾಯಕರು ಚುನಾವಣಾ ಪ್ರಚಾರದಲ್ಲಿ ಮಹಾರಾಷ್ಟ್ರದ ಅಭಿವೃದ್ಧಿಗೆ ಸಂಬಂಧಿಸಿದ ರೋಡ್‌ಮ್ಯಾಪ್ ಆಗಲಿ, ಸ್ಥಳೀಯ ಸಮಸ್ಯೆಗಳ ಪರಿಹಾರಗಳ ಬಗ್ಗೆಯಾಗಲಿ ಪ್ರಸ್ತಾಪಗಳೇ ಇರಲಿಲ್ಲ. ಉದ್ಧವ್, ರಾಹುಲ್ ಗಾಂಧಿ ಸಹಿತ ಅಘಾಡಿಯ ಎಲ್ಲಾ ನಾಯಕರ ಚುನಾವಣಾ ಭಾಷಣಗಳು ಪ್ರಧಾನಿ ಮೋದಿಯವರ ಕೀಳು ಮಟ್ಟದ ಟೀಕೆ, ಅದಾನಿ ಭಜನೆಗೆ ಸೀಮಿತವಾಗಿತ್ತು.

ಲೋಕಸಭಾ ಚುನಾವಣಾ ಸಂದರ್ಭದಲ್ಲಿ ಶಿವಸೇನೆ, ಎನ್‌ಸಿಪಿ ವಿಭಜನೆಯಿಂದ ಉದ್ಧವ್ ಠಾಕ್ರೆ, ಶರದ್‌ಪವಾರ್ ಪರ ಮೂಡಿದ್ದ ಅನುಕಂಪದ ಅಲೆ ವಿಧಾನಸಭಾ ಚುನವಣೆ ವೇಳೆ ಮಾಯವಾಗಿತ್ತು. ಕಾಂಗ್ರೆಸ್‌ನ ಅಸ್ಥಿರ ನೀತಿಗಳು, ಗೋಜಲು ಸಿದ್ಧಾಂತ, ಅವಕಾಶವಾದಿ ಹಿಂದುತ್ವ, ಅಘಾಡಿ ನಾಯಕರ ಅತಿಯಾದ ಅಲ್ಪಸಂಖ್ಯಾತ ಓಲೈಕೆ ನೀತಿಯಿಂದ ಮರಾಠರು, ದಲಿತರು ಸಹಿತ ಸಂಪೂರ್ಣ ಹಿಂದೂ ಸಮಾಜದ ಮತಗಳು ಮಹಾಯುತಿ ಪರ ಕ್ರೋಢೀಕರಿಸಿದ್ದು ಅಘಾಡಿಯ ಸೋಲಿನ ಪೆಟ್ಟಿಗೆಗೆ ಅಂತಿಮ ಮೊಳೆ ಹೊಡೆಯಿತು.

ಆರ್‌ಎಸ್‌ಎಸ್ ಭೂಮಿಕೆ–ಹಿಂದು ಏಕತೆ: ಲೋಕಸಭಾ ಚುನಾವಣೆಯಲ್ಲಿ ತಟಸ್ಥವಾಗಿದ್ದ ಆರ್‌ಎಸ್‌ಎಸ್ ವಿಧಾನಸಭಾ ಚುನಾವಣೆಯಲ್ಲಿ ಸಕ್ರಿಯವಾಗಿ ಮಹಾಯುತಿ ಪರ ಕೆಲಸ ಮಾಡಿತು. 400ಕ್ಕೂ ಹೆಚ್ಚು ಎನ್‌ಜಿಓಗಳು ಮ.ವಿ. ಅಘಾಡಿ ಪರ ಪ್ರಚಾರಕ್ಕೆ ಧುಮುಕಿದ್ದುದನ್ನು ಗಮನಿಸಿ ಅಪಾಯ ಅರಿತ ಆರ್‌ಎಸ್‌ಎಸ್ ಸತರ್ಕಗೊಂಡಿತು. ಮರಾಠಿ ಮುಸ್ಲಿ ಮಂಚ್ ಸಂಘಟನೆಗಳು ಮಸೀದಿ ಮೇಲೆ ಬುಲ್ಡೋಜರ್ ಹರಿಸಿದವರಿಗೆ, ಟ್ರಿಪಲ್ ತಲಾಕ್ ರದ್ದುಪಡಿಸಿದವರಿಗೆ ಮತ ನೀಡಬೇಕೆ? ಎಂಬ ರೀತಿಯ ಹದಿನೈದು ಪ್ರಶ್ನೆಗಳಿರುವ ಕರಪತ್ರಗಳನ್ನು ಮನೆ ಮನೆಗೆ ಹಂಚಿದರು. ಮುಸ್ಲಿಂ ಉಲೇಮಾಗಳ ಆರ್‌ಎಸ್‌ಎಸ್ ಮೇಲೆ ನಿಷೇಧ, ಮುಸ್ಲಿಮರಿಗೆ ಶೇ.10 ಮೀಸಲಾತಿ ಸಹಿತ 17 ಬೇಡಿಕೆಗಳಿಗೆ ಕಾಂಗ್ರೆಸ್ ನಾಯಕತ್ವವು ಸ್ವೀಕೃತಿಯಾಗಲಿ ತಿರಸ್ಕರವಾಗಲಿ ಮಾಡದೇ ಅಧಿಕಾರಕ್ಕೆ ಬಂದಲ್ಲಿ ಈಡೇರಿಸಬಹುದೆಂಬ ಸಂಕೇತವನ್ನು ಪರೋಕ್ಷವಾಗಿ ನೀಡಿತು. ಉದ್ಧವ್ ಠಾಕ್ರೆಯವರಂತೂ ಔರಂಗಜೇಬ್ ತಮ್ಮ ಸಹೋದರ ಎಂದು ಯಾವುದೇ ರೀತಿಯ ನಾಚಿಕೆಯಾಗಲೀ, ಸಂಕೋಚವಾಗಲೀ ಇಲ್ಲದೆ ಹೇಳಿಕೆ ನೀಡಿದರು. ಫಾಲ್ಘರ್‌ನಲ್ಲಿ ಸಾಧುಗಳ ಹತ್ಯೆಯನ್ನು ಉದ್ಧವ್ ಸರ್ಕಾರ ನಿರ್ಲಕ್ಷಿಸಿತು. ಜಾತಿ ಸಮೀಕ್ಷೆ ಹೆಸರಲ್ಲಿ ಹಿಂದೂ ಸಮಾಜ ಒಡೆಯುವ ಉದ್ದೇಶವಿದ್ದ ಕಾರಣ ಈ ಬಾರಿಯ ಮಹಾರಾಷ್ಟ್ರ ಚುನಾವಣೆಯಲ್ಲಿ ಹಣೆ ತುಂಬಾ ಕುಂಕುಮ ಹಚ್ಚಿ, ಶರ್ಟ್‌ನ ಹೊರಗೆ ಜನಿವಾರ ಧರಿಸಿ ಟೆಂಪಲ್ ರನ್ ಮಾಡುವ ರಾಹುಲ್ ಗಾಂಧಿ ಕಾಣಸಿಗಲಿಲ್ಲ.

ಈ ಎಲ್ಲಾ ಸಂಗತಿಗಳನ್ನು ಚುನಾವಣೆ ಘೋಷಣೆಗೆ ಮೊದಲೇ ಆರ್‌ಎಸ್‌ಎಸ್ ಕಾರ್ಯಕರ್ತರು 'ಎಚ್ಚರವಾಗಿರಿ' ಅಭಿಯಾನದ ಮೂಲಕ ಮನೆ ಮನೆಗೂ ಮಾಹಿತಿ ತಲುಪಿಸಿ ಜಾತಿ–ಪಂಥ ಮೀರಿ ಹಿಂದೂಗಳ ಮತಗಳನ್ನು ಕ್ರೋಢೀಕರಿಸಿದ್ದು ಬಿಜೆಪಿ ನೇತೃತ್ವದ ಮಹಾಯುತಿಗೆ ಅಭೂತಪೂರ್ವ ಗೆಲುವು ನೀಡಿತು. ಈ ಅವಧಿಯಲ್ಲಿ ರಾಜ್ಯಾದ್ಯಂತ ಆರ್‌ಎಸ್‌ಎಸ್ ಕಾರ್ಯಕರ್ತರು ಸುಮಾರು ಅರವತ್ತು ಸಾವಿರ ಸಣ್ಣ ಪುಟ್ಟ ಸಭೆಗಳನ್ನು ನಡೆಸಿದ್ದರು. ಇದರ ಜತೆಗೆ ಯೋಗಿ ಆದಿತ್ಯನಾಥರ ಬಟೆಂಗೇ ತೊ ಕಟೆಂಗೆ (ಕಚ್ಚಾಡಿದರೆ ನಾಶವಾಗುವಿರಿ), ಪ್ರಧಾನಿಯವರ ಎಕ್ ಹೈ ತೋ ಸೇಫ್ ಹೈ (ಒಂದಾಗಿದ್ದರೆ ಸುರಕ್ಷಿತ). ಪವನ್ ಕಲ್ಯಾಣರ ಸ್ಫೂರ್ತಿಯುತ ಚುನಾವಣಾ ಭಾಷಣಗಳು ಮತ್ತು ದೇವೇಂದ್ರ ಫಡ್ನವೀಸ್‌ರು ಹೇಳಿದ ಮೂಲಭೂತವಾದಿಗಳ 'ಮತ ಜಿಹಾದ್' ವಿರುದ್ಧ 'ಧರ್ಮಯುದ್ಧ' ಘೋಷಣೆ ಮಹಾರಾಷ್ಟ್ರದಲ್ಲಿ ತೀವ್ರ ಸಂಚಲನವನ್ನು ಉಂಟು ಮಾಡಿತ್ತು.

ಅದ್ಭುತ ವಿಜಯದ ಅಂಕಿ ಅಂಶಗಳು: ಲೋಕಸಭಾ ಚುನಾವಣೆಯಲ್ಲಿ ಮಹಾಯುತಿ 17 ಸ್ಥಾನ ಮಾತ್ರ ಗಳಿಸಿತ್ತು. ಆದರೆ ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿ ಮಹಾಯುತಿ 232 ಕ್ಷೇತ್ರದಲ್ಲಿ ವಿಜಯ ಸಾಧಿಸಿದೆ. ಅಘಾಡಿಯ ಎಲ್ಲಾ ರೀತಿಯ ಅಪಪ್ರಚಾರಗಳಿಗೆ ಮಹಾರಾಷ್ಟ್ರದ ಜನತೆ ಸರಿಯಾದ ಉತ್ತರ ನೀಡಿದ್ದಾರೆ. ಮಹಾಯುತಿ ವಿಜಯಿಯಾದ 232ರಲ್ಲಿ ಬಿಜೆಪಿ 132, ಸಿಂಧೆ ಬಣ 57 ಹಾಗೂ ಅಜಿತ್ ಪವಾರ್ ಬಣ 41ರಲ್ಲಿ ಜಯ ಸಾಧಿಸಿದವು. ಇದಕ್ಕೆ ಪ್ರತಿಯಾಗಿ ಅಘಾಡಿ ಮೈತ್ರಿಕೂಟದಲ್ಲಿನ ಉದ್ಧವ್ ಬಣಕ್ಕೆ 20, ಶರದ್ ಪವಾರ್‌ರ ಎನ್‌ಸಿಪಿಗೆ ಹತ್ತು ಹಾಗೂ ಕಾಂಗ್ರೆಸ್‌ಗೆ ಕೇವಲ 15 ಸ್ಥಾನ ಲಭಿಸಿದವು. ವಲಯವಾರು, ಜಾತಿ ಕೇಂದ್ರಿತ ಪ್ರದೇಶಗಳಲ್ಲೂ ಮಹಾಯುತಿ ಮೇಲುಗೈ ಸಾಧಿಸಿದೆ. ಶರದ್ ಪವಾರ್‌ರ ಭದ್ರಕೋಟೆ ಎನಿಸಿದ ಪಶ್ಚಿಮ ಮಹಾರಾಷ್ಟ್ರದ 70ರಲ್ಲಿ ಮಹಾಯುತಿ 50ರಲ್ಲಿ ವಿಜಯಿಯಾಗಿದೆ. ಲೋಕಸಭಾ ಚುನಾವಣೆಯಲ್ಲಿ ಅಸಮಾಧಾನಗೊಂಡಿದ್ದ ಕೃಷಿಕರು–ಕಾರ್ಮಿಕರೇ ನಿರ್ಣಾಯಕರಾಗಿರುವ ಹಿಂದುಳಿದ ವಿದರ್ಭ–ಮರಾಠವಾದ ಪ್ರದೇಶದ ಒಟ್ಟು 107 ಸ್ಥಾನಗಳಲ್ಲಿ ಮಹಾಯುತಿ 81ರಲ್ಲಿ ಯಶಸ್ಸು ಗಳಿಸಿದೆ. ಈರುಳ್ಳಿ ರಫ್ತು ಮೇಲೆ ಹೇರಿದ ನಿರ್ಬಂಧದಿಂದ ಲೋಕಸಭೆ ಚುನಾವಣೆಯಲ್ಲಿ ಹೊಡೆತ ತಿಂದಿದ್ದ ಮಹಾಯುತಿಯು ಉತ್ತರ ಮಹಾರಾಷ್ಟ್ರದಲ್ಲೂ 36ರಲ್ಲಿ 30 ಸ್ಥಾನಗಳಲ್ಲಿ ಗೆಲುವು ಸಾಧಿಸಿ ಅದ್ಭುತ ಚೇತರಿಕೆ ತೋರಿತು. ಅವಿಭಜಿತ ಶಿವಸೇನೆಯ ಕೋಟೆಯಾಗಿದ್ದ ಮುಂಬೈ ಮಹಾನಗರದ 36ರಲ್ಲಿ ಮಹಾಯುತಿ 25 ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ಬುಡಕಟ್ಟು ಬಾಹುಳ್ಯದ 39 ಸ್ಥಾನಗಳಲ್ಲಿ ಬಿಜೆಪಿ 28ರಲ್ಲಿ ಗೆಲುವಿನ ನಗೆ ಬೀರಿತು. ದಲಿತರ ಮತಗಳ ನಿರ್ಣಾಯಕವಾಗಿರುವ 18 ಕ್ಷೇತ್ರಗಳಲ್ಲಿ 14ರಲ್ಲಿ ಮಹಾಯುತಿ ವಿಜಯಿಯಾದರೆ ಕಾಂಗ್ರೆಸ್ ಕೇವಲ ಮೂರರಲ್ಲಿ ಗೆಲುವು ಪಡೆಯಿತು. ಓಬಿಸಿಗಳು ನಿರ್ಣಾಯಕವಾಗಿರುವ 160 ಕ್ಷೇತ್ರಗಳಲ್ಲಿ ಮಹಾಯುತಿ 119 ರಲ್ಲಿ ಗೆದ್ದು ಪ್ರಚಂಡ ವಿಜಯ ದಾಖಲಿಸಿತು. ವಿಶೇಷವೆಂದರೆ ಮುಸ್ಲಿಂ ಮತದಾರರೇ ನಿರ್ಣಾಯಕವಾಗಿರುವ 31 ವಿಧಾನಸಭಾ ಕ್ಷೇತ್ರಗಳಲ್ಲಿ ಮ.ವಿ. ಅಘಾಡಿಗೆ ಮಹಾಯುತಿ ಕೂಟವು ಕಠಿಣ ಹೋರಾಟ ನೀಡಿ 15ರಲ್ಲಿ ಗೆಲುವು ಸಾಧಿಸಿದ್ದು ವಿಶೇಷವಾಗಿದೆ. ಈ ರೀತಿ ಉತ್ತಮ ಕಾರ್ಯತಂತ್ರ ಸಂಘಟಿತ ಪ್ರಚಾರ, ಅಭಿವೃದ್ಧಿ ಪರ ನೀತಿಗಳನ್ನು ಮತದಾರರಿಗೆ ಮನವರಿಕೆ ಮಾಡುವ ಮೂಲಕ ಬಿಜೆಪಿ ನೇತೃತ್ವದ ಮಹಾಯುತಿ ಕೂಟವು ಮಹಾರಾಷ್ಟ್ರದಲ್ಲಿ ಅಭೂತಪೂರ್ವ ವಿಜಯ ಗಳಿಸಿದೆ. ಪ್ರಧಾನಿ ಮೋದಿಯವರ ಪ್ರಕಾರ 'ಮಹಾರಾಷ್ಟ್ರದಲ್ಲಿ ಅಭಿವೃದ್ಧಿ, ಸುಶಾಸನ ಮತ್ತು ಸಾಮಾಜಿಕ ನ್ಯಾಯಕ್ಕೆ ಜಯ ಲಭಿಸಿದೆ. ಸುಳ್ಳು ಮತ್ತು ಕಪಟತನಕ್ಕೆ ಬಲವಾದ ಪೆಟ್ಟು ನೀಡಿದೆ'.

ಇಪಿಎಫ್‌ಓ 3.0: ಎಟಿಎಂ ಮೂಲಕವೂ ಪಿಎಫ್ ವಿತ್‌ಡ್ರಾ ಮಾಡಲು ಅವಕಾಶ ಸಾಧ್ಯತೆ

ನವದೆಹಲಿ, ನ.29– ಮಹತ್ವಾಕಾಂಕ್ಷಿಯ ಪ್ಲಾನ್ 2.0 ಯೋಜನೆ ಘೋಷಣೆ ಮಾಡಿದ ಬಳಿಕ ಕೇಂದ್ರ ಸರ್ಕಾರ, ಇಪಿಎಫ್‌ಓ 3.0 ಯೋಜನೆಯನ್ನು ಅನಾವರಣ ಮಾಡುವ ಪ್ರಯತ್ನ ಮಾಡುತ್ತಿದೆ. ಈಗಾಗಲೇ ಪಿಎಫ್‌ನ ಭಾಗವಾಗಿರುವ ಉದ್ಯೋಗಿಗಳಿಗೆ ಹೊಸ ವೈಶಿಷ್ಟ್ಯಗಳನ್ನು ಪರಿಚಯಿಸುತ್ತಿದೆ. ಎಕ್ಸ್‌ಕ್ಲೂಸಿವ್ ಆಗಿ ಈ ಮಾಹಿತಿಯನ್ನು ಕೇಂದ್ರ ಸರ್ಕಾರದ ಮೂಲಗಳು ಹಂಚಿಕೊಂಡಿದೆ.

ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಓ) ಭವಿಷ್ಯ ನಿಧಿಗೆ (ಪೆಫ್) ಉದ್ಯೋಗಿ ಕೊಡುಗೆಗಳ ಮೇಲಿನ 12% ಮಿತಿಯನ್ನು ತೆಗೆದುಹಾಕಬಹುದು ಎನ್ನಲಾಗಿದೆ. ಪಿಎಫ್ ಹೊಂದಿರುವ ಉದ್ಯೋಗಿಗಳು ಎಟಿಎಂಗಳನ್ನು ಬಳಸಿಕೊಂಡು ನೇರವಾಗಿ ಪಿಎಫ್ ಹಿಂಪಡೆಯುವ ಆಯ್ಕೆಯನ್ನೂ ನೀಡುವ ಸಾಧ್ಯತೆ ಇದೆ. ಆ ಮೂಲಕ ಹಣ ವಿತ್‌ಡ್ರಾ ಅನ್ನು ಇನ್ನಷ್ಟು ಅನುಕೂಲಕರವಾಗಿರಿಸುವ ಗುರಿಯನ್ನು ಹೊಂದಿದೆ. ಉದ್ಯೋಗಿಗಳು ತಮ್ಮ ಉಳಿತಾಯದ ಆದ್ಯತೆಗಳ ಆಧಾರದ ಮೇಲೆ ತಮ್ಮ ಪಿಎಫ್ ಖಾತೆಗಳಿಗೆ ಕೊಡುಗೆ ನೀಡಲು ಸಾಧ್ಯವಾಗಲಿದೆ ಎಂದೂ ವರದಿಯಾಗಿದೆ.

ಯೋಜನೆಯು ಯಾವುದೇ ಸಮಯದಲ್ಲಿ ಪ್ರಸ್ತುತ ಮಿತಿಯನ್ನು ಮೀರಿ ಠೇವಣಿಗಳನ್ನು ಅನುಮತಿಸಬಹುದಾಗಿದೆ. ಹಾಗಿದ್ದರೂ, ಉದ್ಯೋಗದಾತರ ಕೊಡುಗೆಗಳು ಸಂಬಳ ಆಧಾರಿತವಾಗಿ ಉಳಿಯುತ್ತವೆ ಆ ಮೂಲಕ ವ್ಯವಸ್ಥೆಯಲ್ಲಿ ಸ್ಥಿರತೆಯನ್ನು ಖಾತ್ರಿಪಡಿಸುತ್ತದೆ ಎಂದು ತಿಳಿಸಿದ್ದಾರೆ.

ಹೆಚ್ಚಿನ ಉಳಿತಾಯಕ್ಕೆ ಹೆಚ್ಚಿನ ಸ್ವಾತಂತ್ರ್ಯ: ಈ ಪ್ರಸ್ತಾವನೆಯು ಆರಂಭಿಕ ಚರ್ಚೆಯ ಹಂತದಲ್ಲಿದೆ. ಹೆಚ್ಚಿನ ಉಳಿತಾಯಕ್ಕೆ ಪ್ರಾಮುಖ್ಯತೆ ಹಾಗೂ ತಮ್ಮ ಹಣದ ಬಗ್ಗೆ ಹೆಚ್ಚಿನ ಸ್ವಾತಂತ್ರ್ಯ ನೀಡುವುದು ಸರ್ಕಾರದ ಪ್ರಾಥಮಿಕ ಗುರಿಯಾಗಿದೆ. ಪಿಎಫ್ ಉದ್ಯೋಗಿಗಳು ತಮ್ಮ ಹೆಚ್ಚುವರಿ ಮೊತ್ತವನ್ನು ಭವಿಷ್ಯದ ಪ್ರಯೋಜನಗಳಿಗಾಗಿ ಹೆಚ್ಚಿನ ಪಿಂಚಣಿಗಳಾಗಿ ಪರಿವರ್ತಿಸಬಹುದು ಎಂದು ವರದಿ ಹೇಳಿದೆ.

ಎಟಿಎಂ ಮೂಲಕ ಪಿಎಫ್ ವಿತ್‌ಡ್ರಾ: ಕಾರ್ಮಿಕ ಸಚಿವಾಲಯವು ಎಟಿಎಂಗಳ ಮೂಲಕ ಪಿಎಫ್ ಹಿಂಪಡೆಯುವಿಕೆಯನ್ನು ಸಕ್ರಿಯಗೊಳಿಸಲು ಕಾರ್ಡ್‌ಗಳನ್ನು ನೀಡುವ ಕೆಲಸ ಮಾಡುತ್ತಿದೆ ಎಂದು ವರದಿಯಾಗಿದೆ. ಈ ಸೌಲಭ್ಯವನ್ನು 2025ರ ಮೇ–ಜೂನ್ ವೇಳೆಗೆ ಬಿಡುಗಡೆ ಮಾಡುವ ನಿರೀಕ್ಷೆಯಿದೆ.

ಪೋಷಕತ್ವ ಅರ್ಜಿ ಆಹ್ವಾನ

ಮೈಸೂರು,ನ.29–ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವ್ಯಾಪ್ತಿಯ ಬಾಲಕರ, ಬಾಲಕಿಯರ ಸರ್ಕಾರಿ ಬಾಲಮಂದಿರ ಹಾಗೂ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಪಾಲನೆ, ಪೋಷಣೆ ಮತ್ತು ರಕ್ಷಣೆ ಅಗತ್ಯವಿರುವ ಏಕಪೋಷಕ, ತಂದೆ–ತಾಯಿ ಕಳೆದುಕೊಂಡ ಮಕ್ಕಳು ಅಥಾ ಕುಟುಂಬ, ಪರಿವಾರದ ಆರೈಕೆಯಿಂದ ವಂಚಿತರಾದ ಮಕ್ಕಳಿಗೆ ಮಿಷನ್ ವಾತ್ಸಲ್ಯ ಯೋಜನೆಯಡಿ ಪೋಷಕತ್ವ (Foster Care) ಯೋಜನೆ ಅಡಿ ಮಕ್ಕಳಿಗೆ ತಾತ್ಕಾಲಿಕವಾಗಿ ಕುಟುಂಬದಲ್ಲಿ ಪಾಲನೆ. ಪೋಷಣೆ ಮತ್ತು ರಕ್ಷಣೆ ನೀಡಲು ಅವಕಾಶವಿದ್ದು, ಮೈಸೂರು ಜಿಲ್ಲೆಯಲ್ಲಿ ಇಂತಹ ಮಕ್ಕಳಿಗೆ ಪೋಷಕತ್ವ ಯೋಜನೆಯಡಿ ಕೌಟುಂಬಿಕ ವಾತಾವರಣ ಕಲ್ಪಿಸಲು ಇಚ್ಛಿಸುವ ಕುಟುಂಬಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ವಿಜಯನಗರದ 4ನೇ ಹಂತದಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ದೂ.ಸಂ: 0821–2543003.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಶನಿವಾರ 30 ನವೆಂಬರ್ 2024

ಸಂಪರ್ಕ ಭಾಷೆ ಇಂಗ್ಲೀಷ್; ಆದರೆ ಹೃದಯ ಭಾಷೆ ಕನ್ನಡವಾಗಲಿ...

ಶಾಸಕ ಜಿ.ಟಿ.ದೇವೇಗೌಡರ ಅಭಿಮತ



ಶ್ರೀಸುಬ್ರಹ್ಮಣ್ಯ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಏರ್ಪಡಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಮೈಸೂರು. ನ.29(ಎಸ್‌ಪಿಎನ್)– ಆದಿಕವಿ ಪಂಪನಿಂದ ಕುವೆಂಪುವರೆಗೆ ರಚಿತವಾಗಿರುವ ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ. ಈ ಸಾಹಿತ್ಯ ಕನ್ನಡ ಪರಂಪರೆ, ಸಂಸ್ಕೃತಿಯ ಆತ್ಮವೂ ಹೌದು ಎಂದು ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ 3ನೇ ಹಂತದಲ್ಲಿರುವ ವಿನಾಯಕ ದೇವಸ್ಥಾನ ಆವರಣದಲ್ಲಿ ಶ್ರೀಸುಬ್ರಹ್ಮಣ್ಯ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಏರ್ಪಡಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಆದಿಕವಿ ಪಂಪನಿಂದ ಕುವೆಂಪುನವರೆಗಿನ ಸಾಹಿತ್ಯದಲ್ಲಿ ನಾಡು–ನುಡಿಗೆ ಸೇವೆ ಸಲ್ಲಿಸಿದವರ ಇತಿಹಾಸವಿದೆ. ರಾಜ–ಮಹಾರಾಜರ ಕಾಲದಲ್ಲಿ ಕನ್ನಡದವರ ಆಳ್ವಿಕೆ ಎಲ್ಲಿಯವರೆಗೆ ಇತ್ತು ಎಂಬುದರ ಮಾಹಿತಿ ಇದೆ. ಅಂತೆಯೇ ಕನ್ನಡ ಸಾಹಿತ್ಯದಲ್ಲಿ ಮಾನವೀಯ ಮೌಲ್ಯ, ಸಮ ಸಮಾಜ ನಿರ್ಮಾಣದ ಉಲ್ಲೇಖವಿದೆ ಎಂದ ಅವರು, ಕನ್ನಡ ಎಂದರೆ ಕೇವಲ ಸಂಪರ್ಕದ ಭಾಷೆಯಲ್ಲ. ಇದು ಹೃದಯದಿಂದ ವ್ಯಕ್ತವಾಗುವ ಅಭಿವ್ಯಕ್ತಿ. ಕನ್ನಡಿಗರ ಸ್ವಾಭಿಮಾನ ಸಂಕೇತವಾದ ರಾಜ್ಯೋತ್ಸವದಲ್ಲಿ ಬಡಾವಣೆಯ ಪ್ರತಿಯೊಬ್ಬರು ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು. ಇಂಗ್ಲಿಷ್ ಸೇರಿದಂತೆ ಜಗತ್ತಿನ ಇತರೆ ಭಾಷೆಗಳಿಗಿಂತ ಕನ್ನಡ ಅತ್ಯಂತ ಸುಂದರ ಭಾಷೆ ಎಂದು ಅನೇಕ ಭಾಷಾ ತಜ್ಞರು ಉಲ್ಲೇಖ ಮಾಡಿದ್ದಾರೆ. ಕೇಂದ್ರ ಸರ್ಕಾರ ಕನ್ನಡದ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡಿ ಗೌರವಿಸಿದೆ ಎಂದ ಅವರು, ಬದಲಾಗುತ್ತಿರುವ

> "ಸುಬ್ರಹ್ಮಣ್ಯ ನಗರದ ನಿವಾಸಿಗಳು ಮೂಲಸೌಕರ್ಯ ಒದಗಿಸುವಂತೆ ಹಲವು ಬಾರಿ ನನಗೆ ಮನವಿ ಮಾಡಿದ್ದೀರಿ. ಇಲ್ಲಿನ ಒಳಚರಂಡಿ, ಬೀದಿ ದೀಪ ಅಳವಡಿಕೆ ಜೊತೆಗೆ ರಸ್ತೆ ಅಭಿವೃದ್ಧಿಗೆ ಈಗಾಗಲೇ 60 ಲಕ್ಷ ಅನುದಾನ ಬಿಡುಗಡೆಯಾಗಿದೆ. ಇಲ್ಲಿನ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ವಾಣಿವಿಲಾಸ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದು, ಈ ಸಮಸ್ಯೆಗೂ ಮುಕ್ತಿ ದೊರೆಯಲಿದೆ.
>
> –ಶಾಸಕ ಜಿ.ಟಿ.ದೇವೇಗೌಡರು

ಜಗತ್ತಿನಲ್ಲಿ ಸಂಪರ್ಕ ಭಾಷೆಯಾಗಿ ಇಂಗ್ಲಿಷ್ ಕಲಿಕೆ ಅನಿವಾರ್ಯವಾದರೂ ಹೃದಯ ಭಾಷೆ ಕನ್ನಡ ಕಲಿಯುವುದು, ಇತರರಿಗೆ ಕಲಿಸುವುದು ನಮ್ಮತನದ ಸಂಕೇತ ಎಂದರು. ಇಂದಿನ ಯುವ ಪೀಳಿಗೆ ವ್ಯವಹಾರಿಕ ಭಾಷೆ ಇಂಗ್ಲಿಷ್ ಕಲಿಕೆಗೆ ಮುಂದಾಗುತ್ತಿದ್ದಾರೆ. ಅದು ಸ್ವಾಭಿಮಾನ ಬಿಟ್ಟು ಹೋಗುವುದು ಎಷ್ಟು ಸರಿ ಎಂದು ಪ್ರಶ್ನಿಸಿದ ಅವರು, ನಮ್ಮ ನೆಲದಲ್ಲಿ ಕನ್ನಡ ಉಳಿವಿಗೆ ಹೋರಾಡುವ ಸ್ಥಿತಿ ಬಂದಿರುವುದು ಬೇಸರದ ಸಂಗತಿ. ಹಾಗಾಗಿ ಜಾಗತಿಕ ಮಟ್ಟದಲ್ಲಿ ಜ್ಞಾನಕ್ಕಾಗಿ ಯಾವ ಭಾಷೆಯನ್ನಾದರೂ ಅಭ್ಯಸಿಸಿ, ಈ ನೆಲದಲ್ಲಿ ನಾವಾಡುವ ಭಾಷೆ ಕನ್ನಡವೇ ಪ್ರದಾನವಾಗಿರಬೇಕು ಎಂದು ಕಿವಿಮಾತು ಹೇಳಿದರು.

ಇದಕ್ಕೂ ಮುನ್ನ ಹುಯಿಲಗೋಳ ನಾರಾಯಣರಾಯರು ರಚಿತ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು', ರಾಷ್ಟ್ರಕವಿ ಕುವೆಂಪು ಅವರ 'ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು', 'ಒಂದೇ ಒಂದೇ ಕರ್ನಾಟಕ ಒಂದೇ', ಸಿದ್ದಯ್ಯ ಪುರಾಣಿಕ ಅವರ ಹೊತ್ತಿತೋ ಹೊತ್ತಿತು ಕನ್ನಡದ ದೀಪ, ಮುಗಿಯಿತೋ ಮುಗಿಯಿತು ಶತಮಾನಗಳ ಶಾಪ', ಚೆನ್ನವೀರ ಕಣವಿ ಅವರ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ, ಹಸಿಗೋಡೆಯ ಹರಳಿನಂತೆ, ಹುಸಿಹೋಗದ ಕನ್ನಡ ಕವಿತೆ ಸೇರಿದಂತೆ ಹಲವು ಕವಿಗಳ ಕವಿತೆಗಳನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ರುಚಿ ದಿ ಪ್ರಿನ್ಸ್ ಹೋಟೆಲ್ ಮಾಲೀಕ ಸುರೇಶ್, ಲೀ ರುಚಿ ಹೋಟೆಲ್ ಮಾಲೀಕ ಮಂಜುನಾಥ್, ಜೆಡಿಎಸ್ ಮುಖಂಡ ಮಂಜುನಾಥ್, ಸುಬ್ರಹ್ಮಣ್ಯನಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೃಷ್ಣೇಗೌಡ, ಕಾರ್ಯದರ್ಶಿ ಡಾ.ಸುಮಿತ್ರ, ಚಲನಚಿತ್ರ ನಿರ್ದೇಶಕ ಸಿದ್ದೇಗೌಡ, ಮುಕ್ತ ವಿವಿ ಪ್ರಾಧ್ಯಾಪಕ ಡಾ.ಅವರೇಕಾಡು ವಿಜಯ್‌ಕುಮಾರ್ ಸೇರಿದಂತೆ ಇತರೆ ಮುಖಂಡರಿದ್ದರು.

ಮುಡಾಗೆ ವಕೀಲರ ತಂಡಕ್ಕೆ ನೇಮಕಾತಿಗೆ ಉಪ ಸಮಿತಿ ರಚನೆ

ಮೈಸೂರು, ನ.29(ಬಿಎಲ್‌ಯು)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ಕ್ಕೆ ವಕೀಲರ ತಂಡಕ್ಕೆ ನಿಯಮಾನುಸಾರ ನೇಮಕ ಮಾಡಿಕೊಳ್ಳಲು ಉಪ ಸಮಿತಿ ರಚನೆ ಮಾಡಲಾಗಿದೆ ಎಂದು ಪ್ರಾಧಿಕಾರದ ಆಯುಕ್ತ ರಘುನಂದನ್ ತಿಳಿಸಿದ್ದಾರೆ.

ಈ ಸಂಬಂಧ ನವೆಂಬರ್ 11 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಉಪ ಸಮಿತಿ ರಚನೆ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಮುಡಾಗೆ ವಕೀಲರ ಪೇನಲ್ ವೃಂದಕ್ಕೆ ವಕೀಲರುಗಳನ್ನು ನಿಯಮಾನುಸಾರ ನೇಮಕ ಮಾಡಿಕೊಳ್ಳಲು ಹಾಗೂ ಪೇನಲ್ ವಕೀಲರ ಗೌರವ ಧನ ಕುರಿತು ಶಿಫಾರಸು ಕೈಗೊಂಡು ಪ್ರಾಧಿಕಾರದ ಸಭೆಯ ಅನುಮೋದನೆಗೆ ಮಂಡಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದ್ದಾರೆ. ಮುಡಾ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಉಪ ಸಮಿತಿ ಅಧ್ಯಕ್ಷರಾಗಿದ್ದು, ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ವಿಧಾನಸಭಾ ಸದಸ್ಯ ದರ್ಶನ್ ಧ್ರುವನಾರಾಯಣ್, ಮುಡಾ ಆಯುಕ್ತನಾದ ತಾವು ಹಾಗೂ ಕಾನೂನು ಅಧಿಕಾರಿಗಳಾದ ನಿವೃತ್ತ ಜಿಲ್ಲಾ ನ್ಯಾಯಾಧೀಶ ಆರ್.ಚಂದ್ರಶೇಖರ್ ಅವರನ್ನು ಸದಸ್ಯರಾಗಿ ನೇಮಕ ಮಾಡಲಾಗಿದೆ ಎಂದು ರಘುನಂದನ್ ಮಾಹಿತಿ ನೀಡಿದ್ದಾರೆ.

ಪತ್ನಿ ಕೊಂದವನಿಗೆ ಜೀವಾವಧಿ ಶಿಕ್ಷೆ

ಮೈಸೂರು, ನ. 29(ಆರ್‌ಕೆ)– ಕುಡಿಯಲು ಹಣ ನೀಡದ ಪತ್ನಿಯನ್ನು ಕುತ್ತಿಗೆ ಬಿಗಿದು, ಉಸಿರು ಕಟ್ಟಿಸಿ ಕೊಲೆ ಮಾಡಿದ್ದ ಪತಿಗೆ ಮೈಸೂರು ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ.

ಹೆಚ್.ಡಿ.ಕೋಟೆ ನಾಗಮ್ಮನ ಬಡಾವಣೆ ನಿವಾಸಿ ನಾಗರಾಜು ಅವರ ಪುತ್ರ ಮಂಜುನಾಥ ಅಲಿಯಾಸ್ ಮಂಜು (37) ಶಿಕ್ಷೆಗೆ ಗುರಿಯಾದ ಕೊಲೆ ಆರೋಪಿ. 6 ವರ್ಷಗಳ ಹಿಂದೆ ಶೋಭಾರನ್ನು ಮದುವೆ ಮಾಡಿಕೊಂಡಿದ್ದ ಆತ, 2022ರ ಮೇ 29ರಂದು ಸಂಜೆ 7 ಗಂಟೆ ವೇಳೆಗೆ ಕುಡಿಯಲು ಹಣ ನೀಡುವಂತೆ ಪತ್ನಿಗೆ ಒತ್ತಾಯಿಸಿದ.

ಹಣ ಕೊಡಲು ನಿರಾಕರಿಸಿದಾಗ ಶೋಭಾಳ ಕುತ್ತಿಗೆ ಬಿಗಿದು ಉಸಿರು ಕಟ್ಟಿಸಿ ಕೊಲೆ ಮಾಡಿದ್ದ. ಪ್ರಕರಣ ದಾಖಲಿಸಿಕೊಂಡಿದ್ದ ಹೆಚ್.ಡಿ.ಕೋಟೆ ಠಾಣೆ ಇನ್‌ಸ್ಪೆಕ್ಟರ್ ಬಸವರಾಜು, ಮಂಜುನಾಥ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 7ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎಂ. ರಮೇಶ ವಾದ–ಪ್ರತಿವಾದಗಳನ್ನು ಆಲಿಸಿದ ಬಳಿಕ ಸಾಕ್ಷ್ಯಾಧಾರಗಳಿಂದ ಕೊಲೆ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಮಂಜುನಾಥನಿಗೆ ಜೀವಾವಧಿ ಶಿಕ್ಷೆ ಹಾಗೂ 10,000 ರೂ. ದಂಡ ವಿಧಿಸಿ ನವೆಂಬರ್ 26 ರಂದು ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಕೆ. ನಾಗರಾಜ ವಾದ ಮಂಡಿಸಿದ್ದರು.

ಕಟ್ಟಡ ಕಾರ್ಮಿಕರಿಗೆ ಸಲಕರಣೆ ಕಿಟ್ ವಿತರಣೆ



ವರುಣಾ ಗ್ರಾಮದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಕಟ್ಟಡ ಕಾರ್ಮಿಕರಿಗೆ ಸಲಕರಣೆ ಕಿಟ್ ಅನ್ನು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ವಿತರಿಸಿದರು. ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್, ಕಾಂಗ್ರೆಸ್ ಮುಖಂಡರಾದ ಭುಗತಗಳ್ಳಿ ಮಣಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ವರುಣ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಚಿಕ್ಕದೇವಯ್ಯ, ಗ್ರಾಮ ಪಂಚಾಯಿತಿ ಸದಸ್ಯರಾದ ಮಿಲ್ಟ್ರಿ ಮಹದೇವ್, ದೇವರಾಜ್, ಅಲ್ಪಸಂಖ್ಯಾತರ ಜಿಲ್ಲಾ ಉಪಾಧ್ಯಕ್ಷ ನಗರ್ಲೆ ಅಲ್ತಾಪಾಷ, ಚೋರನಹಳ್ಳಿ ರಾಜು, ಕಾರ್ಮಿಕ ಅಧಿಕಾರಿಗಳಾದ ಚೇತನ್ ಕುಮಾರ್, ಚಿಕ್ಕಳ್ಳಿ ವೆಂಕಟಪ್ಪ, ನಾಗೇಂದ್ರ, ಮಾದೇವ, ದೇವಣ್ಣ ಮತ್ತಿತರರು ಉಪಸ್ಥಿತರಿದ್ದರು.

ನಿಧನ

ಶ್ರೀಮತಿ ಲೀನಾ ಪೆರೇರಾ



ಮೈಸೂರು, ನ.29– ಮೈಸೂರಿನ ಬೃಂದಾವನ ಬಡಾವಣೆ ನಿವಾಸಿ ವಿಕ್ಟರ್ ಪೆರೇರಾ ಅವರ ಪತ್ನಿ ಶ್ರೀಮತಿ ಲೀನಾ ಪೆರೇರಾ(74) ಗುರುವಾರ ಸಂಜೆ ಹೃದಯಾಘಾತದಿಂದ ನಿಧನರಾದರು.

ಮೃತರು ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಇಬ್ಬರು ಸೊಸೆಯಂದಿರು, ಆರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಡಿ.2 ರಂದು ಬೃಂದಾವನ ಬಡಾವಣೆಯಲ್ಲಿರುವ ಅವರ ನಿವಾಸದಲ್ಲಿ ಬೆಳಗ್ಗೆ 8 ರಿಂದ 10 ಗಂಟೆಯವರೆಗೆ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶವಿರುತ್ತದೆ. ಬಳಿಕ 10.30ಕ್ಕೆ ಯಾದವಗಿರಿಯ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಪ್ರಾರ್ಥನೆ ನಂತರ ಅಂದು ಮಧ್ಯಾಹ್ನ ಗಾಂಧಿನಗರದ ಕ್ಯಾಥೋಲಿಕ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿ.ಮಹೇಶ್



ಮೈಸೂರು ವಿಜಯಶ್ರೀಪುರ ನಿವಾಸಿ ಡಿ.ಮಹೇಶ್(55) ಅವರು ಅಲ್ಪಕಾಲದ ಅಸ್ವಸ್ಥತೆ ನಂತರ ಇಂದು ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ, ಇಬ್ಬರು ಸಹೋದರರು, ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಟಿ.ಆರ್.ಗೀತಾ



ಕಳೆದ 50 ವರ್ಷದಿಂದ ಧನ್ವಂತ್ರಿ ರಸ್ತೆಯಲ್ಲಿ ಶ್ರೀ ಕೃಪಾ ಕ್ಲಿನಿಕ್ ನಡೆಸಿಕೊಂಡು ಬರುತ್ತಿದ್ದ ಜನರಲ್ ಪ್ರಾಕ್ಟೀಷನರ್(ಜಿಪಿ) ಡಾ. ಟಿ.ಆರ್.ಗೀತಾ(83) ಅವರು ಮೈಸೂರಲ್ಲಿ ಕಳೆದ ರಾತ್ರಿ ನಿಧನರಾದರು. ಇವರು ಮೈಸೂರು ಮೆಡಿಕಲ್ ಕಾಲೇಜು ಹಳೆ ವಿದ್ಯಾರ್ಥಿ. ಮೈಸೂರು ಕೆ.ಎನ್.ಅಗ್ರಹಾರ ನಿವಾಸಿಯೂ ಆದ ಇವರು ಅವಿವಾಹಿತರಾಗಿದ್ದು, ಹಿರಿಯ ಸಹೋದರಿ, ಕಿರಿಯ ಸಹೋದರ ಹಾಗೂ ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಅಂತಾರಾಷ್ಟ್ರೀಯ ಕಲೆ ಸಮಾಗಮ; 50ಕ್ಕೂ ಹೆಚ್ಚು ಅದ್ಭುತ ಕೃತಿಗಳ ಪ್ರದರ್ಶನ



ಮೈಸೂರಿನ BHIO ಆವರಣದಲ್ಲಿ ಅಂತಾರಾಷ್ಟ್ರೀಯ ಕಲೆ ಸಮಾಗಮ ಇತ್ತೀಚೆಗೆ ನಡೆಯಿತು.

ಮೈಸೂರು,ನ.29–ಸ್ವಾಸ್ತಿ ಸಮಕಾಲೀನ ಕಲೆ ಗ್ಯಾಲರಿ, ಎಚ್‌ಸಿಜಿ ಫೌಂಡೇಶನ್, ಐ ಆ್ಯಮ್ 2024, ಇಟ್ಸಿ ಬಿಟ್ಸಿ, ಐಎಚ್‌ಡಿ ಯುವಾ, ಮತ್ತು ಭಾರತ ಆಸ್ಪತ್ರೆ ಮತ್ತು ಆಂಕಾಲಜಿ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕಲೆ ಸಮಾಗಮ BHIO ಆವರಣದಲ್ಲಿ ಯಶಸ್ವಿಯಾಗಿ ಮುಕ್ತಾಯವಾಯಿತು.

ನವೆಂಬರ್ 14ರಿಂದ 23ರವರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಭಾರತೀಯ ಮತ್ತು ಅಂತಾರಾಷ್ಟ್ರೀಯ ಕಲಾವಿದರು ಭಾಗವಹಿಸಿ, 50ಕ್ಕೂ ಹೆಚ್ಚು ನಾವೀನ್ಯ ಕೃತಿಗಳನ್ನು ಸೃಷ್ಟಿಸಿದರು. ಬಣ್ಣಗಳ ವೈವಿಧ್ಯ ಮತ್ತು ಆಕರ್ಷಕ ವಿಷಯಗಳ ಮೂಲಕ ಕೃತಿಗಳು ಸಂದರ್ಶಕರ ಮನಸೆಳೆಯುವಲ್ಲಿ ಯಶಸ್ವಿಯಾದವು.

ಸ್ವಾಸ್ತಿ ಸಮಕಾಲೀನ ಕಲೆ ಗ್ಯಾಲರಿಯ ನಿರ್ದೇಶಕಿ ಭಾಗ್ಯ ಅಜಯ್‌ಕುಮಾರ್, ಅರ್ಜೆಂಟಿನಾ, ಜರ್ಮನಿ, ಮಲೇಷಿಯಾ, ಲಿಥುವೇನಿಯಾ, ಮಾಂಟೆನೆಗ್ರೋ, ರೊಮೇನಿಯಾ ಮತ್ತು ತೈವಾನ್‌ನಿಂದ ಬಂದ ವಿದೇಶಿ ಕಲಾವಿದರ ನಿಷ್ಠೆಯನ್ನು ಹೈಲೈಟ್ ಮಾಡಿದರು. ಇಲ್ಲಿ ಇರುವ ಅವಧಿಯಲ್ಲಿ, ಕಲಾವಿದರು ಅಬ್ಸ್ಟ್ರಾಕ್ಟ್ ಕಲೆ, ವಾಸ್ತವವಾದ ಕಲೆ, ಸ್ಟಿಲ್ ಲೈಫ್ ಮತ್ತು ಪ್ರಕೃತಿಯಿಂದ ಪ್ರೇರಿತ ಕೃತಿಗಳಂತಹ ವಿವಿಧ ಶೈಲಿಗಳಲ್ಲಿ ಅಸಾಧಾರಣ ಕೃತಿಗಳನ್ನು ರಚಿಸಿದರು. ಅವರು ಕಲೆಗೆ ತೋರಿಸಿದ ತೀವ್ರತೆಯು ಶ್ಲಾಘನೀಯವಾಗಿದೆ ಎಂದರು. ಈ ಕಲಾಕೃತಿಗಳನ್ನು ಕಲೆಪ್ರಿಯರು ಮೆಚ್ಚಿ ಖರೀದಿಸಲು ಅವಕಾಶವಿದ್ದು, ಅವುಗಳಿಂದ ಲಭಿಸುವ ಆದಾಯವನ್ನು ಎಚ್‌ಸಿಜಿ ಫೌಂಡೇಶನ್‌ಗೆ ದಾನ ಮಾಡಲಾಗುತ್ತದೆ. ಅದು ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸಾ ನೆರವಿಗೆ ವಿನಿಯೋಗಿಸಲಾಗುತ್ತದೆ. ಡಾ.ಬಿ.ಎಸ್. ಅಜಯ್‌ಕುಮಾರ್ ಮತ್ತಿತರರಿದ್ದರು.

ಸರ್ಕಾರಿ ನೌಕರರು ಎಲೆಕ್ಟ್ರಿಕ್ ವಾಹನ ಬಳಕೆ ಉತ್ತೇಜಿಸಲು 'ವಿಶೇಷ ಇವಿ ಮೇಳ'

- ಪರಿಸರ ಮಾಲಿನ್ಯ ತಡೆ ಮನವರಿಕೆ
- ಖರೀದಿಸುವವರಿಗೆ ವಿಶೇಷ ರಿಯಾಯ್ತಿ

ಬೆಂಗಳೂರು, ನ.29(ಕೆಎಂಶಿ)– ಎಲೆಕ್ಟ್ರಿಕ್ ವಾಹನಗಳ ಬಳಕೆ ಉತ್ತೇಜಿಸಲು ಸರ್ಕಾರಿ ನೌಕರರಿಗಾಗಿಯೇ ವಿಶೇಷ 'ಇವಿ' ಮೇಳ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ನಿರ್ದೇಶನದಂತೆ ಮೊದಲ ಹಂತದಲ್ಲಿ ಸಚಿವಾಲಯದ ನೌಕರಿಗಾಗಿಯೇ 2025ರ ಜನವರಿಯಲ್ಲಿ ವಿಶೇಷ ಇವಿ ಮೇಳ ಆಯೋಜಿಸಲಾಗುವುದು ಎಂದು ಸುದ್ದಿಗಾರರಿಗೆ ತಿಳಿಸಿದರು.

ಇವಿ ದ್ವಿಚಕ್ರ ವಾಹನ ಬಳಕೆಗೆ ಒತ್ತು ನೀಡುವಲ್ಲಿ ಹಾಗೂ ಪರಿಸರ ಸ್ನೇಹಿ ಇವಿ ವಾಹನಗಳ ಬಳಕೆ ಪ್ರಯೋಜನಗಳ ಮಾಹಿತಿ ನೀಡುವ ಜೊತೆಗೆ ಸರ್ಕಾರಿ ನೌಕರರಿಗೆ ಮಾರಾಟಗಾರರಿಂದ ರಿಯಾಯಿತಿ ದರದಲ್ಲಿ ಇವಿ ದ್ವಿಚಕ್ರ ವಾಹನಗಳನ್ನು ಒದಗಿಸುವುದು ಈ ಮೇಳದ ಉದ್ದೇಶವಾಗಿದೆ, ಪ್ರದರ್ಶನ ಸ್ಥಳದಲ್ಲೇ ಪ್ರಾಯೋಗಿಕವಾಗಿ ವಾಹನ ಓಡಿಸಲು ವ್ಯವಸ್ಥೆ ಮಾಡಲಾಗುವುದು. ಏರುತ್ತಿರುವ ವಾಹನಗಳ ಇಂಧನ ದರ, ನಗರದ ವಾಯು ಮಾಲಿನ್ಯ ತಡೆಗೆ ಇವಿ ವಾಹನಗಳ ಬಳಕೆಯೇ ಪರಿಹಾರ, ಇಲೆಕ್ಟ್ರಿಕ್ ವಾಹನಗಳಿಗೆ ರಸ್ತೆ ತೆರಿಗೆಯೂ ಇಲ್ಲ, ಸಚಿವಾಲಯ ನೌಕರರಿಗೆ ಡೌನ್‌ಪೇಮೆಂಟ್ ಇಲ್ಲದೇ ಅತಿ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ದೊರೆಯಲಿದೆ. ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಮೂಲಸೌಕರ್ಯ ಕಲ್ಪಿಸಿರುವ ಬೆಸ್ಕಾಂಗೆ 'ಚಾರ್ಜ್ ಇಂಡಿಯಾ–2024 ಎಕ್ಸಲೆನ್ಸ್' ಪ್ರಶಸ್ತಿ ಸಂದಿದೆ, ದೇಶದಲ್ಲೇ ಅತಿ ಹೆಚ್ಚು ಸಾರ್ವಜನಿಕ ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಸ್ಟೇಷನ್ ಹೊಂದಿರುವ ರಾಜ್ಯ ಎಂಬ ಹೆಗ್ಗಳಿಕೆ ನಮ್ಮದಾಗಿದೆ. ರಾಜ್ಯದಲ್ಲಿ ಪ್ರಸ್ತುತ 5,765 ಇವಿ ಚಾರ್ಜಿಂಗ್ ಸ್ಟೇಷನ್‌ಗಳಿವೆ, ಬೆಂಗಳೂರು ನಗರ ಜಿಲ್ಲೆಯಲ್ಲೇ 4,462 ಇವಿ ಚಾರ್ಜಿಂಗ್ ಸ್ಟೇಷನ್‌ಗಳಿವೆ, ಇವಿ ವಾಹನಗಳ ಬಳಕೆದಾರರು ಚಾರ್ಜಿಂಗ್ ಸ್ಟೇಷನ್ ಹಾಗೂ ಇವಿ ಮಿತ್ರ ಆ್ಯಪ್ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ನಾಟಕ ಪ್ರದರ್ಶನ

ಮೈಸೂರು, ನ. 29– ಹೆಚ್.ಡಿ. ಕೋಟೆ ಕ್ಲಬ್ ವತಿಯಿಂದ ಮೈಸೂರಿನ ರಂಗಾತರಂಗ ಕಲಾವಿದರಿಂದ 'ಗೆಜ್ಜಲಟ್ಟಿ' ನಾಟಕ ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಡಿ. 1ರಂದು ಸಂಜೆ 6 ಗಂಟೆಗೆ ಪ್ರದರ್ಶನಗೊಳ್ಳಲಿದೆ. ಈ ನಾಟಕವನ್ನು ರಂಗಾಯಣದ ಎಸ್. ರಾಮು ನಿರ್ದೇಶಿಸಿದ್ದು, ಹೊರೆಯಾಲ ದೊರೆಸ್ವಾಮಿಯವರ ರಚನೆಯಾಗಿದೆ.

ಸಂಗೀತ ಕಾರ್ಯಕ್ರಮ

ಮೈಸೂರು, ನ.29–ನಗರದ ನರಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ಡಿ.1ರಂದು ಸಂಜೆ 6.30ಕ್ಕೆ ಎನ್.ಆರ್.ಮೊಹಲ್ಲಾ ಶಿವಾಜಿ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನದಲ್ಲಿ ವೃಂದ ತರಂಗ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.

ಕನ್ನಡ ಹಬ್ಬ ಸ್ಪರ್ಧೆಗಳಿಗೆ ಬಹುಮಾನ ವಿತರಣೆ




ವಿವಿಧ ಸ್ಪರ್ಧೆಗಳ ವಿಜೇತರಾದ ಮಕ್ಕಳನ್ನು ಚಿತ್ರದಲ್ಲಿ ಕಾಣಬಹದು.

ಮೈಸೂರು, ನ. 29– ಮೈಸೂರು ಸರಸ್ವತಿಪುರಂನಲ್ಲಿರುವ ರೋಟರಿ ವೆಸ್ಟ್ ಸಭಾಂಗಣದಲ್ಲಿ ರೋಟರಿ ಕ್ಲಬ್ ಆಫ್ ಮೈಸೂರ್ ವೆಸ್ಟ್ ಅಥರ್ವ ಲೈಫ್ ಸ್ಕಿಲ್ಸ್ ಫೌಂಡೇಶನ್ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಹಾಗೂ ಜೆಸಿಐ ಮೈಸೂರು ಸಿಲ್ಕ್‌ರವರ ಸಂಯುಕ್ತಾಶ್ರಯದೊಂದಿಗೆ 69ನೇ ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಅಂಗವಾಗಿ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿದ್ದು ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ ಎನ್ ಬೋರಲಿಂಗಯ್ಯ ಬಹುಮಾನ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಮಕ್ಕಳಿಗಾಗಿ ಆಸ್ತಿ ಸಂಪಾದನೆ ಮಾಡಿ ಸಾಕಷ್ಟು ಹಣ ಕೂಡಿಟ್ಟು ಅವರ ಬದುಕು ಉತ್ತಮ ಪಡಿಸುವ ಪ್ರಯತ್ನಕ್ಕಿಂತ ಉತ್ತಮ ಸಂಸ್ಕಾರವಂತ ಮಕ್ಕಳನ್ನಾಗಿ, ಉತ್ತಮ ಆರೋಗ್ಯವಂತ ಸತ್ಪ್ರಜೆಗಳನ್ನಾಗಿ ರೂಪಿಸಬೇಕು. ಮಕ್ಕಳನ್ನೇ ನಮ್ಮ ಆಸ್ತಿಯನ್ನಾಗಿಸಬೇಕಿದೆ ಎಂದು ಹೇಳಿದರು. ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ ಒಂದಕ್ಕೊಂದು ಅವಿನಾಭಾವ ಸಂಬಂಧ ಹೊಂದಿವೆ. ಮಕ್ಕಳಿಗೆ ಈಗಿನಿಂದಲೇ ನಾಡು, ನುಡಿ, ಭಾಷೆ, ನೆಲ, ಜಲದ ಕುರಿತು ಅಭಿಮಾನ ಮೂಡಿಸಲು ಇದು ಸಹಕಾರಿ ಆಗುತ್ತದೆ ಎಂದು ಹೇಳಿದರು.

ಮಹಾಜನ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಅಧ್ಯಕ್ಷರು ನಾಗೇಶ್ ಎಂ ಎಸ್,ರೋಟರಿ ವೆಸ್ಟ್ ಅಸೋಸಿಯೇಷನ್ ಅಧ್ಯಕ್ಷರಾದ ಡಾ॥ ಬಿ.ಚಂದ್ರ,ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಅಧ್ಯಕ್ಷರಾದ ಶಶಿಕಲಾ ಸುರೇಶ್,ಅಥರ್ವ ಲೈಫ್ ಸ್ಕಿಲ್ಸ್ ಫೌಂಡೇಶನ್ ಅಧ್ಯಕ್ಷರು ಪುಷ್ಪಲತಾ, ಜೆಸಿಐ ಮೈಸೂರು ಸಿಲ್ಕ್ ಅಧ್ಯಕ್ಷರಾದ ಬಿ. ಎಂ. ರುದ್ರೇಶ, ರುಕ್ಮಿಣಿ, ನಾಗೇಶ್ ಎಂ ಎಲ್ ದೇವರಾಜು, ಚಂದ್ರ , ಶಶಿಕಲಾ, ಭವಾನಿ ಚಂದ್ರ, ಪುಷ್ಪಲತಾ, ರುದ್ರೇಶ್, ಅನುಷ, ಲಾವಣ್ಯ ಹಾಗೂ ಇನ್ನಿತರರು ಹಾಜರಿದ್ದರು

ಬಿಜೆಪಿ ಮುಗಿಸಲು ಯತ್ನಾಳ್‌ಗೆ ಸೋನಿಯಾ, ರಾಹುಲ್ ಗಾಂಧಿಯಿಂದ ಸುಪಾರಿ



ರೇಣುಕಾಚಾರ್ಯ

ಬೆಂಗಳೂರು, ನ.29– ಬಿಜೆಪಿಯನ್ನು ರಾಜ್ಯದಲ್ಲಿ ಮುಗಿಸಲು ಬಸನಗೌಡ ಪಾಟೀಲ್ ಯತ್ನಾಳ್‌ಗೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಸುಪಾರಿ ನೀಡಿದ್ದಾರೆ ಎಂದು ಬಿಜೆಪಿ ಮಾಜಿ ಶಾಸಕ ಎಂಪಿ ರೇಣುಕಾಚಾರ್ಯ ವಾಗ್ದಾಳಿ ನಡೆಸಿದ್ದಾರೆ. ಬೆಂಗಳೂರಿನಲ್ಲಿ ಶುಕ್ರವಾರ ಮಾತನಾಡಿದ ಅವರು, ಯತ್ನಾಳ್ ಟೀಂ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಮುಗಿಸು ಎಂದು ಯತ್ನಾಳ್‌ಗೆ ಕಾಂಗ್ರೆಸ್‌ನವರು ಸುಪಾರಿ ಕೊಟ್ಟಿದ್ದಾರೆ. ಅದರಲ್ಲೂ ಸೋನಿಯಾ ಗಾಂಧಿ, ರಾಹುಲ್ ಗಾಂಧಿಯೇ ಸುಪಾರಿ ಕೊಟ್ಟಿದ್ದಾರೆ ಎಂದು ಕಿಡಿಕಾರಿದರು. ಸದಾನಂದ ಗೌಡರು ಮಾತಾಡಿದ್ದಕ್ಕೆ ಬಿಚ್ಚಿಡ್ತೀನಿ ಅಂತೀಯಲ್ಲ, ನೀನು ಏನು ಬ್ಲ್ಯಾಕ್ ಮೇಲ್ ಮಾಸ್ಟರಾ? ಅದೇನು ಬಿಚ್ಚಿಡು ನೋಡೋಣ ನಾವು ನಿಂದು ಬಿಚ್ಚಿಡ್ತೀವಿ ಎಂದು ಯತ್ನಾಳ್‌ಗೆ ಸವಾಲು ಹಾಕಿದರು.

ಬೀದಿಯಲ್ಲಿ ತಮಟೆ ಹೊಡೆಯುತ್ತಾ ಹೋಗ್ತಿರೋರು ನೀವು. ನಾಗರಹಾವುಗಳು ನೀವು ಎಂದು ಕಿಡಿಕಾರಿದ ರೇಣುಕಾಚಾರ್ಯ, ಯತ್ನಾಳ್ ನಿನ್ನ ಕೊಡುಗೆ ಏನು? ಎಂದು ಪ್ರಶ್ನಿಸಿದರು. ನಮ್ಮ ಇಂದಿನ ಯಾತ್ರೆಗೆ ರಾಜ್ಯಾಧ್ಯಕ್ಷರು, ಮತ್ತೆ ಯಡಿಯೂರಪ್ಪ ನಮಗೆ ಒಪ್ಪಿಗೆ ಕೊಟ್ಟಿಲ್ಲ. ಆದರೆ ನಾವು ಬೀದಿಗೆ ಬರುವ ಅನಿವಾರ್ಯತೆ ಬಂದಿದೆ. ಇವರು ಮನೆಗೆ ಕನ್ನ ಹಾಕೋರು, ಇವರು ಕಾಂಗ್ರೆಸ್‌ನ ಏಜೆಂಟ್‌ರು ಎಂದು ಯತ್ನಾಳ್ ಟೀಂ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಾವು ಯಾರೂ ಪರ್ಯಾಯ ಸಭೆಗಳನ್ನು ಮಾಡುತ್ತಿಲ್ಲ. ಪಕ್ಷದ ವೇದಿಕೆಯಲ್ಲಿ ನಾವು ಪ್ರವಾಸ ಮಾಡ್ತಿದ್ದೇವೆ. ದಾವಣಗೆರೆ ಸಮಾವೇಶಕ್ಕೆ ರಾಷ್ಟ್ರೀಯ ನಾಯಕರನ್ನು ಕರೆಸುತ್ತೇವೆ. ವಿಜಯಪುರದ ಹಾಲಿ ಸಚಿವ ಹಾಗೂ ಪ್ರಭಾವಿ ಸಚಿವನ ಜೊತೆ ಹೊಂದಾಣಿಕೆಯನ್ನು ಮಾಡಿಕೊಂಡು ನೀನು ಗೆದ್ದು ಇಡೀ ಜಿಲ್ಲೆಯ ಬಿಜೆಪಿ ಶಾಸಕರನ್ನು ಸೋಲಿಸಿದ್ದೀಯಾ. ಮೊನ್ನೆ ಶಿಗ್ಗಾವ್‌ನಲ್ಲಿ ಭರತ್ ಬೊಮ್ಮಾಯಿ ಸೋಲಿಗೂ ನೀನೇ ಕಾರಣ ಎಂದು ಕಿಡಿಕಾರಿದರು. ಸಂಘಟನೆ ಸಾಮರ್ಥ್ಯವನ್ನು ರಾಜ್ಯದ ಅಧ್ಯಕ್ಷರು ಈಗಾಗಲೇ ತೋರಿಸಿದ್ದಾರೆ. ನಿಮ್ಮ ಹರುಕು ಬಾಯಿ, ಹೊಲಸು ಬಾಯಿಯಿಂದಲೇ ಕಳೆದ ಚುನಾವಣೆಯಲ್ಲಿ ಸೋಲಾಗಿದೆ. ಬಿಜೆಪಿಯ ಸೋಲಿಗೆ ನೀವೇ ಕಾರಣ. ನರೇಂದ್ರ ಮೋದಿಗಿಂತ ನೀನು ದೊಡ್ಡ ಮನುಷ್ಯ ಆಗಿಬಿಟ್ಟ. ವಕ್ಫ್ ಹೋರಾಟಕ್ಕೆ ಶೋಭಾ, ಪ್ರಹ್ಲಾದ್ ಜೋಷಿ ಬೆಂಬಲ ಕೊಟ್ಟಿದ್ದಾರೆ ವಿನಹ ನಿಮಗಲ್ಲ. ಪರ್ಯಾಯ ನಾಯಕತ್ವ ಸೃಷ್ಟಿಗೆ ಅವರು ಬೆಂಬಲ ಕೊಟ್ಟಾರಾ? ಪಕ್ಷ ಚಿಹ್ನೆ ನಿಮಗೆ ಕೊಟ್ಟವರು ಯಾರು..? ವಿನಾಕಾರಣ ಸಂಘರ್ಷಕ್ಕೆ ಇಳಿದಿದ್ದಾರೆ ಎಂದು ಕಿಡಿಕಾರಿದರು.

ಮುಡಾ ನಿವೇಶನ ಹಂಚಿಕೆ ಹಗರಣ

ಲೋಕಾಯುಕ್ತ ಅಧಿಕಾರಿಗಳಿಂದ ಎ4 ಆರೋಪಿ ದೇವರಾಜು ಸುದೀರ್ಘ ವಿಚಾರಣೆ



ದೇವರಾಜು

ಮೈಸೂರು, ನ.29(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡ ಮುಡಾ ನಿವೇಶನ ಹಂಚಿಕೆ ಹಗರಣದ ಎ4 ಆರೋಪಿ ದೇವರಾಜು ಅವರನ್ನು ಲೋಕಾಯುಕ್ತ ಅಧಿಕಾರಿಗಳು ಇಂದು ಸುದೀರ್ಘ ವಿಚಾರಣೆ ನಡೆಸಿದರು.

ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಇಂದು ಬೆಳಿಗ್ಗೆ 10.30 ಗಂಟೆಗೆ ಆಗಮಿಸಿದ ದೇವರಾಜು ಅವರನ್ನು, ಸಂಜೆ 4.45 ಗಂಟೆ ತನಕ ಸುದೀರ್ಘ ವಿಚಾರಣೆ ನಡೆಸಿದರು.

ಈಗಾಗಲೇ ದೇವರಾಜು ಅವರನ್ನು ವಿಚಾರಣೆ ಮಾಡಿರುವ ಲೋಕಾಯುಕ್ತ ಅಧಿಕಾರಿಗಳು ಈಗ ಮತ್ತೆ ವಿಚಾರಣೆ ಮಾಡಿದ್ದಾರೆ. ಸುಮಾರು ಆರು ಗಂಟೆಗಳ ಕಾಲ ನಡೆದ ಸುದೀರ್ಘ ವಿಚಾರಣೆ ವೇಳೆ ಮೈಸೂರಿನ ಕೆಸರೆ ಸರ್ವೆ ನಂಬರ್ 464 ರ 3.16 ಎಕರೆಯನ್ನು ಸಿದ್ದರಾಮಯ್ಯ ಬಾವಮೈದ ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ಮಾರಾಟ ಮಾಡಿರುವ ಬಗ್ಗೆ ಲೋಕಾಯುಕ್ತ ಅಧಿಕಾರಿಗಳು ಸಮಗ್ರ ಮಾಹಿತಿ ಪಡೆದಿದ್ದಾರೆ.

ವಿಚಾರಣೆ ಮುಗಿಸಿ ಹೊರ ಬಂದು ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ ದೇವರಾಜು, ಜಮೀನು ಮಾರಾಟ ಸಂಬಂಧ ಲೋಕಾಯುಕ್ತ ಅಧಿಕಾರಿಗಳು ವಿಚಾರಣೆ ಮಾಡಿದ್ದಾರೆ. ಈ ವೇಳೆ ಎಲ್ಲಾ ಮಾಹಿತಿ ನೀಡಿದ್ದೇನೆ ಎಂದು ತಿಳಿಸಿದರು.

ತಮ್ಮ ಸಹೋದರ ಮೈಲಾರಯ್ಯ ಪುತ್ರಿ ಜಮುನ ನ್ಯಾಯಾಲಯದಲ್ಲಿ ತಮ್ಮ ವಿರುದ್ಧ ವಂಚನೆ ಪ್ರಕರಣ ದಾಖಲಿಸಿರುವ ಬಗ್ಗೆ ಹೆಚ್ಚಿನ ಪ್ರತಿಕ್ರಿಯೆ ನೀಡದ ದೇವರಾಜು, ಅವರೇ ಮೋಸಗಾರರು ಎಂದು ಸೂಚ್ಯವಾಗಿ ಹೇಳಿ ಅಲ್ಲಿಂದ ನಿರ್ಗಮಿಸಿದರು.

ಮನೆಯಲ್ಲಿದ್ದವರ ನೆರವು ಪಡೆದೇ ದೋಚಿದ ಖದೀಮರು!

ಮೈಸೂರು, ನ.29–ಮನೆಯಲ್ಲಿದ್ದವರ ನೆರವು ಪಡೆದೇ ಬೆಲೆ ಬಾಳುವ ವಸ್ತುಗಳನ್ನು ಕಳವು ಮಾಡುವ ಹೊಸ ಟೆಕ್ನಿಕ್ ಅನ್ನು ಖದೀಮರು ಅನುಸರಿಸಲಾರಂಭಿಸಿದ್ದಾರೆ. ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮನೆಯೊಂದಕ್ಕೆ ರಾಜಾರೋಷವಾಗಿ ಬಂದ ಇಬ್ಬರು ಖದೀಮರು, ಮನೆಯಲ್ಲಿದ್ದವರ ನೆರವು ಪಡೆದೇ ವ್ಯವಸ್ಥಿತವಾಗಿ ವಸ್ತುಗಳನ್ನು ಗೂಡ್ಸ್ ಆಟೋದಲ್ಲಿ ತುಂಬಿಕೊಂಡು ಹೋಗಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ವಿವರ: ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಮ್ಯಾನೇಜ್‌ಮೆಂಟ್ ತಮ್ಮ ಸಿಬ್ಬಂದಿಗೆ ಜಯಲಕ್ಷ್ಮೀಪುರಂ 8ನೇ ಮುಖ್ಯ ರಸ್ತೆಯ 3ನೇ ಬ್ಲಾಕ್‌ನಲ್ಲಿ ಮನೆಯೊಂದನ್ನು ವಾಸ್ತವ್ಯಕ್ಕಾಗಿ ನೀಡಿದೆ.

ಈ ಮನೆಗೆ ನ.21ರಂದು ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ಇಬ್ಬರು ವ್ಯಕ್ತಿಗಳು ಬಂದು ಮನೆಯಲ್ಲಿದ್ದ ಹೋಟೆಲ್‌ನ ರೆಸ್ಟೋರೆಂಟ್ ಮ್ಯಾನೇಜರ್ ಬೋಲೇನಾಥ ಅವರನ್ನು ಸಂಪರ್ಕಿಸಿ, ತಾವು ಸದರನ್ ಸ್ಟಾರ್ ಹೋಟೆಲ್‌ನಿಂದ ಬಂದಿರುವುದಾಗಿ ತಿಳಿಸಿದ್ದಲ್ಲದೇ, ಹೋಟೆಲ್‌ನವರು ಲೈನ್‌ನಲ್ಲಿದ್ದಾರೆ. ನೀವು ಮಾತನಾಡಿ ಎಂದು ಅವರ (ಖದೀಮರ) ಮೊಬೈಲ್ ಅನ್ನು ಬೋಲೇನಾಥ್ ಅವರಿಗೆ ನೀಡಿದ್ದಾರೆ. ಮಾತನಾಡಿದ ವ್ಯಕ್ತಿಯು ತಾನು ಸದರನ್ ಸ್ಟಾರ್ ಹೋಟೆಲ್‌ನ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದಲ್ಲದೇ, ಮನೆಯಲ್ಲಿನ ಕೆಲವು ವಸ್ತುಗಳನ್ನು ರಿಪೇರಿ ಮಾಡುವ ಸಲುವಾಗಿ ಕೊಂಡೊಯ್ಯಲು ಬಂದಿದ್ದಾರೆ. ಅವರಿಗೆ ಹೇಳಿದ ವಸ್ತುಗಳನ್ನು ಕೊಡಿ ಎಂದು ಅಧಿಕಾರಯುತವಾಗಿ ಹೇಳಿದ್ದಾನೆ.

ಅದನ್ನು ನಂಬಿದ ಬೋಲೇನಾಥ್, ಖದೀಮರು ಕೇಳಿದ 45 ಸಾವಿರ ರೂ. ಮೌಲ್ಯದ ಸ್ಯಾಮ್‌ಸಂಗ್ ಟಿವಿ, ಗ್ಲಾಸ್ ನೊಂದಿಗಿರುವ ಮರದ ಟೀಪಾಯ್, ಸೆಟಪ್ ಬಾಕ್ಸ್, ಫ್ರಿಡ್ಜ್, ಸ್ಟಡಿ ಟೇಬಲ್ ಮುಂತಾದವುಗಳನ್ನು ಕೊಟ್ಟಿದ್ದಾರೆ. ಈ ವಸ್ತುಗಳನ್ನು ಮನೆಯಿಂದ ಆಟೋಗೆ ತುಂಬಿಸಲು ಖದೀಮರು ಬೋಲೇನಾಥ್ ಅವರ ಸಹಾಯವನ್ನೂ ಪಡೆದಿದ್ದಾರೆ ಎಂದು ಹೇಳಲಾಗಿದೆ. ಖದೀಮರಂತೂ ಯಾವುದೇ ರೀತಿಯ ಆತಂಕವಿಲ್ಲದೆ ಬೆಲೆ ಬಾಳುವ ವಸ್ತುಗಳನ್ನು ಆಟೋದಲ್ಲಿ ತುಂಬಿಕೊಂಡು ನಿರಾಯಾಸವಾಗಿ ತೆರಳಿದ್ದಾರೆ. ಬಂದಿದ್ದವರು ದರೋಡೆಕೋರರು ಎಂಬ ವಿಷಯ ತಿಳಿದ ಸದರನ್ ಸ್ಟಾರ್ ಹೋಟೆಲ್‌ನ ಎಂ.ಕೆ.ಕಾರ್ಯಪ್ಪ ಅವರು ಈ ಸಂಬಂಧ ನ.27ರಂದು ನೀಡಿದ ದೂರನ್ನು ಬಿಎಸ್‌ಎನ್ ಕಲಂ 305ರಡಿ ದಾಖಲಿಸಿಕೊಂಡಿರುವ ಜಯಲಕ್ಷ್ಮಿಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಸದರನ್ ಸ್ಟಾರ್ ಹೋಟೆಲ್‌ನ ಸಿಬ್ಬಂದಿಯೇ ಈ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂಬ ಮಾಹಿತಿ ಇರುವವರೇ ಹೊಸ ಟೆಕ್ನಿಕ್‌ನೊಂದಿಗೆ ಈ ಕೃತ್ಯ ಎಸಗಿದ್ದಾರೆ ಎಂದು ಹೇಳಲಾಗಿದ್ದು, ಪೊಲೀಸರು ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲಿಸಿ, ಖದೀಮರ ಪತ್ತೆಗಾಗಿ ಕಾರ್ಯಾಚರಣೆ ಆರಂಭಿಸಿದ್ದಾರೆ.

ಮೈಸೂರು ಮಿತ್ರ

ಹೊಳಲು ಗ್ರಾಮದಲ್ಲಿ ಚಿರತೆ ಪ್ರತ್ಯಕ್ಷ



ಮಂಡ್ಯ, ನ.29– ತಾಲೂಕಿನ ಹೊಳಲು (ಗಾಣದಾಳು, ಚಂದಗಾಲು ರಸ್ತೆ) ಗ್ರಾಮದ ಮುಂಡ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ರಾತ್ರಿ ಚಿರತೆ ಪ್ರತ್ಯಕ್ಷವಾಗಿದ್ದು, ಚಂದಗಾಲು ಗ್ರಾಮಕ್ಕೆ ಕಾರಿನಲ್ಲಿ ಹೋಗುತ್ತಿದ್ದ ಪ್ರಯಾಣಿಕರು ಒಂಟಿ ಚಿರತೆಯು ಓಡಾಡುತ್ತಿರುವುದನ್ನು ವಿಡಿಯೋ ಚಿತ್ರೀಕರಣ ಮಾಡಿದ್ದು, ಸಾಮಾಜಿಕ ಜಾಲದಲ್ಲಿ ಹರಿದಾಡುತ್ತಿದೆ.

ಸಾಮಾಜಿಕ ಜಾಣತದಲ್ಲಿ ವಿಡಿಯೋ ನೋಡಿ ಅಕ್ಕಪಕ್ಕದ ಗ್ರಾಮಸ್ಥರು ರಾತ್ರಿ ವೇಳೆ ಓಡಾಡಲು ಭಯಭೀತರಾಗಿದ್ದಾರೆ ಹಾಗೂ ಕೂಲಿ ಕಾರ್ಮಿಕರು ಕಬ್ಬು ಕಟಾವು ಮಾಡಲು ಸಹ ಭಯಭೀತರಾಗಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅರಣ್ಯಾಧಿಕಾರಿಗಳು ಹಾಗೂ ಜಿಲ್ಲಾಡಳಿತ ಇದನ್ನು ಗಮದಲ್ಲಿಟ್ಟುಕೊಂಡು ಚಿರತೆಯನ್ನು ಸೆರೆ ಹಿಡಿಯಬೇಕೆಂದು ಹಾಗೂ ಮುಂದಾಗುವ ಅನಾಹುತವನ್ನು ತಪ್ಪಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಬಾಲ್ಯವಿವಾಹ, ಭ್ರೂಣ ಹತ್ಯೆ ಹೆಚ್ಚು

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಕಳವಳ



ಮೈಕ್ರೋ ಫೈನಾನ್ಸ್ ವತಿಯಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಗೌರವಿಸಲಾಯಿತು.

ಮಂಡ್ಯ, ನ.29– ಜಿಲ್ಲೆಯಲ್ಲಿ ಬಾಲ್ಯ ವಿವಾಹ, ಭ್ರೂಣಹತ್ಯೆಗಳು ಹೆಚ್ಚಾಗಿ ನಡೆಯುತ್ತಿದ್ದು, ಇದರಿಂದ ಸಾಮಾಜಿಕವಾಗಿ ತೊಂದರೆಯಾಗುತ್ತಿದೆ ಎಂದು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಕಳವಳ ವ್ಯಕ್ತಪಡಿಸಿದ್ದಾರೆ.

ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ವತಿಯಿಂದ ನಗರದ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆದ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪೋಷಕರು ತಮ್ಮ ಜವಾಬ್ದಾರಿ ಪೂರೈಸುವ ನಿಟ್ಟಿನಲ್ಲಿ ಬಾಲ್ಯ ವಿವಾಹಕ್ಕೆ ಮುಂದಾಗುತ್ತಿದ್ದಾರೆ. ಇದು ಸರಿಯಾದುದಲ್ಲ. ಮಕ್ಕಳಿಗೆ ಕನಿಷ್ಠ ಪದವಿ ಪೂರೈಸಿದ ನಂತರ ಮದುವೆ ಮಾಡುವುದು ಒಳ್ಳೆಯದು. ಜೊತೆಗೆ ಅವರು ಸ್ವಂತ ಕಾಲ ಮೇಲೆ ನಿಂತು ದುಡಿದು ಬದುಕುವಂತಹ ವಾತಾವರಣವನ್ನು ಸೃಷ್ಟಿಸಿಕೊಡಬೇಕು ಎಂದರು.

ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಯಿಂದಾಗಿ ಯುವಜನತೆ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಓದುವ ಸಮಯದಲ್ಲಿ ಇಂತಹ ಹವ್ಯಾಸಗಳಿಂದ ದೂರ ಇರಬೇಕು ಎಂದು ಇದೇ ವೇಳೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ಹೇಳಿದರು.

ಓದುವ ಸಮಯದಲ್ಲಿ ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿ ಹೋದರೆ ವಿದ್ಯಾಭ್ಯಾಸದ ಗತಿ ಏನು? ಮೊಬೈಲ್‌ನ್ನು ದೂರ ಇಟ್ಟು ಅವಶ್ಯಕತೆ ಇದ್ದಲ್ಲಿ ಮಾತ್ರ ಅದನ್ನು ಬಳಕೆ ಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ನಮ್ಮ ದೇಶ ಕೃಷಿ ಪ್ರಧಾನವಾದದ್ದು. ಹಿಂದೆಲ್ಲಾ ಕೃಷಿಕರು ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದರು. ಮಕ್ಕಳ ವಿದ್ಯಾಭ್ಯಾಸ, ಬೆಳೆ ಬೆಳೆಯುವ ಸಂದರ್ಭದಲ್ಲಿ ಹಣಕಾಸಿನ ವ್ಯವಸ್ಥೆಗಾಗಿ ಪರದಾಡುತ್ತಿದ್ದರು. ತಮ್ಮಲ್ಲಿರುವ ಚಿನ್ನಾಭರಣಗಳನ್ನು ಗಿರವಿ ಇಟ್ಟು ಅಗತ್ಯತೆಗಳನ್ನು ಪೂರೈಸಿಕೊಳ್ಳಬೇಕಾಗಿತ್ತು. ಆದರೆ ಈಗ ಮೈಕ್ರೋ ಫೈನಾನ್ಸ್ ಕಂಪನಿಗಳು ರೈತರಿಗೆ ಸಹಾಯ ಮಾಡುತ್ತಿವೆ. ಮಕ್ಕಳ ವಿದ್ಯಾಭ್ಯಾಸ ಅಥವಾ ಬೇರೆಯ ಅಗತ್ಯಕ್ಕೆ ಸುಲಭವಾಗಿ ಸಾಲ ಪಡೆಯಬಹುದಾಗಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮೈಕ್ರೋ ಫೈನಾನ್ಸ್‌ನವರ ಒತ್ತಡದಿಂದಾಗಿ ಕೆಲವರು ಆತ್ಮಹತ್ಯೆಯಂತಹ ನಿರ್ಧಾರಕ್ಕೆ ಬರುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಸಾಲ ವಾಪಸ್ಸು ಪಡೆಯಲು ಸ್ವಲ್ಪ ಸಮಯಾವಕಾಶವನ್ನೂ ಕೊಡಬೇಕು. ಈ ನಿಟ್ಟಿನಲ್ಲಿ ಸಮಾಜದ ಬಗ್ಗೆ ಕಾಳಜಿ ಇರುವಂತಹ ವ್ಯಕ್ತಿಗಳನ್ನು ಆಯ್ಕೆ ಮಾಡಿ ವಸೂಲಾತಿಗೆ ತೊಡಗಿಸಿಕೊಳ್ಳಬೇಕು. ಸಾಲ ಕೊಡುವಾಗ ಅವರು ವಾಪಸ್ಸು ಕೊಡಲು ಶಕ್ತರೇ, ಅವರ ಆದಾಯ ಮೂಲದ ಬಗ್ಗೆ ದೃಢಪಡಿಸಿಕೊಳ್ಳಬೇಕು ಎಂದು ಮೈಕ್ರೋ ಫೈನಾನ್ಸ್‌ನವರಿಗೆ ಸಲಹೆ ನೀಡಿದರು.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಲ್ಲವೂ ಸ್ಪರ್ಧೆಯೊಡ್ಡುತ್ತಿವೆ. ಇದಕ್ಕೆ ನಾವೂ ಸಹ ಒಗ್ಗಿಕೊಂಡು ಸ್ಪರ್ಧೆಗೆ ಅಣಿಯಾಗಬೇಕು. ಹಿಂದೆ ಎರಡು ಮೂರನೇ ತರಗತಿ ವ್ಯಾಸಂಗ ಮಾಡಿದ್ದರೆ ಸುಲಭವಾಗಿ ಕರೆದು ಕೆಲಸ ಕೊಡುತ್ತಿದ್ದರು. ಆದರೀಗ ಶೇ.90ರಷ್ಟು ಅಂಕ ಪಡೆದರೂ ಏನೂ ಮಾಡಲಾಗದಂತಹ ಸ್ಥಿತಿಯಲ್ಲಿದ್ದೇವೆ. ಸತತ ಅಭ್ಯಾಸ, ಪರಿಶ್ರಮ ಹಾಗೂ ತಾಳ್ಮೆಯಿಂದ ಎಲ್ಲವನ್ನೂ ಪಡೆದುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಲೀಡ್ ಬ್ಯಾಂಕ್ ಮ್ಯಾನೇಜರ್ ಎನ್. ಅರುಣ್‌ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಟಿ.ಸೌಭಾಗ್ಯ, ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ಸಿಇಓ ಎಸ್. ಕುಮಾರ್, ರಾಜ್ಯದ ಮುಖ್ಯಸ್ಥ ಜಗದೀಶ್, ಸಿಎಸ್‌ಆರ್ ಮ್ಯಾನೇಜರ್ ಪಂಡಿತ್ ಜಿ. ಪಾಟೀಲ್, ಸಹಾಯಕ ವ್ಯವಸ್ಥಾಪಕ ಪ್ರಶಾಂತ್ ಕುಮಾರ್, ಸಿಓಓ ಎಸ್. ಪಂಚಾಕ್ಷಿ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಗೌರವಿಸಲಾಯಿತು.

ಮಂಡ್ಯ ಅಬಕಾರಿ ಇಲಾಖೆಯಲ್ಲಿ ಲಂಚಾವತಾರ ಪ್ರಕರಣ

ನಿರೀಕ್ಷಕ ಅಮಾನತು, ಉಪ ಆಯುಕ್ತನ ಅಮಾನತಿಗೆ ಸರ್ಕಾರಕ್ಕೆ ಶಿಫಾರಸ್ಸು

ಮಂಡ್ಯ, ನ.29– ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಮಂಡ್ಯ ಜಿಲ್ಲಾ ಅಬಕಾರಿ ಇಲಾಖೆಯ ಉಪ ಆಯುಕ್ತ ಹಾಗೂ ಮದ್ದೂರು ಅಬಕಾರಿ ನಿರೀಕ್ಷಕನೊಬ್ಬ ಕಾಂಗ್ರೆಸ್ ಕಾರ್ಯಕರ್ತ ಪುನೀತ್ ಎಂಬಾತನಿಂದ ಲಂಚಕ್ಕೆ ಬೇಡಿಕೆ ಇಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬ ಅಧಿಕಾರಿಯನ್ನು ಅಮಾನತು ಮಾಡಿ ಮತ್ತೋರ್ವ ಅಧಿಕಾರಿಯ ಅಮಾನತಿಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಅಬಕಾರಿ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಮದ್ದೂರು ತಾಲೂಕು ಅಬಕಾರಿ ಇಲಾಖೆಯ ನಿರೀಕ್ಷಕ ಶಿವಶಂಕರ್ ಆರಾಧ್ಯ ಅವರನ್ನು ಅಮಾನತುಗೊಳಿಸಿದರೆ, ಮಂಡ್ಯ ಜಿಲ್ಲಾ ಅಬಕಾರಿ ಇಲಾಖೆಯ ಉಪ ಆಯುಕ್ತ ಎ.ರವಿಶಂಕರ್ ಅವರನ್ನು ಅಮಾನತುಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲಾ ಅಬಕಾರಿ ಇಲಾಖೆಯ ಜಂಟಿ ಆಯುಕ್ತರು ಶಿವಶಂಕರ್ ಹಾಗೂ ರವಿಶಂಕರ್ ವಿರುದ್ಧ ಸುದ್ದಿ ವಾಹಿನಿಗಳಲ್ಲಿ ಭಿತ್ತರವಾದ ವರದಿಯನ್ನು ಆಧರಿಸಿ ಬೆಂಗಳೂರಿನ ರಾಜ್ಯ ಅಬಕಾರಿ ಆಯುಕ್ತರಿಗೆ ವರದಿ ನೀಡಿದ್ದು, ಚಂದುಪುರ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತ ಪುನೀತ್ ಎಂಬಾತ ತಮ್ಮ ತಾಯಿ ಲಕ್ಷ್ಮಮ್ಮ ಹೆಸರಿನಲ್ಲಿ ಬಾರ್ ತೆರೆಯಲು ಆನ್‌ಲೈನ್ ಅರ್ಜಿ ಸಲ್ಲಿಸಿದ್ದಾಗ ಇಬ್ಬರು ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟಿದ್ದನ್ನು ಆಡಿಯೋ ಮತ್ತು ವೀಡಿಯೋ ಸಹಿತ ಲೋಕಾಯುಕ್ತರಿಗೆ ದೂರು ನೀಡಿದ ಪರಿಣಾಮ ಮತ್ತು ಮಾಧ್ಯಮಗಳ ವರದಿಯ ಅನುಸಾರ ಒಬ್ಬರನ್ನು ಅಮಾನತು ಮಾಡಿ ಮತ್ತೋರ್ವ ಅಧಿಕಾರಿಯ ಅಮಾನತಿಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಯುವತಿ ನಾಪತ್ತೆ

ಮಂಡ್ಯ, ನ.29– ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಬೀನಾ ಪರ್ವಿನ್ (27) ಎಂಬುವವರು ಕಾಣೆಯಾಗಿದ್ದಾರೆ. ಈ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಣೆಯಾದ ಮಹಿಳೆಯು 5.2 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ ಹೊಂದಿದ್ದು ಕಾಣೆಯಾದ ದಿನ ಹಸಿರು ಬಣ್ಣದ ಚೂಡಿದಾರ್ ಧರಿಸಿರುತ್ತಾರೆ. ಇವರ ಸುಳಿವು ಸಿಕ್ಕಲ್ಲಿ ದೂ.ಸಂ: 08236255131 ಮತ್ತು 9480804874 ನ್ನು ಸಂಪರ್ಕಿಸಬಹುದು ಎಂದು ಪಾಂಡವಪುರ ಪೊಲೀಸ್ ಠಾಣೆಯ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೆಂಡೇಕೆರೆ ನೂತನ ಗ್ರಾಪಂ ಅಧ್ಯಕ್ಷರಾಗಿ ಸವಿತಾ ಗೋವಿಂದಶೆಟ್ಟಿ ಅವಿರೋಧ ಆಯ್ಕೆ



ತಾಲೂಕಿನ ಶೀಳನೆರೆ ಹೋಬಳಿಯ ತೆಂಡೇಕೆರೆ ಗ್ರಾಪಂ ಅಧ್ಯಕ್ಷರಾಗಿ ಸವಿತಾ ಗೋವಿಂದಶೆಟ್ಟಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದು, ಗ್ರಾ.ಪಂ ಸದಸ್ಯರು ಹಾಗೂ ಮುಖಂಡರು ಅಭಿನಂದಿಸಿದರು.

ಕೆ.ಆರ್.ಪೇಟೆ, ನ.29– ತಾಲೂಕಿನ ಶೀಳನೆರೆ ಹೋಬಳಿಯ ತೆಂಡೇಕೆರೆ ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷರಾಗಿ ಮಲ್ಲೋನಹಳ್ಳಿ ಸವಿತಾ ಗೋವಿಂದಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷ ಶ್ರೀನಿವಾಸ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸವಿತ ಹೊರತುಪಡಿಸಿ ಸದಸ್ಯರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆ ನಡೆಯಿತು.

ಚುನಾವಣಾಧಿಕಾರಿಯಾಗಿ ಸಮಾಜ ಕಲ್ಯಾಣ ಅಧಿಕಾರಿ ಡಾ.ದಿವಾಕರ್ ಕರ್ತವ್ಯ ನಿರ್ವಹಿಸಿದರು. ಸಹ ಚುನಾವಣಾಧಿಕಾರಿಯಾಗಿ ಪಿಡಿಓ ಸತೀಶ್‌ಕುಮಾರ್ ಕಾರ್ಯನಿರ್ವಹಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ನಾಗರತ್ನ ಗಂಗಾಧರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸತೀಶ್ ಕುಮಾರ್, ಕಾರ್ಯದರ್ಶಿ ಕೆ.ಎಸ್.ಕುಮಾರ್, ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀನಿವಾಸ್, ಎ.ಎನ್.ಶಿವಲಿಂಗ, ಎ.ಎಂ.ರಾಜು, ಸೌಭಾಗ್ಯ, ಕೆ.ಜೆ. ಹೇಮಕುಮಾರ್, ಶಿಲ್ಪಾಶೇಖರ್, ಜಯಮ್ಮ ಸಣ್ಣೇಗೌಡ, ಕೆ.ರವಿಕುಮಾರ್, ಗಂಗಮ್ಮ ಕುಮಾರ್, ಜ್ಯೋತಿಬಸವರಾಜು, ಸವಿತ.ಬಿ. ಇಂದ್ರೇಶ್, ಎಂ.ಆರ್.ರಂಗರಾಜು, ರೋಹಿಣಿ ಮಹೇಶ್, ಹೆಚ್.ಎಂ.ಕಾಂತರಾಜು, ಸ್ವಾಮೀಗೌಡ, ಬಿಲ್ ಕಲೆಕ್ಟರ್ ಗೋವಿಂದಶೆಟ್ಟಿ ಕಂಪ್ಯೂಟರ್ ಆಪರೇಟರ್ ಜಗದೀಶ್, ಸುಮಲತಾ, ನೌಕರರಾದ ರಂಗಸ್ವಾಮಿ, ನೀರು ನಿರ್ವಾಹಕ ನಾಗೇಂದ್ರ ಬೈರೇಗೌಡ, ಗೋವಿಂದಶೆಟ್ಟಿ, ಅನು, ಅಭಿ, ಚಂದ್ರ, ಇಂದ್ರೇಶ್, ಶಶಾಂಕ್, ಪ್ರಭಾವತಿ, ಮಲ್ಲಿಕಾ, ಗ್ರಂಥಾಲಯ ಮೇಲ್ವಿಚಾರಕ ಕುಮಾರ್ ಸೇರಿದಂತೆ ಹಲವಾರು ಗ್ರಾಮಸ್ಥರು ಉಪಸ್ಥಿತರಿದ್ದರು.

ಶ್ರೀರಂಗಪಟ್ಟಣ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸಿ.ಜೆ.ಶ್ರೀನಿವಾಸ್ ಅವಿರೋಧ ಆಯ್ಕೆ



ಸರ್ಕಾರಿ ನೌಕರರ ಸಂಘದ ತಾಲೂಕು ಘಟಕದ ಅಧ್ಯಕ್ಷರಾಗಿ ಸಿ.ಜೆ. ಶ್ರೀನಿವಾಸ್ ಅವಿರೋಧವಾಗಿ ಆಯ್ಕೆಯಾದರು.

ಶ್ರೀರಂಗಪಟ್ಟಣ, ನ.29– ಸರ್ಕಾರಿ ನೌಕರರ ಸಂಘದ ತಾಲೂಕು ಘಟಕದ ಅಧ್ಯಕ್ಷರಾಗಿ ಸಿ.ಜೆ. ಶ್ರೀನಿವಾಸ್ (ಸರ್ಕಾರಿ ಪ್ರೌಢಶಾಲೆಗಳ ಕ್ಷೇತ್ರ) ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಮತ್ತೊಬ್ಬ ಸ್ಪರ್ಧಿ ಡಿ.ಎನ್.ಲೋಕೇಶ್ ತಮ್ಮ ಉಮೇದುವಾರಿಕೆಯನ್ನು ವಾಪಸ್ ಪಡೆದ ಹಿನ್ನೆಲೆಯಲ್ಲಿ ಸಿ.ಜೆ.ಶ್ರೀನಿವಾಸ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ವಿಜಯಕುಮಾರ್ ಪ್ರಕಟಿಸಿದ್ದಾರೆ.

ಸಂಘದ ರಾಜ್ಯ ಪರಿಷತ್ ಸದಸ್ಯರಾಗಿ ನಾಗೇಂದ್ರ ಪಿ.ಆರ್ (ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ) ಮತ್ತು ತಾಲೂಕು ಘಟಕದ ಖಜಾಂಚಿಯಾಗಿ ಲೋಕೇಶ್‌ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ) ಕೂಡ ಅವಿರೋಧವಾಗಿ ಆಯ್ಕೆಯಾದರು. ಸರ್ಕಾರಿ ನೌಕರರ ಸಂಘದ ಅಧ್ಯಕ್ಷನಾಗಿ ಈ ಹಿಂದೆಯೂ ಕೆಲಸ ಮಾಡಿದ್ದೇನೆ. ಸಂಘದ ಸದಸ್ಯರ ಶ್ರೇಯೋಭಿವೃದ್ಧಿಗೆ ಶ್ರಮಿಸಲಿದ್ದೇನೆ. ಮುಂದೆಯೂ ನೌಕರರ ಹಿತಕ್ಕಾಗಿ ಕೆಲಸ ಮಾಡುತ್ತೇನೆ ಎಂದು ಅಧ್ಯಕ್ಷ ಸ್ಥಾನಕ್ಕೆ ಪುನರಾಯ್ಕೆಯಾದ ಸಿ.ಜೆ.ಶ್ರೀನಿವಾಸ್ ತಿಳಿಸಿದರು. ಸಂಘದ ನಿರ್ದೇಶಕರಾದ ಎಸ್.ಡಿ.ಬೊಮ್ಮೂರು ತಿಮ್ಮೇಗೌಡ, ರಾಜ, ಮುದ್ದೇಗೌಡ ಹಾಗೂ ಸದಸ್ಯರು ನೂತನ ಪದಾಧಿಕಾರಿಗಳನ್ನು ಅಭಿನಂದಿಸಿದರು.

ಒಂದನೇ ಪುಟದಿಂದ

ಅಧಿಕಾರದಲ್ಲಿರ್ತಾರೋ ಗೊತ್ತಿಲ್ಲ!

ಆಗುತ್ತಿದೆ ಸ್ವಲ್ಪ ಹೊರೆ ಆಗುತ್ತೆ. ದೊಡ್ಡ ಸಮಸ್ಯೆಗೆ ಕೈ ಹಾಕಿದಾಗ ಸ್ವಲ್ಪ ಸಮಸ್ಯೆ ಉದ್ಭವ ಆಗುತ್ತೆ. ಕಲ್ಯಾಣ ರಾಜ್ಯದ ಪರಿಕಲ್ಪನೆ ಕಾಣುತ್ತಿದ್ದೇವೆ. ಎಲ್ಲರಿಗೂ ಸಮಪಾಲು ಸಮಬಾಳು. ಐದು ಗ್ಯಾರಂಟಿಗಳು ಬಹಳಷ್ಟು ಯಶಸ್ವಿಯಾಗಿ ಅನುಷ್ಠಾನ ಆಗುತ್ತಿವೆ. ಇದರಿಂದ ಬಹಳಷ್ಟು ರಾಜಕೀಯ ಲಾಭ ಆಗುತ್ತಿದೆ. ಯಾವುದೇ ಕಾರಣಕ್ಕೂ ಗ್ಯಾರಂಟಿ ನಿಲ್ಲುವುದಿಲ್ಲ. ಇದರಲ್ಲಿ ಯಾವುದೇ ಅನುಮಾನ ಬೇಡ. ಬಿಪಿಎಲ್ ಕಾರ್ಡ್ ವಿವಾದ ಬಿಜೆಪಿ ಹುಟ್ಟಿಸಿದ ಭಯ. ಆದರೆ ಯಾವುದೇ ಗ್ಯಾರಂಟಿ ನಿಲ್ಲುವುದಿಲ್ಲ. ಇದನ್ನು ಪರಿಹಾರ ಮಾಡುತ್ತೇವೆ ಎಂದರು. ಬಿಜೆಪಿಯವರು ಒಂದಾಗಿ ವಕ್ಫ್ ಬೋರ್ಡ್ ಜನಜಾಗೃತಿ ಮಾಡಲಿ, ಅವರಲ್ಲಿಯೇ ಒಡಕಿದೆ. ನಮ್ಮನ್ನೇನು ನೋಡ್ತಾರೆ. ಇನ್ನೂ ಎಷ್ಟು ಬಣ ಇರುತ್ತೆ ಗೊತ್ತಿಲ್ಲ. ಯಾರ‍್ಯಾರು ದೆಹಲಿಯಲ್ಲಿ ಕುಳಿತು ಯಾರ‍್ಯಾರಿಗೆ ಆಪರೇಟಿಂಗ್ ಮಾಡುತ್ತಿದ್ದಾರೋ. ಯಾರ‍್ಯಾರದು ಕೈಚಳಕ ಎಲ್ಲೆಲ್ಲಿದೆಯೋ ಗೊತ್ತಿಲ್ಲ. ಮುರಳಿ ಮನೋಹರ ಜೋಶಿ ಅಂತಹವರನ್ನೇ ಮೂಲೆ ಗುಂಪು ಮಾಡಿದರು. ಇವರೆಲ್ಲಾ ಯಾವ ಲೆಕ್ಕ ಎಂದು ಟೀಕಿಸಿದರು.

ವಿಸ್ತರಣೆ ಇಲ್ಲವೇ ಪುನರ್‌ರಚನೆ ಸದ್ಯಕ್ಕಿಲ್ಲ

ಸಮಾವೇಶ ಅಯೋಜಿಸಲಾಗಿದೆ. ಸಮಾವೇಶಕ್ಕೆ ಕೆಪಿಸಿಸಿ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಅವರನ್ನೂ ಸಂಘಟಕರು ಆಹ್ವಾನಿಸಿದ್ದಾರೆ.

ಸಮಾವೇಶ ಕುರಿತಂತೆ ಹೈಕಮಾಂಡ್‌ಗೆ ಅನಾಮಧೇಯ ಪತ್ರ ಬರೆದಿರುವ ಬಗ್ಗೆ ಮಾಹಿತಿ ಇಲ್ಲ, ಖರ್ಗೆ ಅವರೂ ಈ ಬಗ್ಗೆ ಚರ್ಚೆ ಮಾಡಲಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

ಸಂಪುಟ ವಿಸ್ತರಣೆ ಚರ್ಚೆ ಆಗಿಲ್ಲ: ಕರ್ನಾಟಕ ಭವನದಲ್ಲಿ ಸುದ್ದಿಗಾರರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದ ಶಿವಕುಮಾರ್, ಸಂಪುಟ ವಿಸ್ತರಣೆಯ ಸಂದರ್ಭ ಬಂದಾಗ ಆಗುತ್ತದೆ, ಈಗ ಆ ಸಮಯ ಬಂದಿಲ್ಲ, ಒಂದು ಸಚಿವ ಸ್ಥಾನ ಖಾಲಿ ಇದ್ದು ಅದನ್ನು ತುಂಬುವ ಬಗ್ಗೆಯೂ ಚರ್ಚೆ ನಡೆದಿಲ್ಲ ಎಂದರು.

ಕೆಪಿಸಿಸಿ ಅಧ್ಯಕ್ಷಗಾದಿ ಆಕಾಂಕ್ಷಿ ಎನ್ನುವ ಸಚಿವ ಕೆ.ಎನ್.ರಾಜಣ್ಣ ಹಾಗೂ ಸತೀಶ್ ಜಾರಕಿಹೊಳಿ ಮಾಧ್ಯಮಗಳ ಮುಂದೆ ರಾಜಕೀಯ ಚರ್ಚೆ ಮಾಡುವುದು ಯಾವ ಪಕ್ಷದವರಿಗಾಗಲೀ, ಯಾರಿಗೇ ಅಗಲಿ ಸೂಕ್ತವಾದುದಲ್ಲ, ಮಾಧ್ಯಮಗಳ ಮುಂದೆ ಮಾಡುವ ಚರ್ಚೆಯಿಂದ ರಾಜಕಾರಣ ನಡೆಯುವುದಿಲ್ಲ ಎಂದರು.

ಅಸಮಾಧಾನ ಪತ್ರ: ಕಾಂಗ್ರೆಸ್‌ನ ಸಾಧನಾ ಸಮಾವೇಶ ಸಿದ್ದರಾಮಯ್ಯ ಅವರ ಸಮಾರಂಭವಾಗಿ ಬದಲಾಗಿದೆ ಎಂಬ ಕುರಿತ ಅಸಮಾಧಾನ ಪತ್ರವು ಪಕ್ಷದ ಎಐಸಿಸಿ ವರಿಷ್ಠರಿಗೆ ತಲುಪಿರುವ ಬಗ್ಗೆ ನನಗೆ ಮಾಹಿತಿಯಿಲ್ಲ, ಸಮಾವೇಶ ಯಾವ ಕಾರಣಕ್ಕೆ ನಡೆಸಲಾಗುತ್ತಿದೆ ಎನ್ನುವುದರ ಬಗ್ಗೆ ಮುಖ್ಯಮಂತ್ರಿಗಳು ನನಗೆ ಈಗಾಗಲೇ ತಿಳಿಸಿದ್ದಾರೆ.

ಮಿಕ್ಕ ವಿಚಾರಗಳು ನನಗೆ ಗೊತ್ತಿಲ್ಲ, ಮುಖ್ಯಮಂತ್ರಿ ಹಾಗೂ ತಾವು ಭೇಟಿ ಆಗಿ ಮೂರ‍್ನಾಲ್ಕು ದಿನಗಳಾಗಿವೆ. ಸಮಾವೇಶದಲ್ಲಿ ಪಕ್ಷದ ಭಾಗವಹಿಸುವಿಕೆ ಖಂಡಿತ ಇದ್ದೇ ಇರುತ್ತದೆ ಎಂದರು.

ದೈವದ ಮೊರೆ ಹೋದ ವಿಜಯೇಂದ್ರ ಬಣ

ಸಭೆ ತೀರ್ಮಾನಿಸಿತು. ಪಕ್ಷದ ಹೈಕಮಾಂಡ್ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿ ಇರಬೇಕಾಗುತ್ತದೆ, ಆದರೆ, ಹಿರಿಯ ನಾಯಕರಾದ ಯತ್ನಾಳ್, ಜಾರಕಿಹೊಳಿ ಮೊದಲಾದವರು ಗೊಂದಲ ಮೂಡಿಸುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ಆಪಾದಿಸಿದರು. ವಕ್ಫ್ ಒತ್ತುವರಿ ತೆರವು ವಿರುದ್ಧ ಜನಾಂದೋಲನ ಮೂಡಿಸಲು ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್.ಅಶೋಕ್ ಮತ್ತು ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಮೂರು ತಂಡಗಳು ಡಿಸೆಂಬರ್ 4ರಿಂದ ರಾಜ್ಯಾದ್ಯಂತ ಪ್ರವಾಸ ನಡೆಸಲಿವೆ, ಇದರಲ್ಲಿ ಎಲ್ಲ ಕಾರ್ಯಕರ್ತರು ಪಾಲ್ಗೊಳ್ಳಬೇಕು, ಆದರೆ, ಯತ್ನಾಳ್ ನೇತೃತ್ವದ ತಂಡ ಪರ್ಯಾಯವಾಗಿ ಯಾತ್ರೆ ಆರಂಭಿಸಿ ಗೊಂದಲ ಸೃಷ್ಟಿಸಿದೆ.

ಈ ಗೊಂದಲ ನಿವಾರಿಸುವ ದೃಷ್ಟಿಯಿಂದ ಯತ್ನಾಳ್ ಯಾತ್ರೆಗೆ ತಕ್ಷಣವೇ ಕಡಿವಾಣ ಹಾಕಬೇಕು, ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿರುವ ನಾಯಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಹೈಕಮಾಂಡ್ ಮೇಲೆ ಒತ್ತಡ ಹೇರಲಾಗುವುದು. ಪಕ್ಷದಲ್ಲಿ ಇತ್ತೀಚೆಗೆ ನಡೆಯುತ್ತಿರುವ ವಿದ್ಯಮಾನಗಳು ಗೊಂದಲಕ್ಕೆ ಕಾರಣವಾಗಿವೆ, ಆದರೆ, ಕಾರ್ಯಕರ್ತರು ಗೊಂದಲದಲ್ಲಿ ಸಿಲುಕದೆ ಪಕ್ಷದ ಅಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ಮುನ್ನಡೆಯಬೇಕು ಎಂದು ಮನವಿ ಮಾಡಿದರು.

ಈ ತಂಡವು ನಾಳೆ (ನ.30) ಬೆಳಗ್ಗೆ ಮೈಸೂರಿಗೆ ಆಗಮಿಸಿ, ಚಾಮುಂಡೇಶ್ವರಿ ಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ನಂತರ 9 ಗಂಟೆಗೆ ಸುದ್ದಿಗೋಷ್ಠಿ ನಡೆಸಲಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಸೂಕ್ತ ತೆರಿಗೆ ಪಾಲು ನೀಡಿ

ಆದ್ದರಿಂದ ಅಮೃತ್ ಅಥವಾ ಇನ್ನಾವುದೇ ಯೋಜನೆಯಡಿ ಕರ್ನಾಟಕಕ್ಕೆ 10,000 ಕೋಟಿ ರೂ. ಬಿಡುಗಡೆ ಮಾಡುವಂತೆ ಕೇಂದ್ರ ನಗರಾಭಿವೃದ್ಧಿ ಇಲಾಖೆಗೆ ತಾವು ನಿರ್ದೇಶನ ನೀಡಬೇಕು. 15ನೇ ಹಣಕಾಸು ಆಯೋಗ ಕರ್ನಾಟಕ ರಾಜ್ಯಕ್ಕೆ ಸರಿಯಾದ ನ್ಯಾಯ ಒದಗಿಸುತ್ತಿಲ್ಲ ಎಂಬುದಾಗಿ ನಾವು ನಿರಂತರವಾಗಿ ಪ್ರಸ್ತಾಪಿಸುತ್ತಾ ಬಂದಿದ್ದೇವೆ, ತೆರಿಗೆ ಹಂಚಿಕೆಯಲ್ಲಿ ರಾಜ್ಯದ ಪಾಲನ್ನು ಶೇ.1ರಷ್ಟು ಕಡಿಮೆ ಮಾಡಿರುವ ಶಿಫಾರಸ್ಸನ್ನು ಹಣಕಾಸು ಇಲಾಖೆ ಸರಿಪಡಿಸಬೇಕಾಗಿದೆ.

ಹಣಕಾಸು ಆಯೋಗ ರಾಜ್ಯಕ್ಕೆ ಹಂಚಿಕೆ ಕಡಿಮೆಯಾಗಿರುವುದಕ್ಕೆ ಪರಿಹಾರವಾಗಿ 5,495 ಕೋಟಿ ರೂ. ಅನುದಾನ ಬಿಡುಗಡೆಗೆ ಮತ್ತು ಪೆರಿಫೆರಲ್ ರಿಂಗ್ ರಸ್ತೆ ಮತ್ತು ನೀರಿನ ಮೂಲಗಳ ಪುನರುಜ್ಜೀವಕ್ಕೆ 6,000 ಕೋಟಿ ರೂ. ವಿಶೇಷ ಅನುದಾನ ನೀಡುವ ಬಗ್ಗೆ ಶಿಫಾರಸು ಮಾಡಿದೆ, ಹಣಕಾಸು ಆಯೋಗ ಕನಿಷ್ಠ ಈ ಎರಡು ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಬೇಕಾಗಿದೆ.

ನಾವು ಇನ್ನೂ 15ನೇ ಹಣಕಾಸು ಆಯೋಗದ ಅವಧಿಯಲ್ಲಿರುವುದರಿಂದ ರಾಜ್ಯಕ್ಕೆ ಹೆಚ್ಚುವರಿ ಅನುದಾನ ಒದಗಿಸಲು ಹಣಕಾಸು ಇಲಾಖೆಗೆ ನಿರ್ದೇಶನ ನೀಡುವಂತೆ ಪುನಃ ನಾನು ಮನವಿ ಮಾಡುತ್ತೇನೆ.

ಅಲ್ಪಾವಧಿ ಬೆಳೆ ಸಾಲ ವಿತರಣೆಗೆ ಪ್ರಸಕ್ತ ಸಾಲಿನಲ್ಲಿ ರಾಜ್ಯಕ್ಕೆ ಒದಗಿಸಿರುವ ನಬಾರ್ಡ್ ನೆರವು ಕಡಿತಗೊಳಿಸಿರುವುದು ರೈತಾಪಿ ವರ್ಗ ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದೆ, 2023–24ರ ಸಾಲಿಗೆ 5,600 ಕೋಟಿ ರೂ. ಮಂಜೂರು ಮಾಡಲಾಗಿತ್ತು, ಆದರೆ, 2024–25ರ ಸಾಲಿಗೆ 2,340 ಕೋಟಿ ರೂ. ಮಂಜೂರು ಮಾಡಲಾಗಿದೆ, ಇದರಿಂದಾಗಿ ನಬಾರ್ಡ್ ನೆರವು ಪ್ರಸಕ್ತ ಸಾಲಿಗೆ ಶೇ.58ರಷ್ಟು ಕಡಿತವಾದಂತಾಗಿದೆ.

ರಾಜ್ಯ ಹೆಚ್ಚುವರಿ ಬಡ್ಡಿ ಸಹಾಯಧನ ನೀಡದಿದ್ದರೆ ರೈತಾಪಿ ವರ್ಗದ ಆರ್ಥಿಕ ವೆಚ್ಚದ ಮೇಲೆ ಗಂಭೀರ ಪರಿಣಾಮ ಬೀರುವುದಲ್ಲದೆ, ರಾಜ್ಯದ ಆರ್ಥಿಕ ಸ್ಥಿತಿಯ ಮೇಲೂ ಪರಿಣಾಮ ಬೀರಲಿದೆ, ಆದ್ದರಿಂದ ಈ ಕೂಡಲೇ ಇದನ್ನು ಪುನರ್ ಪರಿಶೀಲಿಸಿ ನಬಾರ್ಡ್ ನೆರವು ಹೆಚ್ಚಿಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ. ರಾಜ್ಯದ ರೈತರು ಅಲ್ಪಾವಧಿ ಬೆಳೆ ಸಾಲ ಪಡೆಯಲು ಯಾವುದೇ ತೊಂದರೆಯಾಗದಂತೆ ತಾವು ಹಣಕಾಸು ಸಚಿವಾಲಯಕ್ಕೆ ಸೂಕ್ತ ನಿರ್ದೇಶನ ನೀಡುವಂತೆ ಮನವಿ ಮಾಡುತ್ತಿದ್ದೇನೆ.

ಈ ಮೊದಲೇ ಮನವಿ ಮಾಡಿರುವಂತೆ ಭದ್ರಾ ಮೇಲ್ದಂಡೆ ಯೋಜನೆಗೆ 2023–24ರ ಕೇಂದ್ರ ಬಜೆಟ್‌ನಲ್ಲಿ ಅನುಮೋದನೆಯಾಗಿರುವ 5,300 ಕೋಟಿ ರೂ. ಅನುದಾನ ಬಿಡುಗಡೆ ಮಾಡುವ ಕೇಂದ್ರ ಹಣಕಾಸು ಸಚಿವರ ಭರವಸೆ ಇದುವರೆಗೆ ಈಡೇರಿಲ್ಲ, ತ್ವರಿತ ನೀರಾವರಿ ಲಾಭ ಕಾರ್ಯಕ್ರಮದಡಿ ನೆರವು ಒದಗಿಸಲು ಸಚಿವ ಸಂಪುಟದ ಟಿಪ್ಪಣಿ ಸಿದ್ಧ ಮಾಡಿರುವ ಬಗ್ಗೆ ತಿಳಿದುಬಂದಿದೆ. ಪ್ರಸಕ್ತ ಯೋಜನೆ ಶೀಘ್ರ ಅನುಮೋದನೆಗೊಂಡಲ್ಲಿ ಭದ್ರಾ ಮೇಲ್ದಂಡೆ ಯೋಜನೆ ವ್ಯಾಪ್ತಿಗೆ ಒಳಪಡುವ ಮಧ್ಯ ಕರ್ನಾಟಕದ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಅನುಕೂಲವಾಗಲಿದೆ, ಆದ್ದರಿಂದ, ಈ ಪ್ರಸ್ತಾವನೆಗೆ ಶೀಘ್ರ ಅನುಮೋದನೆ ನೀಡಲು ತಮ್ಮಲ್ಲಿ ಮನವಿ ಮಾಡುತ್ತೇನೆ. 16ನೇ ಹಣಕಾಸು ಆಯೋಗದ ಅವಧಿಯಲ್ಲಿ ಕೇಂದ್ರದ ತೆರಿಗೆ ಪಾಲಿಗೆ ಹೆಚ್ಚಿನ ದೇಣಿಗೆ ಒದಗಿಸುವ ರಾಜ್ಯಗಳಿಗೆ, ಕೇಂದ್ರದ ತೆರಿಗೆ ಪಾಲಿನಲ್ಲಿ ಭಾರೀ ಕಡಿತ ಮಾಡಿ ಶಿಕ್ಷಿಸದಂತೆ ಹಣಕಾಸು ಇಲಾಖೆ ಖಾತ್ರಿಪಡಿಸಬೇಕೆಂಬ ನಮ್ಮ ಮನವಿಗೆ ಸೂಕ್ತ ಪ್ರತಿಕ್ರಿಯೆ ದೊರಕುವ ನಿರೀಕ್ಷೆ ಇದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಚಂದ್ರಶೇಖರನಾಥ ಸ್ವಾಮೀಜಿಗೆ ನೋಟಿಸ್

ಮತದಾನದ ಪವರ್ ಇಲ್ಲದಂತೆ ಮಾಡಿಬಿಡಬೇಕು ಅಂತಾ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು. ವಿವಾದ ದೊಡ್ಡದಾಗುತ್ತಿದ್ದಂತೆ ಚಂದ್ರಶೇಖರನಾಥ ಸ್ವಾಮೀಜಿ ಸ್ಪಷ್ಟನೆ ನೀಡಿದ್ದರು. ಅದು ಬಾಯಿ ತಪ್ಪಿ ಆಡಿದ ಮಾತು. ಹಾಗೆ ಹೇಳಬಾರದಾಗಿತ್ತು ಮುಸ್ಲಿಮರು ಭಾರತೀಯರೇ ಹೊರತು ಬೇರೆ ಯಾರೂ ಅಲ್ಲ. ದಯವಿಟ್ಟು ಈ ವಿಚಾರವನ್ನು ಇಲ್ಲಿಗೇ ಬಿಟ್ಟುಬಿಡಿ ಎಂದು ಸ್ವಾಮೀಜಿ ಮನವಿ ಮಾಡಿದ್ದರು. ಸ್ವಾಮೀಜಿಗೆ ಧೈರ್ಯ ಹೇಳಿದ ಬಿಜೆಪಿ ನಾಯಕರು: ಇನ್ನು ಚಂದ್ರಶೇಖರನಾಥ ಸ್ವಾಮೀಜಿ ವಿರುದ್ಧ ಎಫ್‌ಐಆರ್ ಹಿನ್ನೆಲೆ ಆರ್.ಅಶೋಕ್ ಮತ್ತು ಡಾ.ಅಶ್ವತ್ಥ್ ನಾರಾಯಣ ಸ್ವಾಮೀಜಿಯನ್ನು ಭೇಟಿ ಮಾಡಿದ್ದಾರೆ. ಬೆಂಗಳೂರಿನ ಕೆಂಗೇರಿಯಲ್ಲಿರುವ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠಕ್ಕೆ ಭೇಟಿ ನೀಡಿ ಕೆಲಹೊತ್ತು ಮಾತುಕತೆ ನಡೆಸಿ ಸ್ವಾಮೀಜಿಗೆ ಧೈರ್ಯ ಹೇಳಿದ್ದಾರೆ.

ಕಾನೂನಾತ್ಮಕವಾಗಿ ಜೊತೆಗಿರುತ್ತೇವೆ, ಸ್ವಾಮೀಜಿಗೆ ಅಶ್ವತ್ಥ್ ನಾರಾಯಣ ಭರವಸೆ: ಸ್ವಾಮೀಜಿ ಭೇಟಿ ಬಳಿಕ ಮಾತನಾಡಿದ ಶಾಸಕ ಡಾ.ಅಶ್ವತ್ಥ್‌ನಾರಾಯಣ, ಗುರುಗಳನ್ನು ಭೇಟಿ ಮಾಡಿ ಧೈರ್ಯ ಹೇಳಿದ್ದೇವೆ. ರಾಜಕೀಯವಾಗಿ, ಕಾನೂನಾತ್ಮಕವಾಗಿ ಜೊತೆಗೆ ಇರುತ್ತೇವೆ ಎಂದು ನಾವು ಭರವಸೆ ನೀಡಿದ್ದೇವೆ ಹೋರಾಟ ಮಾಡುವ ಪರಿಸ್ಥಿತಿ ಇನ್ನೂ ಉದ್ಭವ ಆಗಿಲ್ಲ. ಅಧಿವೇಶನದಲ್ಲಿ ವಕ್ಫ್ ವಿಚಾರವಾಗಿ ಹೋರಾಟ ಮಾಡ್ತೇವೆ. ಚಂದ್ರಶೇಖರನಾಥ ಸ್ವಾಮೀಜಿ ಕೂಡಾ ಬಹಳ ನೊಂದಿದ್ದಾರೆ. ಹೇಳಿಕೆ ಹಿಂಪಡೆದ ಬಳಿಕ ಕೇಸ್ ಹಾಕುವುದು ನೋಡಿದರೆ, ಸರ್ಕಾರ ತನ್ನ ಬೇರೆ ಬೇರೆ ಕೋಪ ಈ ರೀತಿ ತೀರಿಸಿಕೊಳ್ಳುತ್ತಿದೆ ಎಂದಿದ್ದಾರೆ.

ನಿಮ್ಮ ನೋಟಿಸ್, ಗೊಡ್ಡು ಬೆದರಿಕೆಗೆ ಸ್ವಾಮೀಜಿಗಳು ಹೆದರಲ್ಲ: ಸ್ವಾಮೀಜಿ ಭೇಟಿ ಬಳಿಕ ವಿಪಕ್ಷ ನಾಯಕ ಆರ್.ಅಶೋಕ್ ಪ್ರತಿಕ್ರಿಯಿಸಿದ್ದು, ನಿಮ್ಮ ನೋಟಿಸ್, ಗೊಡ್ಡು ಬೆದರಿಕೆಗೆ ಸ್ವಾಮೀಜಿಗಳು ಹೆದರಲ್ಲ. ಇಡೀ ಸಮಾಜ ಸ್ವಾಮೀಜಿಯವರ ಜೊತೆಗೆ ಇದೆ. ಕಾಂಗ್ರೆಸ್ ಸರ್ಕಾರ ಒಕ್ಕಲಿಗರ ವಿರೋಧಿಯಾಗಿ ಕೆಲಸ ಮಾಡುತ್ತಿದೆ. ದುರುಳ ಸರ್ಕಾರ ಸ್ವಾಮೀಜಿಯನ್ನು ಮುಟ್ಟಿದ್ರೆ ಸಮಾಜ ತಿರುಗಿ ಬೀಳುತ್ತೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ವಿಶ್ವ ಒಕ್ಕಲಿಗರ ಮಠದ ಸ್ವಾಮೀಜಿಗೆ ಧೈರ್ಯ ಹೇಳಲು ಬಂದಿದ್ದೇವೆ. ಸಮಾಜದ ಗುರುಗಳಿಗೆ ಜೊತೆಯಲ್ಲಿ ಇದ್ದೇವೆ ಎಂದು ಹೇಳಿದ್ದೇವೆ. ಹಿಂದೂಗಳಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಶ್ರೀಗಳು ಹೇಳಿದ್ದಾರೆ. ಯಾವನೋ ಒಬ್ಬ ಮುಸಲ್ಮಾನ ಮತಾಂಧ ದೂರು ಕೊಟ್ಟ ಅಂತ ಈಋಖ ಮಾಡುತ್ತಾರೆ ಅಂದರೆ ಸರ್ಕಾರಕ್ಕೆ ಎಷ್ಟು ಧೈರ್ಯ ಇರಬೇಕು ಎಂದಿದ್ದಾರೆ.

ಇನ್ನು ಸ್ವಾಮೀಜಿಯ ಹೇಳಿಕೆಯನ್ನು ಡಿಸಿಎಂ ಡಿಕೆ ಶಿವಕುಮಾರ್ ಖಂಡಿಸಿದ್ದು, ದೇಶದಲ್ಲಿ ಅಶಾಂತಿ ಸೃಷ್ಟಿಸದಂತೆ ಮನವಿ ಮಾಡಿದ್ದಾರೆ. ಗೃಹ ಸಚಿವ ಪರಮೇಶ್ವರ್ ಕೂಡ ಖಂಡಿಸಿದ್ದಾರೆ. ಸಂವಿಧಾನದ ಆಶಯಗಳ ವಿರುದ್ಧ ಯಾರು ಮಾತನಾಡಬಾರದು ಎಂದಿದ್ದಾರೆ. ಇನ್ನು ಸಚಿವ ಊ.ಅ.ಮಹದೇವಪ್ಪ ಬಾಬಾ ಸಹ ಬಾಬಾ ಸಾಹೇಬರ ಆಶಯವನ್ನ ಮೆಲುಕು ಹಾಕಿ, ಮನುವಾದದ ಮನಸ್ಥಿತಿಗಳು ಈ ರೀತಿ ಮಾತನಾಡ್ತಿವೆ ಅಂತಾ ಗುಡುಗಿದ್ದಾರೆ.

ಹೈಕಮಾಂಡ್‌ಗೆ ದೂರು

ಚಿಹ್ನೆಯಲ್ಲೇ ಕಾರ್ಯಕ್ರಮ ಮಾಡಲು ಸೂಚನೆ ನೀಡಬೇಕು. ಸಮಾವೇಶದ ಸಿದ್ಧತೆಗೆ ಸಭೆಗಳು ಕಾಂಗ್ರೆಸ್ ಪಕ್ಷದ ಕಚೇರಿಯಲ್ಲೇ ನಡೆಯುತ್ತಿವೆ. ಆದರೆ ಕಾಂಗ್ರೆಸ್ ಪಕ್ಷದ ಚಿಹ್ನೆಯಲ್ಲಿ ಸಮಾವೇಶ ನಡೆಯುತ್ತಿಲ್ಲ. ಪಕ್ಷವನ್ನು ದೂರವಿಟ್ಟು ಈ ರೀತಿಯ ಸಮಾವೇಶ ನಡೆಸುವ ಉದ್ದೇಶ ಏನು? ಎಂದು ಪತ್ರದಲ್ಲಿ ಉಲ್ಲೇಖ ಮಾಡಲಾಗಿದೆ. ಪತ್ರ ಬರೆದಿರುವ ನಾಯಕನ ಹೆಸರು ನಿಗೂಢವಾಗಿದ್ದು, ಇನ್ನು ಮಿನಿ ಸಿದ್ದ ರಾಮೋತ್ಸವದ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಈ ಪತ್ರವನ್ನು ಯಾರು ಬರೆದಿದ್ದಾರೆ ಎಂಬುವುದು ಇನ್ನೂ ಬಹಿರಂಗವಾಗಿಲ್ಲ. ಪತ್ರದ ಕೊನೆಯಲ್ಲಿ ಹೆಸರನ್ನು ಬರೆದರೂ ಅದನ್ನು ಮರೆಮಾಚಲಾಗಿದೆ. ಇದು ಕುತೂಹಲಕ್ಕೆ ಕಾರಣವಾಗಿದೆ.

ಕುಕ್ಕರಹಳ್ಳಿ ಕೆರೆಯಲ್ಲಿ ದೈತ್ಯ ಮೊಸಳೆ ದರ್ಶನ



ಕುಕ್ಕರಹಳ್ಳಿ ಕೆರೆಯಲ್ಲಿ ದೈತ್ಯ ಮೊಸಳೆ ಕ್ಯಾಮರಾ ಕಣ್ಣಿಗೆ ಸೆರೆಯಾದ ದೃಶ್ಯ

ಮೈಸೂರು, ನ.29(ಎಂಕೆ)– ಮೈಸೂರು ವಾಯುವಿಹಾರಿಗಳ ನೆಚ್ಚಿನ ತಾಣವಾದ ಕುಕ್ಕರಹಳ್ಳಿ ಕೆರೆಯಲ್ಲಿ ಮೊಸಳೆಯೊಂದು ಬಾಯ್ತೆರೆದು ತೇಲುತ್ತಿರುವ ದೃಶ್ಯ ಶುಕ್ರವಾರ ಬೆಳಗ್ಗೆ ಕ್ಯಾಮರಾ ಕಣ್ಣಿಗೆ ಸೆರೆಯಾಗಿದೆ.

ಮೈಸೂರು ವಿವಿ ವ್ಯಾಪ್ತಿಯ ಕುಕ್ಕರಹಳ್ಳಿ ಕೆರೆಗೆ ಹೊಂದಿಕೊಂಡಂತೆ ಮೈಸೂರು–ಹುಣಸೂರು ಮುಖ್ಯರಸ್ತೆ ಕಡೆಯಲ್ಲಿ ಮೀನುಗಾರರು ಹಾಕಿಕೊಂಡಿರುವ ಶೆಡ್ ಸಮೀಪದಲ್ಲಿ ಬೆಳಗ್ಗೆ 8.30 ರಿಂದ 9.30ರವರೆಗೆ ಕಾಣಿಸಿಕೊಂಡಿರುವ ಬೃಹತ್ ಮೊಸಳೆ, ವಾಯುವಿಹಾರಿಗಳನ್ನು ಭಯಭೀತರನ್ನಾಗಿಸಿದೆ.

ಇದೇ ವೇಳೆ ವಾಯು ವಿಹಾರಕ್ಕೆಂದು ತೆರಳಿದ್ದ ಹವ್ಯಾಸಿ ಛಾಯಾಗ್ರಾಹಕ ಕೆ.ಯು.ವರ್ಗೀಸ್, ಬಾಯ್ತೆರೆದು ಈಜುತ್ತಿರುವ ಬೃಹತ್ ಮೊಸಳೆಯ ಚಿತ್ರಗಳನ್ನು ತಮ್ಮ ಕ್ಯಾಮರಾದಲ್ಲಿ ಕ್ಲಿಕ್ಕಿಸಿದ್ದಾರೆ. ಅಲ್ಲದೆ ಮೊಸಳೆ ನೋಡಲು ಮುಗಿಬಿದ್ದ ವಾಯುವಿಹಾರಿಗಳ ಮೊಬೈಲ್‌ಗಳಲ್ಲಿಯೂ ಮೊಸಳೆ ದೃಶ್ಯ ಸೆರೆಯಾಗಿದೆ. ಕುಕ್ಕರಹಳ್ಳಿ ಕೆರೆಯಲ್ಲಿ ಮೊಸಳೆ ಇದೆ ಎಂದು ಈ ಹಿಂದೆ ಕೆಲವರು ಹೇಳುತ್ತಿದ್ದರೆ, ಮತ್ತೆ ಕೆಲವರು ಇಲ್ಲ ಎನ್ನುತ್ತಿದ್ದರು. ಇದರ ನಡುವೆ ದಿಢೀರ್ ಸದೃಶ್ಯವಾಗಿರುವ ಮೊಸಳೆ, ಕುಕ್ಕರಹಳ್ಳಿ ಕೆರೆಯಲ್ಲಿದೆ ಎಂಬುದನ್ನು ಖಾತರಿಪಡಿಸಿದೆ. ಕುಕ್ಕರಹಳ್ಳಿ ಕೆರೆಯಲ್ಲಿ ಮೀನುಗಳನ್ನು ಹಿಡಿಯುತ್ತಿರುವುದರಿಂದ ಮೀನುಗಳ ವಾಸನೆ ಜಾಡು ಹಿಡಿದು ಮೊಸಳೆ ಬಂದಿರುವ ಸಾಧ್ಯತೆ ಇದೆ. ನಾಲ್ಕೈದು ವರ್ಷಗಳ ಹಿಂದೆಯೂ ಮೊಸಳೆ ಕಾಣಿಸಿಕೊಂಡಿತ್ತು ಎಂದು ವಾಯುವಿಹಾರಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮ ಯೋಜನೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು

ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸೂಚನೆ



ಜಿಪಂ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯ 2ನೇ ತ್ರೈಮಾಸಿಕ ಸಭೆ ನಡೆಯಿತು.

ಮೈಸೂರು, ನ.29(ಎಂಕೆ)– ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು ಮತ್ತು ಯೋಜನೆಗಳ ಸವಲತ್ತು, ಸೌಲಭ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸೂಚಿಸಿದರು.

ಜಿಪಂ ಕಚೇರಿಯಲ್ಲಿ ಸಭಾಂಗಣದಲ್ಲಿ ಶುಕ್ರವಾರ ನಡೆದ 2024–25ನೇ ಸಾಲಿನ ಆರ್ಥಿಕ ವರ್ಷದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯ ಎರಡನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಡಿಸೆಂಬರ್ ಅಂತ್ಯಕ್ಕೆ ಎಲ್ಲಾ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಶೇ.100 ರಷ್ಟು ಪ್ರಗತಿ ಸಾಧಿಸುವ ಬಗ್ಗೆ ಕಟ್ಟುನಿಟ್ಟಾಗಿ ಕ್ರಮವಹಿಸಲು ಸೂಚಿಸಿದರು. ಜಿಲ್ಲಾ ಆರೋಗ್ಯ ಸೊಸೈಟಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆಡಳಿತಾತ್ಮಕ ಅನುಮೋದನೆ ನೀಡಿ, ಸಮುದಾಯ ಮಟ್ಟದಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು ಮತ್ತು ಯೋಜನೆಗಳ ಸವಲತ್ತು ಮತ್ತು ಸೌಲಭ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ. ತಾಯಿ ಮತ್ತು ಶಿಶು ಮರಣಕ್ಕೆ ಕಾರಣವಾದ ಅಂಶಗಳ ಬಗ್ಗೆ ಸಮುದಾಯ ಮತ್ತು ಸಾಂಸ್ಥಿಕ ಮಟ್ಟದಲ್ಲಿ ವಿಮರ್ಶಾತ್ಮಕ ಪರಿಶೋಧನೆ ನಡೆಸಿ, ಮುಂದಿನ ದಿನಗಳಲ್ಲಿ ಕಟ್ಟುನಿಟ್ಟಾಗಿ ಕ್ರಮವಹಿಸಲು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಕುಮಾರಸ್ವಾಮಿ, ಜಿಪಂ ಮುಖ್ಯ ಯೋಜನಾಧಿಕಾರಿಗಳು, ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ಎಲ್ಲಾ ತಾಲೂಕುಗಳ ತಾಲೂಕು ಆರೋಗ್ಯ ಅಧಿಕಾರಿಗಳು ಹಾಗೂ ಆರೋಗ್ಯ ಸಿಬ್ಬಂದಿ ಭಾಗವಹಿಸಿದ್ದರು.

ಕೂಚ್-ಬೆಹಾರ್ ಕ್ರಿಕೆಟ್ ಪಂದ್ಯಾವಳಿ

ಕರ್ನಾಟಕದ ಮಾರಕ ದಾಳಿಗೆ ಕುಸಿದ ಒಡಿಶಾ

- ಕರ್ನಾಟಕ ಮೊದಲ ಇನ್ನಿಂಗ್ಸ್‌ನಲ್ಲಿ 308ರನ್
- 147 ರನ್‌ಗೆ ಒಡಿಶಾ ಸರ್ವಪತನ

ಮೈಸೂರು,ನ.29(ಎಂಟಿವೈ)– ಕರ್ನಾಟಕ ಬೌಲರ್‌ಗಳ ಮಾರಕ ದಾಳಿಗೆ ಒಡಿಶಾ ತಂಡದ ಬ್ಯಾಟ್ಸಮನ್‌ಗಳು ತತ್ತರಿಸಿದ್ದು, ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 147 ರನ್‌ಗೆ ಆಲೌಟ್ ಆಗುವ ಮೂಲಕ ಸೋಲಿನ ಬೀತಿ ಎದುರಿಸುತಿದೆ.

ಮಾನಸ ಗಂಗೋತ್ರಿಯ ಶ್ರೀಕಂಠದತ್ತ ಚಾಮರಾಜ ಒಡೆಯರ್ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ಪಂದ್ಯದಲ್ಲಿ ಕರ್ನಾಟಕ ತಂಡ ನೀಡಿದ 308 ರನ್‌ಗಳನ್ನು ಬೆನ್ನತ್ತಲು ಎರಡನೇ ದಿನದಲ್ಲಿ ಬ್ಯಾಟಿಂಗ್ ಆರಂಭಿಸಿದ ಒಡಿಶಾ ತಂಡ ಕರ್ನಾಟಕದ ಬೌಲರ್‌ಗಳ ಮಾರಕ ದಾಳಿ ಎದುರಿಸಲು ಪರದಾಡಿತು. ನಾಲ್ವರು ಆಟಗಾರರು ಎರಡಂಕಿಯ ರನ್ ಗಳಿಸಿದ್ದು ಹೊರತುಪಡಿಸಿದರೆ, ಉಳಿದ ಆಟಗಾರರು ಬಹುಬೇಗ ಪೆವಿಲಿಯನ್ ಸೇರಿದರು. ಕರ್ನಾಟಕದ ಬೌಲರ್ ಪ್ರಣವ್ ಅಶ್ವಂತ್ 12 ಓವರ್‌ನಲ್ಲಿ 24 ರನ್ ನೀಡಿ 5 ವಿಕೆಟ್ ಕಬಳಿಸಿದರು. ಧೀರಜ್‌ಗೌಡ 19.5 ಓವರ್‌ನಲ್ಲಿ 40 ರನ್ ನೀಡಿ 3 ವಿಕೆಟ್, ಈಶ ಪುತ್ತಿಗೆ 13 ಓವರ್‌ನಲ್ಲಿ 32 ರನ್ ನೀಡಿ 2 ವಿಕೆಟ್ ತನ್ನದಾಗಿಸಿಕೊಂಡರು. ಇದರಿಂದ ಒಡಿಶಾ ತಂಡ 62.5 ಓವರ್‌ನಲ್ಲಿ 147 ರನ್‌ಗೆ ಆಲೌಟ್ ಆಯಿತು. ತಂಡದ ಆಟಗಾರ ಸಂಬಿತ್ ಕಿಬೆಜಾ 48 ರನ್, ವಿಕೆಟ್ ಕೀಪರ್ ಪಂಕಲ ಮೋಕ್ಷಿತ್ ಅಜೇಯ 29 ರನ್, ಆಯುಶ್ ಸುತಾರ್ 23, ಸಾರ್ಥಕ್ ಎಸ್.ಪ್ರಕಾಶ್ 16 ರನ್ ಗಳಿಸಿ ತಂಡಕ್ಕೆ ಆಸರೆಯಾದರು.

ಸಂಕ್ಷಿಪ್ತ ಸ್ಕೋರ್

ಕರ್ನಾಟಕ ಮೊದಲ ಇನ್ನಿಂಗ್ಸ್: 95.5 ಓವರ್‌ನಲ್ಲಿ 308 ರನ್‌ಗೆ ಆಲೌಟ್
ಒಡಿಶಾ ಮೊದಲ ಇನ್ನಿಂಗ್ಸ್: 62.5 ಓವರ್‌ನಲ್ಲಿ 147 ರನ್‌ಗೆ ಆಲೌಟ್, ಎರಡನೇ ಇನ್ನಿಂಗ್ಸ್: 17 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೆ 33 ರನ್

ಮೊದಲ ಇನ್ನಿಂಗ್ಸ್‌ನಲ್ಲಿ 161 ರನ್ ಹಿನ್ನಡೆ ಅನುಭವಿಸಿದ ಒಡಿಶಾ ಫಾಲೋ ಆನ್‌ನಲ್ಲಿತಂಡ ಎರಡನೇ ಇನ್ನಿಂಗ್ಸ್ ಆರಂಭಿಸಿದ್ದು, ದಿನದ ಅಂತ್ಯಕ್ಕೆ 17 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೆ 33 ರನ್ ಗಳಿಸಿದೆ. ಸ್ಕ್ರೀಸ್‌ನಲ್ಲಿ ಆಯುಶ್ ಸುತಾರ್ ಅಜೇಯ 18, ಪ್ರಯಾನ್ ಪ್ರಂತಿಕ್ ಸಮಾಲ್ ಅಜೇಯ 13 ರನ್‌ಗಳಿಸಿ ಆಟ ಕಾಯ್ದುಕೊಂಡಿದ್ದಾರೆ. ಒಡಿಶಾ ತಂಡ ಕರ್ನಾಟಕ ತಂಡದ ಮೊದಲ ಇನ್ನಿಂಗ್ಸ್ ಮೊತ್ತವನ್ನು ಬೆನ್ನಟ್ಟಲು ಇನ್ನು 128 ರನ್ ಗಳಿಸಬೇಕಾಗಿದೆ. ಮೂರನೇ ದಿನವಾದ ಶನಿವಾರ ಒಡಿಶಾ ತಂಡ ಆಟ ಮುಂದುವರೆಸಲಿದ್ದು, ಕರ್ನಾಟಕದ ಬೌಲರ್‌ಗಳನ್ನು ಹೇಗೆ ಎದುರಿಸುತ್ತಾರೆ ಕಾದು ನೋಡಬೇಕಾಗಿದೆ. ಇದಕ್ಕೂ ಮುನ್ನ ಮೊದಲ ದಿನದ ಅಂತ್ಯಕ್ಕೆ 8 ವಿಕೆಟ್ ಕಳೆದುಕೊಂಡು 290 ರನ್ ಗಳಿಸಿದ್ದ ಕರ್ನಾಟಕ ಇಂದು ಆಟ ಮುಂದುವರೆಸಿತು. ಕೇವಲ 18 ರನ್ ಸೇರಿಸುವುದರಲ್ಲಿ ಎರಡು ವಿಕೆಟ್ ಕಳೆದುಕೊಂಡು 95.5 ಓವರ್‌ನಲ್ಲಿ 308 ರನ್‌ಗೆ ಆಲೌಟ್ ಆಯಿತು.

ಡಿ.2ಕ್ಕೆ 'ಲಾ–ಗೈಡ್' ಡೈರಿ, ಕ್ಯಾಲೆಂಡರ್ ಬಿಡುಗಡೆ

ಮೈಸೂರು, ನ.29–'ಲಾ–ಗೈಡ್' ಕನ್ನಡ ಕಾನೂನು ಪತ್ರಿಕೆಯ 2025ನೇ ವರ್ಷದ ಕ್ಯಾಲೆಂಡರ್ ಮತ್ತು ಡೈರಿ ಬಿಡುಗಡೆ ಕಾರ್ಯಕ್ರಮ ಡಿ.2ರಂದು ನಡೆಯಲಿದೆ.



ಅಂದು ಬೆಳಿಗ್ಗೆ 10.30ಕ್ಕೆ ಮೆಟ್ರೋಪೋಲ್ ಹೋಟೆಲ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಂ.ಸಂಗ್ರೇಶಿ ಅವರು ವಹಿಸುತ್ತಿದ್ದು, ಮಾಜಿ ಸಚಿವ ಎ.ಮಂಜು ನೂತನ ವರ್ಷದ ಡೈರಿ ಬಿಡುಗಡೆ ಮಾಡಿದರೆ, ಹಿರಿಯ ಪತ್ರಕರ್ತ ಕೃಷ್ಣ ಪ್ರಸಾದ್ ಕ್ಯಾಲೆಂಡರ್ ಬಿಡುಗಡೆ ಮಾಡುವರು. ವಿಧಾನಪರಿಷತ್ ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಅಪರ ಜಿಲ್ಲಾಧಿಕಾರಿ ಶಿವರಾಜ್ ಅವರನ್ನು ಸನ್ಮಾನಿಸಲಾಗುವುದು ಎಂದು 'ಲಾ–ಗೈಡ್' ಕನ್ನಡ ಕಾನೂನು ಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ತಿಳಿಸಿದ್ದಾರೆ.

ಮೈಸೂರು ಆಕಾಶವಾಣಿ ಸಾಂಸ್ಕೃತಿಕ ಸಂಘದಿಂದ ರಾಜ್ಯೋತ್ಸವ ಆಚರಣೆ

ಉನ್ನತ ಸ್ಥಾನಕ್ಕೆ ಕೊಂಡೊಯ್ಯು ಶಕ್ತಿ ಕನ್ನಡಕ್ಕಿದೆ: ಎಡಿಸಿ ಡಾ.ಪಿ.ಎಸ್.ಶಿವರಾಜು ಅಭಿಮತ



ಆಕಾಶವಾಣಿಯಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವದಲ್ಲಿ ಎಡಿಸಿ ಡಾ.ಪಿ.ಎಸ್.ಶಿವರಾಜು ಮಾತನಾಡಿದರು.

ಮೈಸೂರು, ನ.29(ಎಂಕೆ)– ಕನ್ನಡ ಭಾಷೆಯ ಬಗ್ಗೆ ನಾವೆಲ್ಲರೂ ಆತ್ಮಾಭಿಮಾನ ಹೊಂದಿರಬೇಕು. ನಮ್ಮನ್ನು ಉನ್ನತ ಸ್ಥಾನಕ್ಕೆ ಕರೆದೊಯ್ಯುವ ಶಕ್ತಿ ಕನ್ನಡಕ್ಕಿದೆ. ಕನ್ನಡ ನಾಡಿನಲ್ಲಿ ಹುಟ್ಟಿರುವುದೇ ನಮ್ಮೆಲ್ಲರ ಪೂರ್ವಜನ್ಮದ ಪುಣ್ಯ ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಎಸ್.ಶಿವರಾಜು ಹೇಳಿದರು.

ಮೈಸೂರಿನ ಯಾದವಗಿರಿಯಲ್ಲಿರುವ ಮೈಸೂರು ಆಕಾಶವಾಣಿಯಲ್ಲಿ ಆಕಾಶವಾಣಿ ಸಾಂಸ್ಕೃತಿಕ ಸಂಘದ ವತಿಯಿಂದ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕರ್ನಾಟಕ ಎಂದರೆ ಬರೀ ನೆಲವಲ್ಲ ಕಾಮಧೇನು, ಕಲ್ಪವೃಕ್ಷವುಳ್ಳ ಪುಣ್ಯ ಕ್ಷೇತ್ರ ಕನ್ನಡ ಜಲವೆಂದರೆ ಪಾವನ ತೀರ್ಥ ಎನ್ನಲಾಗುತ್ತದೆ. ಜೀವನ ನಡೆಸಲು ನಾವುಗಳು ಎಲ್ಲೇ ಇದ್ದರೂ ಕಡೆಗೆ ವಾಪಸ್ ನಮ್ಮ ನೆಲಕ್ಕೆ ಬಂದರೆ ಸ್ವರ್ಗಕ್ಕೆ ಬಂದಂತಾಗುತ್ತದೆ. ಕನ್ನಡ ಭಾಷೆ ನಮ್ಮ ಬದುಕಿಗೆ ಸಾಕಷ್ಟು ಕೊಡುಗೆ ನೀಡಿದೆ. ನಾವುಗಳು ಕನ್ನಡಕ್ಕೆ ಕೊಡುಗೆ ನೀಡಬೇಕಾದರೆ ಕಡ್ಡಾಯವಾಗಿ ಕನ್ನಡ ಭಾಷೆ ಬಳಸಬೇಕು ಎನ್ನುತ್ತಲೇ ತರಂಗಗಳ ಮೂಲಕ ಕೇಳುಗರ ಹೃದಯ ತಟ್ಟುವ ಮೈಸೂರು ಆಕಾಶವಾಣಿ ಚಿರಸ್ಥಾಯಿಯಾಗಿರಲಿ ಎಂದು ಹಾರೈಸಿದರು.

ನಂತರ ವಿದ್ವಾನ್ ಬಳ್ಳಾರಿ ಎಂ.ರಾಘವೇಂದ್ರ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಕೊಡಗು ವಿಶ್ವವಿದ್ಯಾನಿಲಯದ ಕುಲಪತಿ ಡಾ. ಅಶೋಕ್ ಹಾಲೂರು, ಆಕಾಶವಾಣಿ ಮುಖ್ಯಸ್ಥ ಎಸ್.ಎಸ್.ಉಮೇಶ್, ತಾಂತ್ರಿಕ ವಿಭಾಗದ ಮುಖ್ಯಸ್ಥ ಆನಂದನ್, ಸಹಾಯಕ ನಿರ್ದೇಶಕರಾದ ಅಬ್ದುಲ್ ರಷೀದ್, ಟಿ.ವಿ. ವಿದ್ಯಾಶಂಕರ್, ಆಕಾಶವಾಣಿ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ ಎನ್.ಕೇಶವ ಮೂರ್ತಿ, ಮೈಸೂರು ಉಮೇಶ್ ಮತ್ತಿತರರಿದ್ದರು.

ಹಾಸನದಲ್ಲಿ ಸಿದ್ದರಾಮಯ್ಯ ಸ್ವಾಭಿಮಾನಿಗಳ ಸಮಾವೇಶಕ್ಕೆ ವಿರೋಧ; ಡಿ.ಕೆ.ಶಿವಕುಮಾರ್ ಬೆಂಬಲಿಗರೆಂದು ಎಐಸಿಸಿಗೆ ಬರೆದಿರುವ ಪತ್ರ ನಕಲಿ

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸ್ಪಷ್ಟನೆ



ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಪ್ರತಿಮೆ ಬಳಿ ಶುಕ್ರವಾರ ಹೊರಟ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶದ ಪ್ರಚಾರ ರಥಕ್ಕೆ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಚಾಲನೆ ನೀಡಿದರು.

ಮೈಸೂರು, ನ.29(ಬಿಎಲ್‌ಯು)– ಹಾಸನದಲ್ಲಿ ಡಿಸೆಂಬರ್ 5 ರಂದು ನಡೆಯುವ ಸಿದ್ದರಾಮಯ್ಯ ಸ್ವಾಭಿಮಾನಿಗಳ ಸಮಾವೇಶ ವಿರೋಧಿಸಿ ಡಿ.ಕೆ.ಶಿವಕುಮಾರ್ ಅಭಿಮಾನಿಗಳೆಂದು ಎಐಸಿಸಿಗೆ ಬರೆದಿರುವ ಪತ್ರ ನಕಲಿ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಪ್ರತಿಮೆ ಬಳಿ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶದ ಪ್ರಚಾರ ರಥಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇದು ಕಾಂಗ್ರೆಸ್ ಪಕ್ಷದಿಂದ ಮಾಡುತ್ತಿರುವ ಸಮಾವೇಶವಾಗಿದ್ದು, ಇದಕ್ಕೆ ಹೈಕಮಾಂಡ್ ನಿಂದ ಸಂಪೂರ್ಣ ಒಪ್ಪಿಗೆ ಇದೆ ಎಂದು ತಿಳಿಸಿದರು.

ಸುದೀರ್ಘ ರಾಜಕಾರಣದಲ್ಲಿ ನಮ್ಮ ತಂದೆ ಯಾವುದೇ ತಪ್ಪು ಮಾಡಿಲ್ಲ. ಇದನ್ನು ತಿಳಿಸುವ ಸಲುವಾಗಿ ಸಮಾವೇಶ ಆಯೋಜಿಸಿದ್ದು, 2 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ ಈ ಮೂಲಕ ವಿರೋಧಪಕ್ಷಗಳ ಆರೋಪಕ್ಕೆ ಅಂದು ತಕ್ಕ ಉತ್ತರ ನೀಡಲಿದ್ದೇವೆ ಎಂದು ಡಾ.ಯತೀಂದ್ರ ಹೇಳಿದರು.

ರಾಜ್ಯದಲ್ಲಿ ಇತ್ತೀಚಿಗೆ ನಡೆದ ಮೂರು ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದ್ದು, ನಮ್ಮ ಸರ್ಕಾರಕ್ಕೆ ಇರುವ ಜನ ಬೆಂಬಲವನ್ನು ಇದು ತೋರಿಸುತ್ತದೆ. ಇದರಿಂದ ನಮ್ಮ ತಂದೆ ಪೂರ್ಣಾವಧಿವರೆಗೆ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಇರಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೋರ್ಟ್‌ನಿಂದ ದೇಶಕ್ಕೆ ಮಾರಕವಾದ ತೀರ್ಪು ಬರುತ್ತಿದೆ

ದೇಶಕ್ಕೆ ಮಾರಕವಾಗುವ ರೀತಿ ನ್ಯಾಯಾಲಯಗಳಿಂದ ತೀರ್ಪು ಬರುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಬೇಸರ ವ್ಯಕ್ತಪಡಿಸಿದರು.

ಸೆಬಿ, ಅದಾನಿ, ಬಾಬ್ರಿ ಮಸೀದಿ ಧ್ವಂಸ ಸೇರಿದಂತೆ ಹಲವು ಪ್ರಕರಣಗಳಲ್ಲಿ ದೇಶದ ಪರವಾಗಿ ತೀರ್ಪು ಬರುತ್ತಿಲ್ಲ. ಈ ಕುರಿತಂತೆ ಜನರ ಮನಸಿಲ್ಲಿ ಇರುವ ಭಾವನೆ ಹಾಗೂ ಅವರ ಮಾತುಗಳನ್ನು ಇಲ್ಲಿ ಹೇಳುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದರು.

ನಮ್ಮ ತಾಯಿಗೆ ಸೇರಿರುವ ಜಮೀನು ಸಂಬಂಧ ದೇವರಾಜು ಸಹೋದರನ ಪುತ್ರಿ ಜಮುನ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಡಾ.ಯತೀಂದ್ರ ಇಷ್ಟು ವರ್ಷಗಳ ಕಾಲ ಮೌನವಾಗಿದ್ದು ಈಗೇಕೆ ದೂರು ದಾಖಲಿಸಿದ್ದಾರೆ ಎಂದು ಪ್ರಶ್ನಿಸಿದರು. ತಹಶೀಲ್ದಾರ್ ಮುಂದೆ ಒಪ್ಪಿಗೆ ಸೂಚಿಸಿ ನಮಗೆ ಜಮೀನು ಮಾರಾಟ ಮಾಡಿದ್ದಾರೆ. ಈ ವಿಚಾರವಾಗಿ ದೇವರಾಜು ತಪ್ಪು ಮಾಡಿದ್ದರೆ ಅದಕ್ಕೆ ನಾವು ಹೊಣೆಗಾರರಲ್ಲ. ಜೊತೆಗೆ ಇದರಲ್ಲಿ ನಮ್ಮ ತಪ್ಪೇನು ಇಲ್ಲ. ಆದರೂ ನ್ಯಾಯಾಲಯದಲ್ಲಿ ಎಲ್ಲವೂ ತೀರ್ಮಾನವಾಗುತ್ತದೆ ಎಂದು ಡಾ.ಯತೀಂದ್ರ ತಿಳಿಸಿದರು.

ಆದರೆ ಬಿಜೆಪಿ ನಾಯಕರು ಸುಳ್ಳು ಆರೋಪ ಮಾಡುತ್ತಿದ್ದಾರೆ. ಅಧಿಕಾರಕ್ಕೆ ಬರುವುದು ಅವರ ಮೂಲ ಗುರಿಯಾಗಿದೆ. ಇದಕ್ಕಾಗಿ ನಿರಾಧಾರ ಆರೋಪ ಮಾಡಿ ನಮ್ಮ ತಂದೆ ವರ್ಚಸ್ಸಿಗೆ ಧಕ್ಕೆ ತರಲು, ಅವರ ಹೆಸರಿಗೆ ಮಸಿ ಬಳಿಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಉಪ ಚುನಾವಣೆ ಸೋಲಿನಿಂದ ವಿರೋಧ ಪಕ್ಷಗಳು ಉತ್ಸಾಹ ಕಳೆದುಕೊಂಡಿದೆ. ಆದರೂ ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನ ಮಾತ್ರ ಬಿಟ್ಟಿಲ್ಲ. ಅಧಿಕಾರಕ್ಕಾಗಿ ಎಂತಹ ಕೀಳು ಮಟ್ಟಕ್ಕಾದರೂ ಇಳಿಯುತ್ತಾರೆ. ಇಡಿ ಮತ್ತು ಸಿಬಿಐನಂತಹ ಕೇಂದ್ರ ಸರ್ಕಾರದ ಸಂಸ್ಥೆಗಳನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಈ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಡಾ. ಕಿಡಿಕಾರಿದರು.

ಮುಡಾ ಪ್ರಕರಣದಲ್ಲಿ ಯಾವುದೇ ಅವ್ಯವಹಾರವಾಗಿಲ್ಲ. ನಮ್ಮ ತಂದೆ ಯಾವುದೇ ತಪ್ಪು ಎಸಗಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಇದರಿಂದ ಇಡಿಗೆ ನಮ್ಮ ತಂದೆ ವಿರುದ್ಧ ವಿಚಾರಣೆ ಮಾಡುವ ಹಕ್ಕು ಇಲ್ಲ. ಮುಡಾದ 50:50 ಅನುಪಾತದ ನಿವೇಶನ ಮಂಜೂರಾತಿಯಲ್ಲಿ ಹಗರಣ ಆಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಆದರೆ ತನಿಖೆಯಿಂದ ಸತ್ಯಾಂಶ ಬಯಲಾಗುತ್ತದೆ ಎಂದು ಡಾ.ಯತೀಂದ್ರ ತಿಳಿಸಿದರು.

ಪ್ರಚಾರ ರಥಕ್ಕೆ ಚಾಲನೆ ನೀಡುವ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಸಾಹಿತಿ ಪ್ರೊ.ಕೆ.ಎಸ್. ಭಗವಾನ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಮುಖಂಡ ಭಾಸ್ಕರ್ ಹಾಗೂ ಇತರರು ಹಾಜರಿದ್ದರು.

ಅಭಿವೃದ್ಧಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ

ಮೈಸೂರು, ನ.29(ಜಿಎ)–ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ 4.30 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗಳಿಗೆ ಶಾಸಕ ಟಿ.ಎಸ್. ಶ್ರೀವತ್ಸ ಗುದ್ದಲಿ ಪೂಜೆ ನೆರವೇರಿಸಿದರು.



ಮೈಸೂರಿನ ಕೃಷ್ಣರಾಜ ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿ ಪೂಜೆ ನೆರವೇರಿಸಿದರು.

2 ಕೋಟಿ ರೂ ವೆಚ್ಚದಲ್ಲಿ ವಾರ್ಡ್ ನಂ.56ರ ವ್ಯಾಪ್ತಿಗೆ ಬರುವ ಕೃಷ್ಣಮೂರ್ತಿಪುರಂನ 5ನೇ ಕ್ರಾಸ್‌ನಲ್ಲಿರುವ ದೊಡ್ಡ ಮೋರಿಯ ಪುನರ್ ನಿರ್ಮಾಣ, 50 ಲಕ್ಷ ರೂ. ವೆಚ್ಚದಲ್ಲಿ ವಾರ್ಡ್ ನಂ.47ರ ಹುಡ್ಕೋ ಬಡಾವಣೆಯ ರಸ್ತೆ ಹಾಗೂ ರಸ್ತೆ ಪಕ್ಕದಲ್ಲಿ ಇಂಟರ್ ಲಾಕ್ ಅವಳವಡಿಸುವುದು ಮತ್ತು ಅನಿಕೇತನ ರಸ್ತೆಗಳಲ್ಲಿನ ಅಭಿವೃದ್ಧಿ, ವಾರ್ಡ್ ನಂ.63ರ ಜೆಪಿ ನಗರದ ಇ ಬ್ಲಾಕ್‌ನ 9ನೇ ರಸ್ತೆ, 7ನೇ ಅಡ್ಡ ರಸ್ತೆ, 4ನೇ ಅಡ್ಡ ರಸೆ ಮತ್ತು ರಿಂಗ ರಸ್ತೆ ಪಕ್ಕದ ಎ ವಲಯದ 27, 28, 28 ಅಡ್ಡ ರಸ್ತೆಗಳಲ್ಲಿ ಹಾಗೂ ಮಹೇಂದ್ರ ಎನ್‌ಕ್ಲೇವ್ ಬಡಾವಣೆಯಲ್ಲಿ ರಸ್ತೆ, ಚರಂಡಿ ಅಭಿವೃದ್ಧಿಯನ್ನು 1.80 ಕೋಟಿ ರೂ. ವೆಚ್ಚದಲ್ಲಿ ಮಾಡಲು ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕ್ಷೇತ್ರದಲ್ಲಿ ಇಂದು 4 ಸ್ಥಳಗಳಲ್ಲಿ ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಕಾಮಗಾರಿ ತ್ವರಿತವಾಗಿ ನಡೆದು ಸಾರ್ವಜನಿಕರ ಬಳಕೆಗೆ ಶೀಘ್ರದಲ್ಲಿಯೇ ಲಭ್ಯವಾಗಲಿದೆ ಎಂದರು.

ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿಗೆ ನಿಗದಿ ಪಡಿಸುವ ಹಣಕ್ಕಿಂತ ಕಡಿಮೆ ಹಣ ನಮೂದಿಸಿ ಗುತ್ತಿಗೆದಾರರು ಅರ್ಜಿ ಸಲ್ಲಿಸುತ್ತಿದ್ದಾರೆ. ಇದು ಸಾಕಷ್ಟು ಗೊಂದಲವಾಗಿದ್ದು, ನಮ್ಮ ಎಸ್‌ಆರ್ ವ್ಯಾಲ್ಯು ಬದಲಾವಣೆ ಮಾಡಬೇಕಿದೆಯೇ ಎಂಬುದರ ಬಗ್ಗೆ ಅನುಮಾನ ಮೂಡಿದ್ದು, ಈ ವಿಷಯವನ್ನು ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಚರ್ಚಿಸಿ, ಗಮನ ಸೆಳೆಯುತ್ತೇನೆ ಎಂದು ತಿಳಿಸಿದರು.

ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಮುಖಂಡರಾದ ಗೋಪಾಲ ರಾಜೆ ಅರಸ್, ಉಪೇಂದ್ರ, ಸೋಮು, ಪ್ರದೀಪ್ ಕುಮಾರ್, ಕಿಶೋರ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ರಾಜ್ಯೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು, ನ.29–ಮೈಸೂರಿನ ರಾಮಕೃಷ್ಣನಗರ 'ಹೆಚ್' ಬ್ಲಾಕ್‌ನಲ್ಲಿರುವ ಸಾಲು ಮರದ ತಿಮ್ಮಕ್ಕ ಬಯಲು ರಂಗಮಂಟಪದಲ್ಲಿ ನಾಳೆ (ನ.30) ಸಂಜೆ 5 ಗಂಟೆಗೆ ಕನ್ನಡ ರಾಜ್ಯೋತ್ಸವ ನಡೆಯಲಿದೆ.

ರಾಮಕೃಷ್ಣನಗರ 'ಜಿ', 'ಹೆಚ್' ಬ್ಲಾಕ್, ಆರೋಗ್ಯ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಸುರಭಿ ಮಹಿಳಾ ಸಮಾಜದ ಸಂಯುಕ್ತಾಶ್ರಯದಲ್ಲಿ ನಡೆಯಲಿರುವ ರಾಜ್ಯೋತ್ಸವ ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎಂ.ದೇವದಾಸ ಕಿಣಿ ವಹಿಸಲಿದ್ದು, ಸಾಹಿತಿ ಶ್ರೀಮತಿ ಮ.ನ.ಲತಾ ಮೋಹನ್, ಶ್ರೀ ಶನೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷೆ ಶ್ರೀಮತಿ ವಿಜಯಾ ನಂಜುಂಡಯ್ಯ, ಸುರಭಿ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಜಾನ್ಹವಿ ಶ್ರೀನಿವಾಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ನಟಿ ಸಮಂತಾ ರುತ್ ಪ್ರಭು ತಂದೆ ಜೋಸೆಫ್ ಪ್ರಭು ನಿಧನ

ಬಹುಭಾಷಾ ನಟಿ ಸಮಂತಾ ರುತ್ ಪ್ರಭು ತಂದೆ ಜೋಸೆಫ್ ಪ್ರಭು ಇಂದು ನಿಧನರಾಗಿದ್ದಾರೆ. ಸ್ವತಃ ಸಮಂತಾ ರುತ್ ಪ್ರಭು ಅವರು ಸೋಶಿಯಲ್ ಮೀಡಿಯಾ ಮೂಲಕ ಹಂಚಿಕೊಂಡಿದ್ದಾರೆ.



ಸಮಂತಾ ತಂದೆ ಜೋಸೆಫ್ ಪ್ರಭು ಅವರು ತೆಲುಗು ಆಂಗ್ಲೋ ಇಂಡಿಯನ್ ಆಗಿದ್ದು, ಸಮಂತಾ ಯಶಸ್ಸಿನಲ್ಲಿ ತಂದೆಯ ಕೊಡುಗೆ ಪ್ರಮುಖವಾಗಿತ್ತು. ವೃತ್ತಿಜೀವನದಲ್ಲಿ ಹಾಗೂ ವೈಯಕ್ತಿಕ ಬದುಕಿನ ಏಳು–ಬೀಳಿನಲ್ಲಿ ಸಮಂತಾಗೆ ಅವರ ತಂದೆ ಬೆಂಬಲವಾಗಿ ನಿಂತಿದ್ದರು. ತಂದೆಯನ್ನು ಕಳೆದುಕೊಂಡ ಸಮಂತಾ ಅವರಿಗೆ ಅಭಿಮಾನಿಗಳು, ಆಪ್ತರು ಮತ್ತು ಸೆಲೆಬ್ರಿಟಿಗಳು ಸಾಂತ್ವನದ ಸಂದೇಶ ಕಳಿಸುತ್ತಿದ್ದಾರೆ.

ಮೈಸೂರು ನಗರ ಪೊಲೀಸ್ ಕ್ರೀಡಾಕೂಟ

ನಗರ ಸಶಸ್ತ್ರ ಮೀಸಲು ಪಡೆ ಮತ್ತೊಮ್ಮೆ ಚಾಂಪಿಯನ್

ಮೈಸೂರು, ನ.29(ಎಂಕೆ)– ಮೈಸೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ನಗರ ಸಶಸ್ತ್ರ ಮೀಸಲು ಪಡೆ(ಸಿಎಆರ್) ತಂಡ ಪ್ರತೀ ವರ್ಷದಂತೆ ತನ್ನ ಪಾರುಪತ್ಯ ಮುಂದುವರಿಸುವ ಮೂಲಕ ಮತ್ತೊಮ್ಮೆ ಚಾಂಪಿಯನ್ ಆಯಿತು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ನಗರ ಸಶಸ್ತ್ರ ಮೀಸಲು ಪಡೆ ಮೈದಾನದಲ್ಲಿ ಕಳೆದ ಮೂರು ದಿನಗಳಿಂದ ನಡೆದ ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಗುಂಪು ಹಾಗೂ ವೈಯಕ್ತಿಕ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿದ ಸಿಎಆರ್ ತಂಡ 'ಸಮಗ್ರ' ಪ್ರಶಸ್ತಿಯನ್ನು ಪಡೆಯಿತು. ಹಾಗೆಯೇ ಪುರುಷರ ವಿಭಾಗದಲ್ಲಿ ಸಿಎಆರ್‌ನ ಬಿ.ಡಿ.ದಿನೇಶ್ ಹಾಗೂ ಮಹಿಳಾ ವಿಭಾಗದಲ್ಲಿ ಕುವೆಂಪುನಗರ ಉಪವಿಭಾಗದ ಕೆ.ಅಶ್ವಿನಿ ಸರ್ವೋತ್ತಮ ಪ್ರಶಸ್ತಿಗೆ ಭಾಜನರಾದರು.



ಮೈಸೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಸಿಎಆರ್ ಚಾಂಪಿಯನ್ ಆಯಿತು.

ಗುಂಪು ವಿಭಾಗ: ಮಹಿಳೆಯರ ವಿಭಾಗದ ವಾಲಿಬಾಲ್ ಹಾಗೂ ಕಬಡ್ಡಿ ಸ್ಪರ್ಧೆಯಲ್ಲಿ ವಿಜಯ ನಗರ ವಿಭಾಗ ಪ್ರಥಮ ಸ್ಥಾನ ಪಡೆದರೆ, ಕೆಆರ್ ವಿಭಾಗ ದ್ವಿತೀಯ ಸ್ಥಾನ ಪಡೆಯಿತು. ಹಗ್ಗಜಗ್ಗಾಟದಲ್ಲಿ ಪಿಎಸ್‌ಐ ಭಾನುಕುಮಾರಿ ನೇತೃತ್ವದ ಕೆ.ಆರ್ ವಿಭಾಗ ಪ್ರಥಮ ಹಾಗೂ ಆರ್.ಸವಿತಾ ನೇತೃತ್ವದ ವಿಜಯನಗರ ದ್ವಿತೀಯ ಸ್ಥಾನ ಪಡೆದು ಬೀಗಿತು.

ಹಾಗೆಯೇ ಪುರುಷರ ವಿಭಾಗದ ಹಗ್ಗಜಗ್ಗಾಟದಲ್ಲಿ ನಗರ ಸಶಸ್ತ್ರ ಮೀಸಲು ಪಡೆ ಪ್ರಥಮ ಸ್ಥಾನ ಗೆದ್ದರೆ, ಪ್ರಬಲ ಪೈಪೋಟಿ ನೀಡಿದ ಸಂಚಾರ ಪೊಲೀಸರ ತಂಡ ದ್ವಿತೀಯ ಸ್ಥಾನ ಪಡೆಯಿತು. ಅಧಿಕಾರಿಗಳಿಗಾಗಿ ಆಯೋಜಿಸಿದ್ದ ಕ್ರಿಕೆಟ್‌ನಲ್ಲಿ ಕಬಿನಿ ತಂಡ ಪ್ರಥಮ, ಕಾವೇರಿ ದ್ವಿತೀಯ ಸ್ಥಾನ ಪಡೆಯಿತು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಬ್ಯಾಡ್ಮಿಂಟನ್, ಶಾಟ್‌ಪುಟ್, ಫೈಯರಿಂಗ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಮಿಂಚಿದರು.

ಕ್ರೀಡೆಯಿಂದ ಮಾನಸಿಕ ನೆಮ್ಮದಿ: ಕ್ರೀಡಾಕೂಟದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಎಂ.ಮಾಲತಿ ಪ್ರಿಯ, ಒತ್ತಡದ ಜೀವನಕ್ಕೆ ಕ್ರೀಡೆಯು ನಿರಾಳತೆ ಹಾಗೂ ಮಾನಸಿಕ ನೆಮ್ಮದಿ ನೀಡುತ್ತದೆ ಎಂದರು.


ಸದಾ ತಮ್ಮ ಕರ್ತವ್ಯದಲ್ಲಿ ತೊಡಗಿರುವ ಪೊಲೀಸ್ ಇಲಾಖೆ ಸಿಬ್ಬಂದಿ ಆರೋಗ್ಯದ ಬಗ್ಗೆಯೂ ಗಮನ ಹರಿಸುವ ಅನಿವಾರ್ಯತೆ ಇದೆ. ದೈಹಿಕವಾಗಿ ಸದೃಢರಾಗಿರಲು ನಿತ್ಯ ವ್ಯಾಯಾಮ, ಯೋಗಾಭ್ಯಾಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು ಒಳಿತು ಎಂದು ಸಲಹೆ ನೀಡಿದರು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಸಿಎಆರ್ ಡಿಸಿಪಿ ಎ.ಮಾರುತಿ, ಅಶ್ವರೋಹಿ ದಳದ ಕಮಾಂಡೆಂಟ್ ಶೈಲೇಂದ್ರ ಉಪಸ್ಥಿತರಿದ್ದರು.

> "ಎಲ್ಲಾ ಇಲಾಖೆಯಲ್ಲೂ ವಾರ್ಷಿಕ ಕ್ರೀಡಾಕೂಟ ನಡೆಯಬೇಕು. ಅರಣ್ಯ ಇಲಾಖೆಯಲ್ಲೂ ಆಯೋಜಿಸುತ್ತೇವೆ ದಸರಾದ ಕಾರಣದಿಂದ ಪೊಲೀಸ್ ಹಾಗೂ ಅರಣ್ಯ ಇಲಾಖೆಯ ನಡುವಿನ ಬಾಂಧವ್ಯ ಗಟ್ಟಿಯಾಗಿದ್ದು, ಇದೇ ರೀತಿ ಮುಂದುವರೆಯಲಿ.
> – ಡಾ.ಎಂ.ಮಾಲತಿಪ್ರಿಯ, ಅರಣ್ಯ ಸಂರಕ್ಷಣಾಧಿಕಾರಿ

ದೇಶ – ವಿದೇಶ

ಮೃಗಾಲಯದಲ್ಲಿ ಹೈಡ್ರಾಲಿಕ್ ಬಾಗಿಲಿಗೆ ಸಿಲುಕಿ ಗೊರಿಲ್ಲಾ ಮರಿ ಸಾವು

ಕೆನಡಾ: ಕೆನಡಾದ ಮೃಗಾಲಯದಲ್ಲಿ ಸಿಬ್ಬಂದಿಯಿಂದ ಉಂಟಾದ ಆಕಸ್ಮಿಕ ಅನಾಹುತದಲ್ಲಿ ಗೊರಿಲ್ಲಾ ಮರಿ ಸಾವನ್ನಪ್ಪಿದೆ. ಮೃಗಾಲಯದಲ್ಲಿದ್ದ ಹೈಡ್ರಾಲಿಕ್ ಬಾಗಿಲನ್ನು ಸಿಬ್ಬಂದಿ ಮುಚ್ಚುವ ಸಮಯಕ್ಕೆ ಗೊರಿಲ್ಲಾ ಮರಿ ತಲೆ ಕೊಟ್ಟ ಪರಿಣಾಮ ಈ ಅವಘಡ ಸಂಭವಿಸಿದೆ.



ನ್ಯೂಯಾರ್ಕ್ ಪೋಸ್ಟ್ ಪ್ರಕಾರ ಘಟನೆಯು ನ.12 ರಂದು ಆಲ್ಬರ್ಟಾದ ಕ್ಯಾಲ್ಗರಿ ಮೃಗಾಲಯದಲ್ಲಿ ನಡೆದಿದೆ. 'ಐಯಾರೆ' ಹೆಸರಿನ 2 ವರ್ಷ ವಯಸ್ಸಿನ ಪಶ್ಚಿಮ ತಗ್ಗು ಪ್ರದೇಶದ ಗೊರಿಲ್ಲಾ ತನ್ನ ಗೊರಿಲ್ಲಾ ಸಂಗಾತಿಗಳೊಂದಿಗೆ ಬೆಡ್‌ರೂಮ್‌ನಿಂದ ಬೆಡ್‌ರೂಮ್‌ಗೆ ತಿರುಗುತ್ತಿತ್ತು ಸಿಬ್ಬಂದಿಯೊಬ್ಬರು ಅದನ್ನು ಬೇರ್ಪಡಿಸಲು ಪ್ರಯತ್ನಿಸುತ್ತಿದ್ದರು, ಈ ವೇಳೆ ಆರೈಕೆದಾರರು ಬಾಗಿಲನ್ನು ತಪ್ಪಾಗಿ ಸಕ್ರಿಯಗೊಳಿಸಿದ್ದಾರೆ, ಇದರ ಪರಿಣಾಮವಾಗಿ ಗೊರಿಲ್ಲಾ ಮರಿ ಬಾಗಿಲಿಗೆ ಸಿಲುಕಿ ತಲೆಗೆ ತೀವ್ರವಾಗಿ ಗಾಯವಾಯಿತು ಎಂದು ಮೃಗಾಲಯ ತಿಳಿಸಿದೆ. ಗೊರಿಲ್ಲಾ ತಂಡವು ಐಯಾರ್‌ಗೆ ವೈದ್ಯಕೀಯ ಚಿಕಿತ್ಸೆ ಕೊಡಿಸಲು ಮುಂದಾಯಿತು. ಪಶುವೈದ್ಯಕೀಯ ತಂಡವು ತಕ್ಷಣವೇ ಸಿಪಿಆರ್ ಸೇರಿದಂತೆ ಜೀವರಕ್ಷಕ ಕ್ರಮಗಳನ್ನು ಪ್ರಾರಂಭಿಸಿತು. ಆದರೆ ಐಯಾರ್ ಬದುಕಿ ಉಳಿಯಲಿಲ್ಲ ಎಂದು ಮೃಗಾಲಯದ ಪ್ರಾಣಿ ಸಂರಕ್ಷಣಾ ನಿರ್ದೇಶಕ ತಿಳಿಸಿದ್ದಾರೆ.

ಪಂಜಿನ ಮೆರವಣಿಗೆಯಲ್ಲಿ ಭಾರೀ ಅಗ್ನಿ ಅವಘಡ, 30ಕ್ಕೂ ಹೆಚ್ಚು ಮಂದಿಗೆ ತೀವ್ರ ಗಾಯ

ಖಾಂಡ್ವಾ ಪಂಜಿನ ಮೆರವಣಿಗೆಯಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿ 30ಕ್ಕೂ ಹೆಚ್ಚು ಮಂದಿ ಸುಟ್ಟು ಗಂಭೀರ ಗಾಯಗೊಂಡಿರುವ ಘಟನೆ ಮಧ್ಯಪ್ರದೇಶದಲ್ಲಿ ನಡೆದಿದೆ.

ಮಧ್ಯಪ್ರದೇಶದ ಖಾಂಡ್ವಾದಲ್ಲಿ ಗುರುವಾರ ತಡರಾತ್ರಿ ಈ ಘಟನೆ ನಡೆದಿದ್ದು, 26/11ರ ದಾಳಿಯ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಲು ಆಯೋಜಿಸಲಾದ ಪಂಜಿನ ಮೆರವಣಿಗೆಯಲ್ಲಿ ನೂರಾರು ಮಂದಿ ಭಾಗವಹಿಸಿದ್ದರು. ಈ ವೇಳೆ ಪಂಜಿಗೆ ಬೆಂಕಿ ಹಚ್ಚುವಾಗ ಏಕಾಏಕಿ ಬೆಂಕಿ ಆವರಿಸಿಕೊಂಡಿದೆ. ಆಗ ಜನರು ಭಯದಿಂದ ಪ್ರಾಣರಕ್ಷಣೆಗಾಗಿ ಓಡಿದಾಗ ಕಾಲ್ತುಳಿತ ಉಂಟಾಗಿದೆ.

ಖಾಂಡ್ವಾದಲ್ಲಿ ನಡೆದ ಅಗ್ನಿ ಅವಘಡದಲ್ಲಿ ಗಾಯಗೊಂಡಿರುವ ಜನರನ್ನು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಬಗ್ಗೆ ಮಾತನಾಡಿರುವ ಖಾಂಡ್ವಾ ಎಸ್ಪಿ ಮನೋಜ್ ರೈ ಶ್ರದ್ಧಾಂಜಲಿ ಕಾರ್ಯಕ್ರಮದ ವೇಳೆ ಈ ಅವಘಡ ಸಂಭವಿಸಿದೆ ಎಂದು ತಿಳಿಸಿದ್ದಾರೆ.

ಬೆಂಕಿಗೆ ಆಹುತಿಯಾದವರಲ್ಲಿ ಮಹಿಳೆಯರು, ಮಕ್ಕಳು ಕೂಡ ಸೇರಿದ್ದಾರೆ. ಜನರ ಮುಖ, ಕೈ ಸುಟ್ಟು ಕರಕಲಾಗಿದೆ. 30 ಮಂದಿಯನ್ನು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಪೈಕಿ 12 ಮಂದಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ತುರ್ತು ಚಿಕಿತ್ಸಾ ಘಟಕಕ್ಕೆ ಕಳುಹಿಸಲಾಗಿದೆ.

ಆಸ್ಟ್ರೇಲಿಯಾದಲ್ಲಿ 16 ವರ್ಷದೊಳಗಿನವರಿಗೆ ಸಾಮಾಜಿಕ ಜಾಲತಾಣ ಬಳಕೆ ನಿಷೇಧ

ಸಿಡ್ನಿ: ಆಸ್ಟ್ರೇಲಿಯಾದಲ್ಲಿ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಸಾಮಾಜಿಕ ಜಾಲತಾಣ ಬಳಸದಂತೆ ರೂಪಿಸಿದ್ದ ನಿಯಂತ್ರಣ ವಿಧೇಯಕವು ಸಂಸತ್‌ನಲ್ಲಿ ಅಂಗೀಕಾರಗೊಂಡಿದೆ. ಮಕ್ಕಳ ಮಾನಸಿಕ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಸಾಮಾಜಿಕ ಜಾಲತಾಣಗಳಿಂದ ನಿಷೇಧಿಸಲು ರಚನೆಯಾಗಿದ್ದ ಕಠಿಣ ನಿಯಮಗಳ ಸಾಮಾಜಿಕ ಜಾಲತಾಣಗಳ ಕನಿಷ್ಠ ವಯಸ್ಸು ನಿಯಂತ್ರಣ ವಿಧೇಯಕಕ್ಕೆ ಆಸ್ಟ್ರೇಲಿಯಾ ಸಂಸತ್ ಅಂಗೀಕಾರದ ಮುದ್ರೆ ಒತ್ತಿದೆ.

ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟಿಕ್‌ಟಾಕ್ ಸೇರಿದಂತೆ ಎಲ್ಲಾ ತಾಣಗಳನ್ನೂ 16 ವರ್ಷದೊಳಗಿನ ಮಕ್ಕಳು ಬಳಸದಂತೆ ನಿಯಂತ್ರಣ ವಿಧೇಯಕ ರೂಪಿಸಲಾಗಿದೆ. ಮಕ್ಕಳನ್ನು ಸಾಮಾಜಿಕ ಜಾಲತಾಣದಿಂದ ನಿಷೇಧಿಸಲು ಕಾನೂನು ರೂಪಿಸಿದ ಜಗತ್ತಿನ ಮೊದಲ ದೇಶ ಎಂಬ ಹಿರಿಮೆಗೆ ಆಸ್ಟ್ರೇಲಿಯಾ ಪಾತ್ರವಾಗಿದೆ.

ಹೊಸ ವಿಧೇಕದಲ್ಲಿ ಸಾಮಾಜಿಕ ಜಾಲತಾಣಗಳು ಮಕ್ಕಳು ಲಾಗಿನ್ ಆಗದಂತೆ ನಿರ್ಬಂಧಿಸಲು ಸೂಚಿಸಲಾಗಿದೆ. ನಿಯಮ ಉಲ್ಲಂಘಿಸಿದ ಸಂಸ್ಥೆಗಳ ಮೇಲೆ 49.5 (270 ಕೋಟಿ ರೂ.) ಆಸ್ಟ್ರೇಲಿಯನ್ ಡಾಲರ್ ದಂಡ ವಿಧಿಸುವ ಅವಕಾಶ ಕಲ್ಪಿಸಲಾಗಿದೆ.

ಮಹಾರಾಷ್ಟ್ರದಲ್ಲಿ ರಾಜ್ಯ ಸಾರಿಗೆ ಬಸ್ ಪಲ್ಟಿಯಾಗಿ 8 ಮಂದಿ ಸಾವು

ಮುಂಬೈ: ಮಹಾರಾಷ್ಟ್ರದ ಗೊಂಡಿಯಾ ಜಿಲ್ಲೆಯಲ್ಲಿ ಶುಕ್ರವಾರ ಮಧ್ಯಾಹ್ನ ಭೀಕರ ಅಪಘಾತ ಸಂಭವಿಸಿದೆ. ರಾಜ್ಯ ಸಾರಿಗೆ ಬಸ್ ಪಲ್ಟಿಯಾದ ಪರಿಣಾಮ ಕನಿಷ್ಠ ಎಂಟು ಜನರು ಸಾವನ್ನಪ್ಪಿದ್ದು, ಹಲವು ಮಂದಿ ಗಾಯಗೊಂಡಿದ್ದಾರೆ. ಬಸ್ ನಾಗ್ಪುರದಿಂದ ಗೊಂಡಿಯಾಗೆ ತೆರಳುತ್ತಿತ್ತು ಎನ್ನಲಾಗಿದೆ.



ಭಂಡಾರಾ ಡಿಪೋದಿಂದ ಗೊಂಡಿಯಾಗೆ ತೆರಳುತ್ತಿದ್ದ ಬಸ್ ಗೊಂಡಿಯಾ–ಅರ್ಜುನಿ ರಸ್ತೆಯ ಬಿಂದ್ರವನ ಟೋಲಾ ಗ್ರಾಮದ ಬಳಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಗಾಯಾಳುಗಳನ್ನು ಗೊಂಡಿಯಾ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಲಾಗಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಮುಖ್ಯಮಂತ್ರಿ ಏಕನಾಥ್ ಶಿಂಧೆ ಸಂತ್ರಸ್ತರಿಗೆ ತಕ್ಷಣದ ಪರಿಹಾರವಾಗಿ ರೂ. 10 ಲಕ್ಷ ನೆರವು ನೀಡುವಂತೆ ಸಾರಿಗೆ ಆಡಳಿತಕ್ಕೆ ಆದೇಶಿಸಿದ್ದಾರೆ.

ಅಪಘಾತ ಸಂಭವಿಸಿದ ಸ್ಥಳದಿಂದ ಎಂಟು ಮೃತದೇಹಗಳು ಪತ್ತೆಯಾಗಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ನಿರೀಕ್ಷೆ ಇದೆ. ಸ್ಥಳೀಯ ಆಡಳಿತದಿಂದ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆಯಲಾಗಿದ್ದು, ಗಾಯಾಳುಗಳಿಗೆ ತಕ್ಷಣದ ಮತ್ತು ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಕಾರ್ಯಾಲಯ ತಿಳಿಸಿದೆ.

ಆಂಬುಲೆನ್ಸ್‌ನಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ; ಇಬ್ಬರ ಬಂಧನ

ಭೂಪಾಲ್: 16 ವರ್ಷದ ಬಾಲಕಿಯನ್ನು ಅಪಹರಿಸಿ ಚಲಿಸುತ್ತಿರುವ ಆಂಬುಲೆನ್ಸ್‌ನಲ್ಲಿ ಸಾಮೂಹಿಕ ಅತ್ಯಾಚಾರವೆಸಗಿರುವ ಆಘಾತಕಾರಿ ಘಟನೆ ಮಧ್ಯಪ್ರದೇಶದ ಮೌಗಂಜ್ ಜಿಲ್ಲೆಯಲ್ಲಿ ನಡೆದಿದೆ. ಹೊಸದಾಗಿ ಸ್ಥಾಪಿತವಾದ ಮೌಗಂಜ್ ಜಿಲ್ಲೆಯ ಹನುಮಾನ ತಹಸಿಲ್ ಉತ್ತರ ಪ್ರದೇಶದ ಮಿರ್ಜಾಪುರ್ ಜಿಲ್ಲೆಯೊಂದಿಗೆ ಗಡಿಯನ್ನು ಹಂಚಿಕೊಂಡಿದೆ. ಇಬ್ಬರು ವ್ಯಕ್ತಿಗಳು ತನ್ನನ್ನು ಅಪಹರಿಸಿ ಜನನಿ ಎಕ್ಸ್‌ಪ್ರೆಸ್ ಆಂಬ್ಯುಲೆನ್ಸ್‌ಗೆ ಬಲವಂತವಾಗಿ ಹತ್ತಿಸಿ ಅಲ್ಲಿ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂದು ಸಂತ್ರಸ್ತೆ ಪೊಲೀಸರಿಗೆ ತಿಳಿಸಿದ್ದಾರೆ ಇದನ್ನು '108– ಆಂಬ್ಯುಲೆನ್ಸ್' ಎಂದೂ ಕರೆಯುತ್ತಾರೆ. ಜನನಿ ಎಕ್ಸ್‌ಪ್ರೆಸ್ ಆಂಬ್ಯುಲೆನ್ಸ್ ಅನ್ನು ರಾಜ್ಯ ಸರ್ಕಾರವು ಪಿಪಿಪಿ ಮಾದರಿಯಲ್ಲಿ ಮಧ್ಯ ಪ್ರದೇಶದ ಗ್ರಾಮೀಣ ಭಾಗಗಳಲ್ಲಿ ಗರ್ಭಿಣಿಯರು, ಅನಾ ರೋಗ್ಯದ ಶಿಶುಗಳು ಮತ್ತು ಬಿಪಿಎಲ್ ಕುಟುಂಬಗಳಿಗೆ ತುರ್ತು ಸಾರಿಗೆ ಸೌಲಭ್ಯಗಳನ್ನು ಒದಗಿಸಲು ನಿರ್ವಹಿಸುತ್ತದೆ.

ಆರೋಪಿಗಳಾದ ವೀರೇಂದ್ರ ಚತುರ್ವೇದಿ (ಆಂಬ್ಯುಲೆನ್ಸ್ ಚಾಲಕ) ಮತ್ತು ಆತನ ಸ್ನೇಹಿತ ರಾಜೇಶ್ ಕೇವತ್ ಅವರನ್ನು ಬುಧವಾರ ರಾತ್ರಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೈಸೂರು ಮಿತ್ರ ಶನಿವಾರ 30 ನವೆಂಬರ್ 2024

ಡಿ.14ರಂದು ಕೊಡಗಿನ ಪುತ್ತರಿ ಹಬ್ಬ

● ಇಗ್ಗುತ್ತಪ್ಪ ದೇವಾಲಯದಲ್ಲಿ ದಿನ ನಿಗದಿ ● ದೇವಾಲಯ ತಕ್ಕ ಮುಖ್ಯಸ್ಥರು ಸಮ್ಮುಖದಲ್ಲಿ ರಾಶಿ ಫಲ ಪರಿಶೀಲನೆ



ಪಾಡಿ ಇಗ್ಗುತ್ತಪ್ಪ ದೇವಾಲಯದದಲ್ಲಿ ಶುಕ್ರವಾರ ಕೊಡಗಿನ ಪುತ್ತರಿ ಹಬ್ಬ ದಿನ ನಿಗದಿಪಡಿಸಲಾಯಿತು.

ನಾಪೋಕ್ಲು, ನ.29–ಸಮೀಪದ ಕಕ್ಕಬೆ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ಶುಕ್ರವಾರ ಕೊಡಗಿನ ಪುತ್ತರಿ ಹಬ್ಬದ ದಿನವನ್ನು ನಿಗದಿಪಡಿಸಲಾಯಿತು.

ದೇವಾಲಯ ತಕ್ಕ ಮುಖ್ಯಸ್ಥರು ಹಾಗೂ ಭಕ್ತರ ಸಮ್ಮುಖದಲ್ಲಿ ಶಶಿಕುಮಾರ್ ಜ್ಯೋತಿಷ್ಯದ ಪ್ರಕಾರ ರಾಶಿ ಫಲ ಪರಿಶೀಲಿಸಿ ದಿನ ನಿಗದಿ ಮಾಡಿದರು. ಅದರಂತೆ ಪಾಡಿ ಶ್ರೀ ಇಗ್ಗುತಪ್ಪ ದೇವಸ್ಥಾನದಲ್ಲಿ ಡಿ.14ರಂದು ರಾತ್ರಿ ಕರ್ಕಾಟಕ ಲಗ್ನದ ರೋಹಿಣಿ ನಕ್ಷತ್ರದಲ್ಲಿ ರಾತ್ರಿ 7.30ಕ್ಕೆ ಪುತ್ತರಿ ಹಬ್ಬದ ನೆರೆ ಕಟ್ಟುವುದು. 8.30ಕ್ಕೆ ಕದಿರು ಕುಯ್ಯುವುದು, 9.30ಕ್ಕೆ ಊಟೋಪಚಾರ ನಡೆಯಲಿದೆ.

ಸಾರ್ವಜನಿಕರಿಗೆ ಡಿ.14ರಂದು ರಾತ್ರಿ 7.50ಕ್ಕೆ ನೆರೆ ಕಟ್ಟುವುದು, 8.50ಕ್ಕೆ ಕದಿರು ತೆಗೆಯುವುದು ರಾತ್ರಿ 9.50ಕ್ಕೆ ಊಟೋಪಚಾರ ಸಮಯ ನಿಗದಿ ಮಾಡಿಕೊಳ್ಳಲಾಗಿದೆ. ಇದಕ್ಕೂ ಮುನ್ನಾ ದಿನವಾದ ಶುಕ್ರವಾರ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ಕಲ್ಲಾಡ್ಚ ಹಬ್ಬ ನಡೆಯಲಿದೆ ಜ್ಯೋತಿಷ್ಯ ಶಶಿಕುಮಾರ್, ಕಣಿಯರ ನಾಣಯ್ಯ ಕುಟುಂಬದವರು ಜೋತಿಷ್ಯದ ಪ್ರಕಾರ ರಾಶಿ ಫಲ ಪರಿಶೀಲಿಸಿ ದಿನ ನಿಗದಿ ಮಾಡಿದ ಬಳಿಕ ದೇವತಕ್ಕರಾದ ಪರದಂಡ ಸುಬ್ರಮಣಿ ಕಾವೇರಪ್ಪ ಅವರು ದೇವರ ಸನ್ನಿಧಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು. ನಂತರ ದಿನ ನಿಗದಿ ಪಟ್ಟಿಗೆ ವಿಶೇಷ ಪ್ರಾರ್ಥನೆಯ ಮೂಲಕ ಅರ್ಚಕರಿಗೆ ನೀಡಿ ಮುಖ್ಯ ಅರ್ಚಕ ಕುಶಭಟ್ ಮತ್ತು ಜಗದೀಶ್ ಅವರು ಪೂಜೆ ನೆರವೇರಿಸಿ, ತೀರ್ಥ ಪ್ರಸಾದ ನೀಡುವುದರ ಮೂಲಕ ತಕ್ಕ ಮುಖ್ಯಸ್ಥರಿಗೆ ಹಸ್ತಾಂತರಿಸಿದರು.

ಬಳಿಕ ಭಕ್ತ ಜನ ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ದೇವತಕ್ಕರಾದ ಪರದಂಡ ಸುಬ್ರಮಣಿ ಕಾವೇರಪ್ಪ ವೇಳಾಪಟ್ಟಿ ಬಿಡುಗಡೆಗೊಳಿಸಿ ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ತಕ್ಕ ಮುಖ್ಯಸ್ಥರು ಹಾಗೂ ಪ್ರಮುಖರಾದ ಕುಂಡ್ಯೋಳಂಡ ರಮೇಶ್ ಮುದ್ದಯ್ಯ, ಪಾಂಡಂಡ ನರೇಶ್ ಅಂಜಪರವಂಡ ರವಿ ಚೋಮಣಿ, ಕೇಟೋಳಿರ ಸನ್ನಿ ಸೋಮಣ್ಣ, ಕುಂಡಿಯೊಳಂದ ರಮೇಶ್ ಮುದ್ದಯ್ಯ, ಕಲ್ಯಾಟಂಡ ಮುತ್ತಪ್ಪ, ಪ್ರಮುಖರು ಪುತ್ತರಿ ಹಬ್ಬದ ಆಚರಣೆ ಜಿಲ್ಲೆಗೆ ವಿಶಿಷ್ಟವಾಗಿದೆ. ಧಾನ್ಯ ಲಕ್ಷ್ಮಿಯನ್ನು ಮನೆಗೆ ಕರೆತರುವ ಹಬ್ಬವನ್ನು ಎಲ್ಲರೂ ನಿಗದಿ ಪಡಿಸಿದ ಸಮಯದಲ್ಲೇ ಆಚರಿಸುವಂತಾಗಬೇಕು. ದೇಶಕಟ್ಟನ್ನು ಎಲ್ಲರೂ ಪಾಲಿಸಬೇಕು. ಹಿರಿಯರ ಕಾಲದಿಂದಲೂ ಆಚರಿಸಿಕೊಂಡು ಬಂದ ಆಚರಣೆಯನ್ನು ಯಥಾವತ್ತಾಗಿ ಪಾಲಿಸಬೇಕು ಎಂದರು.

ಈ ಸಂದರ್ಭ ಪ್ರಮುಖರಾದ ರಾಜ ಅಪ್ಪಣ್ಣ, ಅಪ್ಪಣ್ಣ, ಕುಟ್ಟಪ್ಪ, ಬಟ್ಟೀರ ಚೋಂದಮ್ಮ, ಕುಟ್ಟಂಜೆಟ್ಟಿರ ಶಾವನ್ ಬೋಪಣ್ಣ, ಮೇದಪ್ಪ, ಕೇಟೋಳಿರ ಗಣಪತಿ, ಮಾರ್ಚಂಡ ಅಯ್ಯಪ್ಪ, ಪರದಂಡ ಸದಾನಾಣಯ್ಯ, ಬಿದ್ದಾಟಂಡ ಬೇಬಿ ಬೆಳ್ಯಪ್ಪ, ಕಣಿಯರ ನಾಣಯ್ಯ, ಪರದಂಡ ಸದಾನಾಣಯ್ಯ, ಕಲ್ಯಾಟಂಡ ರಾಜ ಅಪ್ಪಣ್ಣ, ಮೇರಿಯಂಡ ಅರಸು ಅಚ್ಚಮ್ಮ, ಗಗನ್, ಭುವೇರಿಯಂಡ ಪೂವಣ್ಣ, ಕೊಳುವಂಡ ಕಾರ್ಯಪ್ಪ ಇನ್ನಿತರರು ಉಪಸ್ಥಿತರಿದ್ದರು.

ನಿವೃತ್ತ ಯೋಧರ ಸಮಸ್ಯೆ ತಕ್ಷಣ ಪರಿಹರಿಸಬೇಕು



ಮಡಿಕೇರಿ ಪೊಲೀಸ್ ಸಮುದಾಯ ಭವನದಲ್ಲಿ ನಡೆದ ಅರೆಸೇನಾ ಪಡೆ ನಿವೃತ್ತ ಯೋಧರ ಒಕ್ಕೂಟದ ಮಹಾಸಭೆಯಲ್ಲಿ ಒಕ್ಕೂಟದ ಉಪಾಧ್ಯಕ್ಷ ಪುಲಿಯಂಡ ಚಂಗಪ್ಪ ಮಾತನಾಡಿದರು.

ಮಡಿಕೇರಿ, ನ.29–ರಾಷ್ಟ್ರದ ಗಡಿಭಾಗ ಮತ್ತು ಆಂತರಿಕ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಅರೆಸೇನಾ ಪಡೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಯೋಧರು ಮತ್ತು ಅವರ ಕುಟುಂಬದ ಮೂಲ ಸಮಸ್ಯೆಗಳ ಪರಿಹರಿಸಲು ತಕ್ಷಣ ಸ್ಪಂದಿಸಬೇಕು ಎಂದು ಕೊಡಗು ಜಿಲ್ಲಾ ಅರೆಸೇನಾ ಪಡೆ ನಿವೃತ್ತ ಯೋಧರ ಒಕ್ಕೂಟ ಒತ್ತಾಯಿಸಿದೆ.

ನಗರದ ಪೊಲೀಸ್ ಸಮುದಾಯ ಭವನದ ಮೈತ್ರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಅರೆಸೇನಾ ಪಡೆ ನಿವೃತ್ತ ಯೋಧರು ಒಕ್ಕೂಟದ ಮಹಾಸಭೆಯಲ್ಲಿ ಒಕ್ಕೂಟದ ಉಪಾಧ್ಯಕ್ಷ ಪುಲಿಯಂಡ ಚಂಗಪ್ಪ ಮಾತನಾಡಿ, ಬಿಎಸ್ಎಫ್, ಸಿಆರ್‌ಪಿಎಫ್, ಸಿಐಎಸ್ಎಫ್ ಮತ್ತು ಎಸ್‌ಎಸ್‌ಬಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಯೋಧರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರ ಸಮಸ್ಯೆಗಳನ್ನು ಕೇಂದ್ರ ಸರ್ಕಾರದ ಮಟ್ಟದಲ್ಲಿ ನಿವಾರಿಸಬೇಕು. ಆ ನಿಟ್ಟಿನಲ್ಲಿ ಪ್ರಯತ್ನಶೀಲರಾಗಿರುವುದಾಗಿ ತಿಳಿಸಿದರು.

ರಾಜ್ಯದ ಏಕೈಕ ಸ್ವಂತ ಕಟ್ಟಡ: ಕೊಡಗು ಜಿಲ್ಲೆಯಲ್ಲಿ ಅರೆಸೇನಾ ಪಡೆಗಳ ಒಕ್ಕೂಟ ಕಳೆದ ಒಂದು ದಶಕಗಳಿಂದ ಕಾರ್ಯನಿರ್ವಹಿಸಿಕೊಂಡು ಬಂದಿದ್ದರೂ, ಆರ್ಥಿಕ ಶಕ್ತಿ ಹೊಂದಿಲ್ಲವೆಂದು ತಿಳಿಸಿದರು.

ಪ್ರಸ್ತುತ ಇಡೀ ರಾಜ್ಯದಲ್ಲೇ ಹಾಸನದಲ್ಲಿ ಅರೆಸೇನಾ ಪಡೆಗಳ ಸಂಘಟನೆ ತನ್ನದೇ ಆದ ಸ್ವಂತ ಕಟ್ಟಡ ಹೊಂದಿದೆ. ಈ ಕಟ್ಟಡ ನಿರ್ಮಾಣಕ್ಕೆ ಕೊಡಗಿನ ಅರೆಸೇನಾ ಪಡೆಗಳ ಒಕ್ಕೂಟ ತನ್ನದೇ ಸಣ್ಣ ಪ್ರಮಾಣದ ಆರ್ಥಿಕ ನೆರವು ಒದಗಿಸಿದೆ. ಮುಂಬರುವ ದಿನಗಳಲ್ಲಿ ಜಿಲ್ಲೆಯ ಅರೆಸೇನಾ ಪಡೆ ಒಕ್ಕೂಟ ತನ್ನ ಕಾಲ ಮೇಲೆ ತಾನು ನಿಲ್ಲುವ ಹಂತದಲ್ಲಿ ಹೊರ ಜಿಲ್ಲೆ ಅರೆಸೇನಾ ಪಡೆ ಸಂಘಟನೆಗಳ ನೆರವು ಬೇಕಾಗುತ್ತದೆ ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಕ್ಯಾಂಟೀನ್ ಸೌಲಭ್ಯ ಅಗತ್ಯ: ನಿವೃತ್ತ ಯೋಧರು ಮತ್ತು ಅವರ ಕುಟುಂಬಸ್ಥರಿಗೆ ಅಗತ್ಯ ಕ್ಯಾಂಟೀನ್ ಸೌಲಭ್ಯ ದೊರಕಬೇಕು. ಪ್ರಸ್ತುತ ಪೊಲೀಸ್ ಇಲಾಖೆ ಕಾರ್ಡ್ ಪಡೆದುಕೊಂಡವರಿಗೆ ಪೊಲೀಸ್ ಕ್ಯಾಂಟೀನ್‌ನ ಕೆಲ ಸವಲತ್ತು ದೊರಕುತ್ತಿರುವುದಾಗಿ ತಿಳಿಸಿದರು.

ಇದೇ ಸಂದರ್ಭ ಮೃತ ಒಕ್ಕೂಟದ ಸದಸ್ಯರಿಗೆ ಮೌನಾಚರಣೆ ಮೂಲಕ ಸಂತಾಪ ಸೂಚಿಸಲಾಯಿತು. ಒಕ್ಕೂಟದ ಜಿಲ್ಲಾಧ್ಯಕ್ಷ ಎಂ.ಜಿ.ಸತೀಶ್, ಸಿಆರ್‌ಪಿಎಫ್ ಡೆಪ್ಯೂಟಿ ಕಮಾಂಡೆಂಟ್ ಮಂಜುನಾಥ್, ಉದ್ಯಮಿ ಗೋಪಾಲ್, ಸಿಆರ್‌ಪಿಎಫ್ ಅಧಿಕಾರಿ ಸುರೇಶ್, ಒಕ್ಕೂಟದ ಪ್ರಧಾನ ಕಾರ್ಯದರ್ಶಿ ರಾಜಶೇಖರ್, ಸಂಚಾಲಕ ಎನ್.ಎಂ. ಭೀಮಯ್ಯ, ಕಾರ್ಯದರ್ಶಿ ಬಿ.ಎಂ. ರವೀಂದ್ರ, ಮಡಿಕೇರಿ ತಾಲೂಕು ಅಧ್ಯಕ್ಷ ಕುದುಪಜೆ ಆನಂದ, ನಿವೃತ್ತ ಯೋಧರು ಮತ್ತು ಅವರ ಕುಟುಂಬಸ್ಥರು ಹಾಜರಿದ್ದರು.

ಪತ್ರಕರ್ತರ ಕ್ರಿಕೆಟ್ ತಂಡಗಳ ಆಟಗಾರರ ಆಯ್ಕೆ

ಗೋಣಿಕೊಪ್ಪ: ಅತ್ತೂರು ಪಾಲ್ಮ್ ವ್ಯಾಲಿ ರೆಸಾರ್ಟ್‌ನಲ್ಲಿ ನಡೆದ ಸಭೆಯಲ್ಲಿ ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಕ್ರಿಕೆಟ್ ಕಲರವಕ್ಕೆ 4 ತಂಡಗಳಿಗೆ 60 ಆಟಗಾರರನ್ನು ಆಯ್ಕೆ ಮಾಡಲಾಯಿತು.

ಮಚ್ಚಮಾಡ ಅನೀಶ್ ಮಾದಪ್ಪ ಮಾಲೀಕತ್ವದ ಸಣ್ಣುವಂಡ ಕಿಶೋರ್ ನಾಚಪ್ಪ, ಮುಸ್ತಾಪಾ ನಾಯಕತ್ವದ ತಾಳೇರಿ ಮೂಂದ್ ನಾಡ್ ಮೀಡಿಯಾ, ಚಿಮ್ಮಣಮಾಡ ದರ್ಶನ್ ದೇವಯ್ಯ, ಎನ್.ಎನ್.ದಿನೇಶ್ ಹಾಗೂ ಆದರ್ಶ್ ನಾಯಕತ್ವದ ಕುತ್ನಾಡ್ ಮೀಡಿಯಾ ವಾರಿಯರ್ಸ್, ಪುತ್ತು ಪ್ರದೀಪ್ ನಾಯಕತ್ವದ ಸಿಂಗಿ ಸತೀಶ್, ಮಂಡೇಡ ಅಶೋಕ್ ನಾಯಕತ್ವದ ಮರೆನಾಡ್ ಪ್ರೆಸ್ ಟೀಂ, ಆನಂದ್‌ಕುಮಾರ್ ಮಾಲೀಕತ್ವದ ವಿ.ವಿ.ಅರುಣ್ ಕುಮಾರ್, ಜಯಪ್ರಕಾಶ್ ನಾಯಕತ್ವದ ಅಂಜಿಗೇರಿನಾಡ್ ಮೀಡಿಯಾ ಕಿಂಗ್ಸ್ ತಂಡಗಳಿಗೆ ಆಯ್ಕೆ ನಡೆಯಿತು.



ಅತ್ತೂರು ಪಾಲ್ಮ್ ವ್ಯಾಲಿ ರೆಸಾರ್ಟ್‌ನಲ್ಲಿ ಪತ್ರಕರ್ತರ ಕ್ರಿಕೆಟ್ ಆಟಗಾರರ ಪಟ್ಟಿ ಬಿಡುಗಡೆ.

60 ಆಟಗಾರರು ಬಿಡ್ಡಿಂಗ್‌ನಲ್ಲಿ ಭಾಗವಹಿಸಿದ್ದರು. ಜ.5ರಂದು ಹಾತೂರು ಸರ್ಕಾರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಟೂರ್ನಿ ನಡೆಯುವ ಬಗ್ಗೆ ಘೋಷಿಸಲಾಯಿತು. ಪಾಲ್ಮ್ ವ್ಯಾಲಿ ರೆಸಾರ್ಟ್ ಉದ್ಯಮಿ ವಿಖ್ಯಾತ್ ಮಾಚಯ್ಯ ಆಟಗಾರರ ಪಟ್ಟಿ ಬಿಡುಗಡೆಗೊಳಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ, ಜಿಲ್ಲಾಧ್ಯಕ್ಷೆ ಬಿ.ಆರ್.ಸವಿತಾರೈ, ಗೋಣಿಕೊಪ್ಪ ತಾಲೂಕು ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ ವಿರಾಜಪೇಟೆ ತಾಲೂಕು ಅಧ್ಯಕ್ಷ ರೆಜಿತ್ ಕುಮಾರ್ ಗುಹ್ಯ, ಚಿಮ್ಮಣಮಾಡ ದರ್ಶನ್ ದೇವಯ್ಯ, ಸಿಂಗಿ ಸತೀಶ್, ಟೂರ್ನಿ ಸಂಚಾಲಕ ವಿ.ವಿ.ಅರುಣ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಎನ್.ಎನ್.ದಿನೇಶ್, ಕಾರ್ಯದರ್ಶಿ ಮಂಡೇಡ ಅಶೋಕ್, ಮನೋಜ್ ಕುಮಾರ್, ಅಣ್ಣೀರ ಹರೀಶ್ ಮಾದಪ್ಪ ಇದ್ದರು.

ವಧುವಿನ ಚಿನ್ನಾಭರಣ ಕಳವು

ಕುಶಾಲನಗರ: ವಧುವಿಗೆ ತೊಡಿಸಲೆಂದು ಇಟ್ಟಿದ್ದ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಕಳ್ಳತನವಾಗಿರುವ ಘಟನೆ ಪಟ್ಟಣದ ರೈತ ಭವನದಲ್ಲಿ ನಡೆದಿದೆ.

ಚಿನ್ನಾಭರಣವಿದ್ದ ಬ್ಯಾಗ್ ಅನ್ನು ವಧುವಿನ ಕೊಠಡಿಯಲ್ಲಿ ಇರಿಸಿ ಕೆಲ ಸಮಯ ಹೊರ ತೆರಳಿದ್ದ ವಧುವಿನ ತಾಯಿ ಹಿಂದಿರುಗಿ ಬಂದು ನೋಡಿದಾಗ ಬ್ಯಾಗ್‌ನಲ್ಲಿದ್ದ ಚಿನ್ನದ ಕಡಗ, ಒಂದು ಜೊತೆ ಓಲೆ, ನೆಕ್ಲೆಸ್ ಹಾಗೂ 5000 ರೂ. ನಗದು ಕಾಣೆಯಾಗಿದೆ. ಈ ಸಂಬಂಧ ವಧುವಿನ ತಾಯಿ ನಳಿನಿ ಕುಶಾಲನಗರ ಠಾಣೆಗೆ ದೂರು ನೀಡಿದ್ದಾರೆ.

ವಿದ್ಯಾಧರ್ ಗಡಿಪಾರಿಗೆ ಕರ್ನಾಟಕ ಸಂಘ ಒತ್ತಾಯ

ವಿರಾಜಪೇಟೆ: ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಗೂ ಜನರಲ್ ಕೆ.ಎಸ್. ತಿಮ್ಮಯ್ಯ ಅವರ ಬಗ್ಗೆ ಅವಹೇಳನ ಮಾಡಿದ ವಕೀಲ ಕೆಆರ್.ವಿದ್ಯಾಧರ್‌ನನ್ನು ಜಿಲ್ಲೆಯಿಂದ ಗಡಿಪಾರು ಮಾಡುವಂತೆ ವಿರಾಜಪೇಟೆ ಕರ್ನಾಟಕ ಸಂಘ ಒತ್ತಾಯಿಸಿದೆ.

ಸಂಘದ ಕಚೇರಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಭಾರತೀಯ ಸೇನೆಯ ವೀರ ಸೇನಾನಿಗಳಾದ ಕೆ.ಎಂ.ಕಾರ್ಯಪ್ಪ ಹಾಗೂ ಕೆ.ಎಸ್.ತಿಮ್ಮಯ್ಯ ಅವರ ಬಗ್ಗೆ ವಕೀಲ ವಿದ್ಯಾಧರ್ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡಿದ್ದಾರೆ. ಇದು ಅತ್ಯಂತ ಖಂಡನೀಯ ಎಂದು ಸಂಘದ ಪದಾಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಸಂಘದ ಅಧ್ಯಕ್ಷ ಮಾಳೇಟಿರ ಎಂ.ಬೆಲ್ಲುಬೋಪಯ್ಯ, ಉಪಾಧ್ಯಕ್ಷ ಚೇನಂಡ ಈ.ಗಿರೀಶ್ ಪೂಣಚ್ಚ ಕಾರ್ಯದರ್ಶಿ ಮುಂಡ್ಯೋಳಂಡ ಕುಸುಮ ಸೋಮಣ್ಣ, ಖಜಾಂಚಿ ಕೋಟೆರ ಯು.ಗಣೇಶ್ ತಮ್ಮಯ್ಯ, ನಿರ್ದೇಶಕರಾದ ಸಿ.ಪಿ.ಕಾವೇರಪ್ಪ, ಸಿ.ಎಂ.ಸುರೇಶ್ ನಾಣಯ್ಯ, ಪಿ.ಎಸ್.ನಂದ, ಎಂ.ರಾಣು ಮಂದಣ್ಣ, ಬಿ.ಎಂ.ಸುರೇಶ್, ಎಂ.ಜಿ.ಪೂಣಚ್ಚ, ಬಿ.ಗಣೇಶ್ ಬಿದ್ದಪ್ಪ, ಕೆ.ಎಂ.ಮೊಣ್ಣಪ್ಪ ಗಿಣಿ, ಕಚೇರಿ ಕಾರ್ಯದರ್ಶಿ ರಾಧಾ ಉಪಸ್ಥಿತರಿದ್ದರು.

ವಿರಾಜಪೇಟೆಯಲ್ಲಿ ಕೃಷಿ ಯಂತ್ರೋಪಕರಣ ವಿತರಣೆ

ವಿರಾಜಪೇಟೆ, ನ.29–ಕೃಷಿ ಯಾಂತ್ರೀಕರಣ ಯೋಜನೆಯಡಿ ಸಹಾಯಧನದಲ್ಲಿ ಕೃಷಿ ಉಪಕರಣಗಳನ್ನು ಶಾಸಕ ಎ.ಎಸ್. ಪೊನ್ನಣ್ಣ ವಿತರಿಸಿದರು.

ಬಳಿಕ ಮಾತನಾಡಿದ ಶಾಸಕರು, ಕೃಷಿ ಇಲಾಖೆ ವತಿಯಿಂದ ರೈತರಿಗೆ ಸಹಾಯಧನದಲ್ಲಿ ಕೃಷಿ ಯಂತ್ರೋಪಕರಣ ಪಡೆಯಲು ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದೆ. ಕೃಷಿಗೆ ಅಗತ್ಯವಾಗಿರುವ ಉಪಕರಣಗಳನ್ನು ಸಹಾಯಧನದಲ್ಲಿ ಪಡೆದುಕೊಳ್ಳುವುದು, ಯಂತ್ರೋಪಕರಣ ಬಳಸುವುದರಿಂದ ರೈತರಿಗೆ ಕಡಿಮೆ ವೆಚ್ಚದಲ್ಲಿ ಕೃಷಿ ಚಟುವಟಿಕೆ ಕೈಗೊಳ್ಳಲು ಹಾಗೂ ಕೂಲಿ ಕಾರ್ಮಿಕರ ಅಭಾವ ನೀಗಿಸುವಲ್ಲಿ ಸಹಕಾರವಾಗಲಿದೆ ಎಂದು ತಿಳಿಸಿದರು.

ಇದೇ ವೇಳೆ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಪವರ್ ಟಿಲ್ಲರ್ 4, 5 ಹೆಚ್‌ಪಿ ಡೀಸೆಲ್ ಎಂಜಿನ್ 10, ಕಳೆಕೊಚ್ಚುವ ಯಂತ್ರ 3, ಎಚ್‌ಟಿಪಿ ಸಿಂಪರಣಾ ಯಂತ್ರ 2 ಹಾಗೂ 15 ಎಚ್‌ಡಿಪಿಇ ಪೈಪ್‌ಗಳನ್ನು ವಿತರಿಸಲಾಯಿತು. ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ಉಪ ನಿರ್ದೇಶಕ ಡಾ.ಡಿ.ಎಸ್.ಸೋಮಶೇಖರ್, ವಿರಾಜಪೇಟೆ ಸಹಾಯಕ ಕೃಷಿ ನಿರ್ದೇಶಕಿ ಆರ್.ಗೌರಿ, ವಿರಾಜಪೇಟೆ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಪಿ.ಲವಿನ್ ಮಾದಪ್ಪ, ಬಾಳೆಲೆ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಎ.ಪಿ.ಮೀರಾ, ಎಚ್.ಬಿ.ಅಶ್ವಿನ್‌ಕುಮಾರ್ ಮತ್ತು ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲೂಕಿನ ಕೃಷಿ ಇಲಾಖೆ ಸಿಬ್ಬಂದಿ ಹಾಜರಿದ್ದರು.



ವಿರಾಜಪೇಟೆಯಲ್ಲಿ ರೈತರಿಗೆ ಶಾಸಕ ಎ.ಎಸ್.ಪೊನ್ನಣ್ಣ ಕೃಷಿ ಉಪಕರಣ ವಿತರಿಸಿದರು.

ಗಾಂಜಾ ಗಿಡ ಬೆಳೆದಿದ್ದವನ ಬಂಧನ



ಮಡಿಕೇರಿ, ನ.29–ಮನೆ ಕಾಂಪೌಂಡ್ ಒಳಗೆ ಗಾಂಜಾ ಗಿಡ ಬೆಳೆದಿದ್ದ ಆರೋಪಿಯನ್ನು ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕಾರ್ಮಾಡು ಗ್ರಾಮದ ಮುಕ್ಕಾಟಿಕೊಪ್ಪಲು ನಿವಾಸಿ ವಿ.ಬಿ.ಮುತ್ತಣ್ಣ(68) ಬಂಧಿತ ಆರೋಪಿ. ಐದೂವರೆ ಕೆಜಿ ಹಸಿ ಗಾಂಜಾ ವಶಕ್ಕೆ ಪಡೆಯಲಾಗಿದೆ. ವಿರಾಜಪೇಟೆ ಡಿವೈಎಸ್‌ಪಿ ಆರ್.ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಗ್ರಾಮಾಂತರ ಠಾಣಾಧಿಕಾರಿ ಬಿ.ಎಸ್. ವಾಣಿಶ್ರೀ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ.

ಹಾಡಹಗಲೇ ಜಮೀನುಗಳಲ್ಲಿ ಒಂಟಿ ಸಲಗ ಓಡಾಟ



ಬೇಗೂರಿನ ಜಮೀನಿನಲ್ಲಿ ಹಾಡಹಗಲೇ ಒಂಟಿ ಸಲಗ ಓಡಾಡುತ್ತಿರುವುದು.

ಬೇಗೂರು, ನ.29–ಗುಂಡ್ಲುಪೇಟೆ ತಾಲೂಕಿನ ಬೇಗೂರು ಹಾಗೂ ಮಂಚಹಳ್ಳಿ ಗ್ರಾಮದ ಜಮೀನುಗಳಲ್ಲಿ ಹಾಡಹಗಲೇ ಒಂಟಿ ಸಲಗ ಓಡಾಟ ನಡೆಸಿ ಫಸಲು ನಾಶಪಡಿಸುತ್ತಿರುವುದರಿಂದ ರೈತರು ಜಮೀನಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ.

ಒಂಟಿ ಸಲಗ ಸಿಕ್ಕ ಸಿಕ್ಕ ಜಮೀನುಗಳಲ್ಲಿ ಫಸಲುಗಳನ್ನು ತಿಂದು, ತುಳಿದು ನಾಶ ಪಡಿಸುತ್ತಿದೆ. ಇದರಿಂದ ರೈತರು ಹಗಲಿನಲ್ಲೇ ಜಮೀನಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ನೇನೆಕಟ್ಟೆ, ಶೆಟ್ಟಹಳ್ಳಿ, ಮಂಚಹಳ್ಳಿ, ಹಸಗೂಲಿ ಗ್ರಾಮದ ಆಸುಪಾಸಿನಲ್ಲೇ ಆನೆ ಓಡಾಡುತ್ತಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಬೇಗೂರು ಗ್ರಾಮದ ಬ್ರಹ್ಮಪ್ಪ, ಕೆಂಪರಾಜು, ರಮೇಶ್ ಅವರ ಜಮೀನಿನಲ್ಲಿ ಶುಕ್ರವಾರ ಬೆಳಗ್ಗೆ 7 ಗಂಟೆಗೆ ಕಾಣಿಸಿಕೊಂಡ ಕಾಡಾನೆ ಬೆಳೆಗಳನ್ನು ನಾಶಪಡಿಸಿದೆ. ನಂತರ ಬೇಗೂರಿನಿಂದ ತಗ್ಗಲೂರು ಮಾರ್ಗವಾಗಿ ಜಮೀನಿನಲ್ಲಿ ಸಂಚರಿಸಿದೆ. ಈ ವೇಳೆ ಬೇಗೂರು ಠಾಣೆ ಪೊಲೀಸರು ಹಾಗೂ ಅರಣ್ಯ ಸಿಬ್ಬಂದಿ ಪಟಾಕಿ ಸಿಡಿಸಿ ಮಂಚಹಳ್ಳಿ ಮಾರ್ಗವಾಗಿ ಆನೆಯನ್ನು ಓಂಕಾರ ಅರಣ್ಯ ವಲಯಕ್ಕೆ ಸೇರಿಸಿದ್ದಾರೆ.

ಬೆಂಡರವಾಡಿಯಲ್ಲಿ ಮನೆಗಳ ಸರಣಿ ಕಳ್ಳತನ

ಚಾಮರಾಜನಗರ: ತಾಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಮನೆಗಳನ್ನೇ ಗುರಿಯಾಗಿಸಿಕೊಂಡು ಬೀಗ ಮುರಿದು ಸರಣಿ ಕಳ್ಳತನಕ್ಕೆ ಗುರುವಾರ ರಾತ್ರಿ ಯತ್ನಿಸಲಾಗಿದೆ.

ಗ್ರಾಮದ ಶಿವಣ್ಣ, ಜಯರಾಮ ನಾಯಕ, ಭಾಗ್ಯಮ್ಮ, ಚಿನ್ನಮ್ಮ ಅವರ ಮನೆಗಳ ಬೀಗ ಮುರಿದಿದ್ದು, ಶಿವಣ್ಣ ಅವರ ನಿವಾಸದಲ್ಲಿ ಮಾತ್ರ 15 ಸಾವಿರ ಬೆಲೆಬಾಳುವ ಬೆಳ್ಳಿ ವಿಗ್ರಹ ಕಳುವಾಗಿದೆ. ಉಳಿದ 3 ಮನೆಗಳಲ್ಲಿ ಕಳ್ಳರಿಗೆ ದೋಚಲು ಬೆಲೆಬಾಳುವ ವಸ್ತುಗಳು ಸಿಕ್ಕಿಲ್ಲ.

ಮನೆಗಳಲ್ಲಿ ಯಾರೂ ಇಲ್ಲದಿರುವಾಗ ಕಳ್ಳತನ ಯತ್ನಿಸುರುವುದರಿಂದ ಪೊಲೀಸರು ಕಳ್ಳರ ಪತ್ತೆಗೆ ಇಳಿದಿದ್ದಾರೆ. ಡಿವೈಎಸ್ಪಿ ಲಕ್ಷ್ಮಯ್ಯ, ಇನ್ಸ್‌ಪೆಕ್ಟರ್ ಚಿಕ್ಕರಾಜಶೆಟ್ಟಿ, ಅಪರಾಧ ವಿಭಾಗದ ಎಸ್ಸೈ ಲೋಕೇಶ್ ಹಾಗೂ ಶ್ವಾನದಳ, ಬೆರಳಚ್ಚು ತಂಡದೊಂದಿಗೆ ಶುಕ್ರವಾರ ಬೆಳಗ್ಗೆ ಗ್ರಾಮಕ್ಕೆ ಆಗಮಿಸಿ, ಪರಿಶೀಲಿಸಿದರು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮದಲ್ಲಿ ಇತ್ತೀಚೆಗೆ ಮಹದೇವಸ್ವಾಮಿ ತಮ್ಮ ಬೈಕ್ ಅನ್ನು ಮನೆ ಮುಂಭಾಗ ನಿಲ್ಲಿಸಿದ್ದಾಗಲೇ ರಾತ್ರಿ ಹೊತ್ತು ಕಳ್ಳತನ ಮಾಡಲಾಗಿತ್ತು. ಇದರ ಬೆನ್ನಲ್ಲೇ ಸರಣಿ ಮನೆ ಕಳವು ನಡೆದಿರುವುದರಿಂದ ಬೀಟ್ ಪೊಲೀಸರು ಹೆಚ್ಚು ನಿಗಾವಹಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸಚಿವ ಸ್ಥಾನಕ್ಕೆ ಗಡಿ ಜಿಲ್ಲೆ ಶಾಸಕರ ಪೈಪೋಟಿ

● ಪುಟ್ಟರಂಗಶೆಟ್ಟಿ, ಕೃಷ್ಣಮೂರ್ತಿ ಮುಂಚೂಣಿ ● ಸಚಿವ ಸಂಪುಟ ಪುನರ್ ರಚನೆ ಸದ್ದು ಹಿನ್ನೆಲೆ

ಸಿದ್ದಲಿಂಗಸ್ವಾಮಿ

ಚಾಮರಾಜನಗರ, ನ.29–ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಕಳೆದ 19 ತಿಂಗಳಿಂದ ರಾಜ್ಯದಲ್ಲಿ ಅಧಿಕಾರದಲ್ಲಿದ್ದು, ಪ್ರಸ್ತುತ ರಾಜ್ಯದಲ್ಲಿ ಸಚಿವ ಸಂಪುಟ ಪುನರ್ ರಚನೆ ಸದ್ದು ಮಾಡಿದೆ. ಹೀಗಾಗಿ ಚಾಮರಾಜನಗರ ಗಡಿ ಜಿಲ್ಲೆಯಲ್ಲಿ ಕಾಂಗ್ರೆಸ್ ಶಾಸಕರಲ್ಲಿ ಸಚಿವ ಸ್ಥಾನಕ್ಕಾಗಿ ಪೈಪೋಟಿ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ.

2023ರ ಮೇ 20ರಂದು ರಾಜ್ಯ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅಧಿಕಾರ ಸ್ವೀಕಾರ ಮಾಡಿದ್ದರು. ಈ ವೇಳೆ ಜಿಲ್ಲೆಯ ಹಿರಿಯ ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಎ.ಆರ್.ಕೃಷ್ಣಮೂರ್ತಿ ಅವರಿಗೆ ಸಚಿವ ಸ್ಥಾನ ದೊರೆಯಲಿದೆ ಎಂಬ ವಿಶ್ವಾಸವಿತ್ತು. ಆದರೆ, ಕೊನೆ ಹಂತದಲ್ಲಿ ಕಾರಣಾಂತರಗಳಿಂದ ಅವರಿಗೆ ಸಚಿವ ಸ್ಥಾನ ಕೈ ತಪ್ಪಿತ್ತು.

ಲೋಕಸಭೆ ಚುನಾವಣೆ ಬಳಿಕ ಮತ್ತೆ ಸಚಿವ ಸಂಪುಟ ಪುನರ್ ರಚನೆಯಾಗಲಿದೆ ಎಂದು ಹೇಳಲಾಗುತ್ತಿತ್ತು. ಈ ನಿಟ್ಟಿನಲ್ಲಿ ಜಿಲ್ಲೆಯ ಕಾಂಗ್ರೆಸ್ ಶಾಸಕರು ಒಗ್ಗಟ್ಟಿನಿಂದ ಶ್ರಮಿಸಿ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಭರ್ಜರಿ ಗೆಲುವು ತಂದು ಕೊಟ್ಟಿದ್ದರು. ಆದರೆ, ರಾಜ್ಯ ರಾಜಕಾರಣದಲ್ಲಿ ಉಂಟಾದ ಕೆಲವೊಂದು ವಿದ್ಯಮಾನಗಳಿಂದ ಸಂಪುಟ ಪುನರ್ ರಚನೆ ಮುಂದೂಡಲಾಗಿತ್ತು. ರಾಜ್ಯದಲ್ಲಿ ಈಗ ಮತ್ತೆ ಸಚಿವ ಸಂಪುಟ ಪುನರ್ ರಚನೆ ವಿಚಾರ ಸದ್ದು ಮಾಡುತ್ತಿದ್ದು, ಸತತ ನಾಲ್ಕನೇ ಬಾರಿಗೆ ಜಯ ಗಳಿಸಿರುವ ಜಿಲ್ಲೆಯ ಹಿರಿಯ ರಾಜಕಾರಣಿ ಸಿ.ಪುಟ್ಟರಂಗಶೆಟ್ಟಿ ಹಿಂದುಳಿದವರ್ಗ ಉಪ್ಪಾರ ಸಮುದಾಯದ ಏಕೈಕ ಶಾಸಕರೂ ಆಗಿದ್ದಾರೆ. ಹೀಗಾಗಿ, ಇವರಿಗೆ ಸಚಿವ ಸ್ಥಾನ ದೊರೆಯುವುದು ಬಹುತೇಕ ಖಚಿತ ಎಂದು ಹೇಳಲಾಗುತ್ತಿದೆ.

ತಮಗಿರುವ ಹಿರಿತನ, ಹಿಂದುಳಿದವರ್ಗಗಳ ಕೋಟಾ ಹಾಗೂ ಜಿಲ್ಲೆಗೆ ದೊರೆಯುವ ಪ್ರಾತಿನಿಧ್ಯತೆ ಅಡಿಯಲ್ಲಿ ಪುಟ್ಟರಂಗಶೆಟ್ಟಿ ಅವರಿಗೆ ಸಚಿವರಾಗುವ ಭಾಗ್ಯ ದೊರೆಯಲಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಸಹ ರಾಜಕೀಯವಾಗಿ ಸಾಕಷ್ಟು ಅನುಭವವುಳ್ಳವರು. ಜಿಲ್ಲೆಯ ಅಭಿವೃದ್ಧಿಗೆ ತಮ್ಮದೆ ಹೊಸ ಯೋಜನೆಗಳನ್ನು ರೂಪಿಸಬಲ್ಲ ಸಾಮರ್ಥ್ಯವುಳ್ಳವರಾಗಿದ್ದಾರೆ. ಅಲ್ಲದೆ, ಇತ್ತೀಚೆಗೆ ಸುದ್ದಿಗಾರರೊಂದಿಗೆ ಮಾತನಾಡಿ ಸಚಿವ ಸ್ಥಾನ ನಿಭಾಯಿಸುವ ಶಕ್ತಿ ನನಗಿದೆ ಎಂದು ಹೇಳಿದ್ದರು. ಹೀಗಾಗಿ ಇವರಿಗೆ ದಲಿತ ಕೋಟಾದಡಿ ಸಚಿವ ಸ್ಥಾನ ದೊರೆಯಬಹುದು ಎಂಬ ಮಾತುಗಳು ಸಹ ಜಿಲ್ಲೆಯಾದ್ಯಂತ ಕೇಳಿ ಬರುತ್ತಿದೆ.

ಗುಂಡ್ಲುಪೇಟೆ ಕ್ಷೇತ್ರದಿಂದ ಪ್ರಥಮ ಚುನಾವಣೆಯಲ್ಲೇ ದಾಖಲೆಯ ಗೆಲುವು ಸಾಧಿಸಿರುವ ಹೆಚ್.ಎಂ.ಗಣೇಶಪ್ರಸಾದ್ ಜಿಲ್ಲೆಯ ಕಾಂಗ್ರೆಸ್‌ನ ಮತ್ತೊಬ್ಬ ಶಾಸಕರಾಗಿದ್ದಾರೆ. ಇವರು ಪ್ರಥಮ ಬಾರಿಗೆ ಶಾಸಕರಾಗಿ ಆಯ್ಕೆ ಆಗಿರುವುದರಿಂದ ಸಚಿವರಾಗುವವರ ಪಟ್ಟಿಯಲ್ಲಿ ಇವರ ಹೆಸರು ಇಲ್ಲವಾಗಿದೆ.



ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಇನ್ನೂ ನಿಖರತೆ ಇಲ್ಲ. ಸಂಪುಟ ಪುನರ್ ರಚನೆಯಾದರೆ, ಈ ಬಾರಿ ನನಗೆ ಅವಕಾಶ ದೊರೆಯುವ ವಿಶ್ವಾಸವಿದೆ. ಕಳೆದ ಬಾರಿಯೇ ಅವಕಾಶ ಸಿಗಬೇಕಿತ್ತು. ಆದರೆ, ಕಾರಣಾಂತರಗಳಿಂದ ಆಗಲಿಲ್ಲ. ಜಿಲ್ಲೆಯಿಂದ ನಾಲ್ಕು ಬಾರಿ ಗೆಲುವು ಸಾಧಿಸಿರುವ ನನಗೆ ಸಂಪುಟದಲ್ಲಿ ಸ್ಥಾನ ದೊರೆಯುವ ವಿಶ್ವಾಸವಿದೆ.

–ಸಿ.ಪುಟ್ಟರಂಗಶೆಟ್ಟಿ, ಶಾಸಕ, ಚಾಮರಾಜನಗರ



ಕಳೆದ 19 ವರ್ಷದ ನಂತರ ನಾನು 3ನೇ ಬಾರಿಗೆ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಪಕ್ಷದ ವರಿಷ್ಠರು ನನಗೆ ಸಂಪುಟದಲ್ಲಿ ಸ್ಥಾನ ಕಲ್ಪಿಸಿದರೆ ಜಿಲ್ಲೆಯ ಅಭಿವೃದ್ಧಿ, ಪಕ್ಷದ ವರಿಷ್ಠರಿಗೆ ಗೌರವ ತರುವಂತೆ ಕೆಲಸ ಮಾಡುತ್ತೇನೆ.

–ಎ.ಆರ್.ಕೃಷ್ಣಮೂರ್ತಿ, ಶಾಸಕ, ಕೊಳ್ಳೇಗಾಲ



ಸಚಿವ ಸಂಪುಟ ಪುನರ್ ರಚನೆ ಆಗುತ್ತಿರುವ ಬಗ್ಗೆ ನಾನು ಹೆಚ್ಚು ತಲೆ ಕೆಡಿಸಿಕೊಂಡಿಲ್ಲ. ಜಿಲ್ಲೆಯಲ್ಲಿ ಹಿರಿಯ ಶಾಸಕರಾಗಿ ಪುಟ್ಟರಂಗಶೆಟ್ಟಿ ಮತ್ತು ಎ.ಆರ್.ಕೃಷ್ಣಮೂರ್ತಿ ಇದ್ದಾರೆ. ಹೀಗಾಗಿ ಈ ಬಾರಿ ಜಿಲ್ಲೆಗೆ ಆದ್ಯತೆ ದೊರೆಯಬಹುದು ಎಂಬ ನಿರೀಕ್ಷೆ ಇದೆ. ನನಗೆ ಸಚಿವನಾಗಬೇಕೆಂದು ಆಸೆ ಇಲ್ಲ. ಕ್ಷೇತ್ರದ ಜನರ ಆಶಯದಂತೆ ಕೆಲಸ ಮಾಡುತ್ತೇನೆ.

–ಹೆಚ್.ಎಂ.ಗಣೇಶಪ್ರಸಾದ್, ಶಾಸಕರು, ಗುಂಡ್ಲುಪೇಟೆ

ಬಾಕಿ ಕೂಲಿ ಹಣ ನೀಡುವಂತೆ ಒತ್ತಾಯಿಸಿ ಪ್ರತಿಭಟನೆ



ಕೆಸ್ತೂರು ಗ್ರಾಪಂ ಕಚೇರಿ ಎದುರು ನರೇಗಾ ಕೂಲಿ ಕಾರ್ಮಿಕರು ಪ್ರತಿಭಟನೆ ನಡೆಸಿದರು

ಯಳಂದೂರು, ನ.29–ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬಾಕಿ ಕೂಲಿ ಹಣ ಹಾಗೂ ನರೇಗಾ ಕೂಲಿ ನೀಡಬೇಕು ಎಂದು ಒತ್ತಾಯಿಸಿ ಕೂಲಿ ಕಾರ್ಮಿಕರು ತಾಲೂಕಿನ ಕೆಸ್ತೂರು ಗ್ರಾಮ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಗ್ರಾಮದ ಕೆಸ್ತೂರು ಮಾರಮ್ಮ ದೇಗುಲ ಮುಂಭಾಗ ಗ್ರಾಪಂ ವತಿಯಿಂದ ಗ್ರಾಮಸಭೆ ಹಮ್ಮಿಕೊಳ್ಳಲಾಗಿತ್ತು. ಆದರೆ, ಸಭೆ ಆರಂಭವಾಗುತ್ತಿದ್ದಂತೆ ಗ್ರಾಪಂ ಕಚೇರಿ ಎದುರು ನೂರಾರು ನರೇಗಾ ಕೂಲಿ ಕಾರ್ಮಿಕರು ಸೇರಿ ಪ್ರತಿಭಟನೆ ನಡೆಸಿದರು.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 86 ಕಾರ್ಮಿಕರು 6 ದಿನ ಕೆರೆ ಕೆಲಸ ಮಾಡಿದ್ದೇವೆ. ಆದರೆ, ಇನ್ನೂ ಕೂಲಿ ಹಣ ಪಾವತಿಸಿಲ್ಲ. ಈ ಬಗ್ಗೆ ಪ್ರಶ್ನಿಸಿದರೆ ಪಿಡಿಒ ಸಮರ್ಪಕವಾಗಿ ಉತ್ತರ ನೀಡುತ್ತಿಲ್ಲ. ಅಲ್ಲದೆ, ಗ್ರಾಮದ ಪರಿಮಿತಿಯೊಳಗೆ ಕೆಲಸ ನೀಡಿ ಎಂದು ಮನವಿ ಮಾಡಿದರೆ ಇದಕ್ಕೂ ಸ್ಪಂದಿಸುತ್ತಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ನರೇಗಾ ಯೋಜನೆ ನಿಯಮ ಪ್ರಕಾರ 5 ಕಿಮೀ ವ್ಯಾಪ್ತಿಯಲ್ಲಿ ಕೆಲಸ ನೀಡಲು ಅವಕಾಶವಿದೆ. ಆದರೆ, ಗ್ರಾಮದಲ್ಲೇ ನರೇಗಾ ಕೆಲಸಕ್ಕೆ ಅವಕಾಶವಿದ್ದರೂ ನಮಗೆ ಕೆಲಸ ನೀಡುತ್ತಿಲ್ಲ. ಬೇರೆಯವರು ಗ್ರಾಮದಲ್ಲಿ ನರೇಗಾ ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕರ ನಡುವೆಯೇ ತಾರತಮ್ಯ ಮಾಡಲಾಗುತ್ತಿದೆ ಎಂದು ಪಿಡಿಒ ಹಾಗೂ ಗ್ರಾಪಂ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು.

ಪ್ರತಿಭಟನಾ ಸ್ಥಳಕ್ಕೆ ನರೇಗಾ ಯೋಜನೆ ಸಹಾಯಕ ನಿರ್ದೇಶಕ ಕೆ.ಎಂ.ರವೀಂದ್ರ ಭೇಟಿ ನೀಡಿ, ಬಾಕಿ ಕೂಲಿ ಹಣ ಪಾವತಿಸಿ, ಇವರಿಗೆ ಗ್ರಾಮ ವ್ಯಾಪ್ತಿಯಲ್ಲೇ ಕೆಲಸ ನೀಡಬೇಕು ಎಂದು ಪಿಡಿಒ ಮಹದೇವಸ್ವಾಮಿಗೆ ಸೂಚಿಸಿದರು. ನಂತರ ಪ್ರತಿಭಟನೆ ಹಿಂಪಡೆಯಲಾಯಿತು. ಬಳಿಕ ಗ್ರಾಮಸಭೆ ನಡೆಯಿತು.

ಇದೇ ವೇಳೆ ಗ್ರಾಪಂ ಅಧ್ಯಕ್ಷೆ ದೊಡ್ಡತಾಯಮ್ಮ, ಸದಸ್ಯರಾದ ಗುರು, ಪ್ರಸಾದ್, ಅಧಿಕಾರಿಗಳು, ನರೇಗಾ ಕೂಲಿ ಕಾರ್ಮಿಕರಾದ ರಾಜೇಶ್, ಶಾರದಮ್ಮ, ದೊಡ್ಡಮ್ಮ, ಶಿವಮ್ಮ, ಮಹದೇವಸ್ವಾಮಿ ಅನೇಕರು ಹಾಜರಿದ್ದರು.

ಪಪಂ ಉಪಚುನಾವಣೆ: ಬಿಜೆಪಿ ಅಭ್ಯರ್ಥಿ ಮಹದೇವ ಗೆಲುವು

ಯಳಂದೂರು: ಪಟ್ಟಣ ಪಂಚಾಯಿತಿ 5ನೇ ವಾರ್ಡ್ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮಹದೇವ ಗೆಲುವು ಸಾಧಿಸುವ ಮೂಲಕ ಪೌರಕಾರ್ಮಿಕರೊಬ್ಬರು ಪ್ರಥಮ ಬಾರಿ ಪಪಂ ಸದಸ್ಯರಾಗಿದ್ದಾರೆ.

5ನೇ ವಾರ್ಡ್‌ನ ಕಾಂಗ್ರೆಸ್ ಸದಸ್ಯ ಕೆ.ಮಲ್ಲಯ್ಯ ಅಕಾಲಿಕ ನಿಧನರಾಗಿದ್ದರು. ಈ ಹಿನ್ನೆಲೆಯಲ್ಲಿ ನ.23ರಂದು ಉಪಚುನಾವಣೆ ನಡೆದಿತ್ತು. ಬಿಜೆಪಿಯಿಂದ ಮಹದೇವ ಹಾಗೂ ಕಾಂಗ್ರೆಸ್‌ನಿಂದ ಶಶಿಧರ್ ಸ್ಪರ್ಧಿಸಿದ್ದರು. ಚಲಾವಣೆಗೊಂಡ 477 ಮತಗಳಲ್ಲಿ ಬಿಜೆಪಿಯ ಮಹದೇವ 248 ಮತ ಹಾಗೂ ಕಾಂಗ್ರೆಸ್‌ನ ಶಶಿಧರ್ 224 ಮತ ಪಡೆದರು.



ಯಳಂದೂರು ಪಪಂ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮಹದೇವ ಜಯ ಸಾಧಿಸಿದರಿಂದ ಕಾರ್ಯಕರ್ತರು ಸಂಭ್ರಮಿಸಿದರು.

ಕಾಂಗ್ರೆಸ್‌ಗೆ ಮುಖಭಂಗ: ಮೃತ ಕೆ.ಮಲ್ಲಯ್ಯ ಅವರ ಮಗ ಶಶಿಧರ್‌ನನ್ನೇ ಕಾಂಗ್ರೆಸ್‌ನಿಂದ ಅಭ್ಯರ್ಥಿ ಮಾಡಲಾಗಿತ್ತು. ಶಾಸಕ ಎ.ಆರ್.ಕೃಷ್ಣಮೂರ್ತಿ ಮನೆ ಮನೆಗಳಿಗೆ ತೆರಳಿ ಮತಯಾಚಿಸಿದ್ದರು. ಅಲ್ಲದೆ, ಪಟ್ಟಣ ಪಂಚಾಯಿತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸೇರಿದಂತೆ 9 ಕಾಂಗ್ರೆಸ್ ಸದಸ್ಯರು ಇದ್ದರು. ಆದರೂ, ಬಿಜೆಪಿ ಅಭ್ಯರ್ಥಿ ಮಹದೇವ ಗೆಲುವು ಸಾಧಿಸಿದ್ದಾರೆ. ಅದರಿಂದ ಮೂಲಕ ಕಾಂಗ್ರೆಸ್‌ಗೆ ಮುಖಭಂಗವಾಗಿದೆ.

ವಿಜಯೋತ್ಸವ: ಇದೇ ವೇಳೆ ಬಿಜೆಪಿ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ, ಸಂಭ್ರಮಿಸಿದರು. ಪಪಂ ಮಾಜಿ ಉಪಾಧ್ಯಕ್ಷೆ ಭೀಮಪ್ಪ, ಬಿಜೆಪಿ ಮಂಡಲ ಅಧ್ಯಕ್ಷ ಎನ್.ಅನಿಲ್, ಕಂದಹಳ್ಳಿ ಮಹೇಶ್, ಸೂರ್ಯನಾರಾಯಣ, ಗುರುಪ್ರಸಾದ್, ರಘು, ಎನ್.ಅಮಿತ್, ಕಿಟ್ಟಿ ಇದ್ದರು.



ಆಟೋ ಚಾಲಕರ ಸಂಘ ಉದ್ಘಾಟನೆ

ಚಾಮರಾಜನಗರದ ಯಡಪುರ ಸಿಮ್ಸ್ ಆಸ್ಪತ್ರೆ ಆವರಣದಲ್ಲಿ ಜೈ ಭೀಮ್ ಆಟೋ ಚಾಲಕರ ಹಾಗೂ ಮಾಲೀಕರ ಸಂಘವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು. ಸಿಮ್ಸ್ ಆಸ್ಪತ್ರೆ ಡೀನ್ ಹೆಚ್.ಜಿ. ಮಂಜುನಾಥ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಕೆ.ಆರ್.ಮಹೇಶ್, ಎಸ್‌ಪಿಕೆ ಗ್ರೂಪ್ ಮಾಲೀಕ ಆರ್.ಉಮೇಶ್, ಸಂಘದ ಅಧ್ಯಕ್ಷ ಪಿ.ಮಹದೇವಸ್ವಾಮಿ ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

MUDA APPROVED SITES FOR SALE
Bogadi Road suvarna layout attached
Sanvi layout (G9 project)
30x40 & 30x43, Per sqft 1900/-
Contact : JK 895114420
9483862050

ಸಿಪಾಯಿ ಪ್ರಾಪರ್ಟೀಸ್
1) ಕಬೀರಾನಂದ ಸಾಗರ ಲೇಔಟ್‌ನಲ್ಲಿ ಈಸ್ಟ್ ಫೇಸ್ 30x40 ಅಳತೆಯ ಸೈಟ್ ಮಾರಾಟಕ್ಕಿದೆ. ಬೆಲೆ 25 ಲಕ್ಷ, ನೆಗೋಷಿಯೆಬಲ್
2) ಇಲವಾಲ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಬಸವಸಾಗರ ಪೇಸ್ 2ನೇ ಹಂತದಲ್ಲಿ 60 ಅಡಿ ರಸ್ತೆಯಲ್ಲಿ 40x60 ಅಳತೆಯ ಸೈಟ್‌ಗಳು ಮಾರಾಟಕ್ಕಿವೆ. ಬೆಲೆ 55 ಲಕ್ಷ ನೆಗೋಷಿಬಲ್
ನಂಜುಂಡಸ್ವಾಮಿ ಹೆಚ್.ಎಸ್. ಮಾಜಿ ಸೈನಿಕರು
9483862050
7829779070

WANTED
Office Supervisor, Telecallers, Marketing Executives
Store-Incharge
English & Kannada Typist
DTP & Graphics Designer
Interview on 1-12-2024 Sunday at 11 am
Please Contact: Ranganath S.A
9606975013

Wanted G/F space
Commercial space Ground floor for distribution point
650 sq. ft. to 800sq. ft.
3km radius from Dattagalli:
PMJ Enterprises
9482026633

PRG Groups & Properties, Mysore
SITE FOR SALE
Site No. 143, measuring 40/60, South Face, at Yadehalli Gram, Srirampura Ring Road.
Mob: 99004-93490



SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಸಸ್ಯಾಹಾರಿ ಹೋಟೆಲ್‌ಗೆ ಅನುಭವವುಳ್ಳ ಅಡುಗೆ ಭಟ್ಟರು (1), ಚಾಟ್ಸ್ (1) ಟೀ ಕಾಫಿ (1) ಮಾಡಲು ಬೇಕಾಗಿದ್ದಾರೆ.
9449857352

MEGA EXCHANGE OFFER ELECTRIC GEYSER
ಹಳೆಯ ಗೀಸರ್ ಕೊಟ್ಟು ಹೊಸ ಗೀಸರ್ ತೆಗೆದುಕೊಳ್ಳಿ
Just 1999/-
Free Home Delivery
7760810381

BECOME A TEACHER
Nursery Teachers Training
SSLC ಪಾಸ್ PUC, Degree ಪಾಸ್ / ಫೇಲ್!
ಟ್ರೈನಿಂಗ್ ನಂತರ ತಕ್ಷಣ ಕೆಲಸ
ಬನ್ನಿ, ಸೇರಿ, ಪಾಸಾಗಿ, ಸಂಪಾದಿಸಿ.
ವಿವರಗಳಿಗೆ
Watsapp/Call 9113980741

ನಿವೇಶನ ಮಾರಾಟಕ್ಕಿದೆ
55x50
ರಿಂಗ್‌ರೋಡ್ ಹತ್ತಿರ ವಿಜಯನಗರ 4ನೇ ಹಂತ, ಮೈಸೂರು. ಸಂಪರ್ಕಿಸಿ:
9019494930

ಸೈಟ್ ಮಾರಾಟಕ್ಕಿದೆ
40x65
ಸಾರ್ವಜನಿಕ ಆಸ್ಪತ್ರೆ ರಸ್ತೆ, ವಿದ್ಯಾರಣ್ಯಪುರಂ, 4ನೇ ಹಂತ ಮೈಸೂರು.
9019494930

We are Hiring!
GRAPHIC DESIGNER SKILLS REQUIRED
(FRESHERS CAN ALSO APPLY)
Location: Mysore
Experience in Kannada Typing
Send your Resume/Portfolio
9482026633
admakersmysore@gmail.com

ಮಾರುತಿ ಟ್ಯೂಬ್ ವೆಲ್ಸ್ (ರಿ)
ಬೋರ್‌ವೆಲ್ ಡ್ರಿಲ್ಲಿಂಗ್ @
ಸಿಟಿ - ₹80/- ಸೈಟ್ ಬೋರ್‌ವೆಲ್
ಗ್ರಾಮೀಣ - ₹85/- ಕೃಷಿ ಬೋರ್‌ವೆಲ್
ಮೈಸೂರು ತಾಲೂಕಿನಲ್ಲಿ ಮಾತ್ರ ಸೀಮಿತ ಅವಧಿ ಆಫರ್
8184000444

ವಧುವರರ ವೇದಿಕೆ
(ಮ್ಯಾರೇಜ್ ಮ್ಯಾಟ್ರಿಮೊನಿ)
ಕರ್ನಾಟಕದಾದ್ಯಂತ ನಮ್ಮ ಸೇವೆ ಲಭ್ಯ ಎಲ್ಲಾ ಜಾತಿಯ 22 ವರ್ಷದಿಂದ 54 ವರ್ಷದವರೆಗೆ ಮೊದಲನೆ ಮ್ಯಾರೇಜ್ ಮತ್ತು ಸೆಕೆಂಡ್ ಮ್ಯಾರೇಜ್ ಹುಡುಗ–ಹುಡುಗಿ ಪ್ರೊಫೈಲ್‌ಗಳು ಬಂದಿವೆ. ಎಲ್ಲರಿಗೂ ಅವಕಾಶವಿದೆ.
9880217548

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
30X40 SITE FOR SALE IN KOUPPLLUR NEAR JP NAGAR RING ROAD
30X40 SITE FOR SALE IN PRAKRUTHI LAYOUT DADADAHALLI.
9880344263

ಶ್ರೀ ಭೈರವೇಶ್ವರ ವಿದ್ಯಾಸಂಸ್ಥೆ ಮಹದೇಶ್ವರ ಬಡಾವಣೆ ರೈಲ್ವೆ ಲೇಔಟ್‌ನಲ್ಲಿರುವ ಈ ಸಂಸ್ಥೆಯು ನ್ಯೂ ಇಂಟರ್‌ನ್ಯಾಷನಲ್ ಸ್ಕೂಲ್ ಆಗಿ ಬದಲಾಗಿದೆ.
9741875540

SITE FOR SALE
At prime Location in Srirampura 2nd Stage Mysore
East facing
50x80 Site for Sale
Price Rs.5500/- Per Sqft
9845564935

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

ಜಮೀನಿನ ತೋಟದ ಕೆಲಸಕ್ಕೆ ಫ್ಯಾಮಿಲಿ ಬೇಕಾಗಿದ್ದಾರೆ. ಮನೆ ಸೌಲಭ್ಯ ಸೇರಿದಂತೆ ಮೂಲಸೌಕರ್ಯಗಳಿದೆ.
ಸ್ಥಳ: ಶ್ರೀರಂಗಪಟ್ಟಣದ ಹತ್ತಿರ
9880185785

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

AFFIDAVIT
I, C.K. Nagaraja Setty, residing at #655, 7th Cross, A 1 Block, Vijayangar 3rd Stage, Mysore-570 030, declare that in my Aadhar Card and Pan card my name has been mentioned as C.K. Nagaraja Setty, but in my passport my name has been mentioned as C.K. Nagaraja. My correct name is C.K. Nagaraja Setty. And my father name mentioned in Aadhar card and Pan card as C.K. Venkanna. But in my passport my father's name has been mentioend as Venkatappa. My father's correct name is C.K. Venkanna. I swearing infront of Notary Usha. D. on 22-11-2024.
Sd/- C.K. Nagaraja Setty

ತಕ್ಷಣ ಬೇಕಾಗಿದ್ದಾರೆ
ಹುಡುಗರ ವಿದ್ಯಾರ್ಥಿನಿಲಯಕ್ಕೆ ಪುರುಷ ವಾರ್ಡನ್ ಮತ್ತು ಹುಡುಗಿಯರ ವಿದ್ಯಾರ್ಥಿನಿಯರ ನಿಲಯಕ್ಕೆ ಮಹಿಳಾ ವಾರ್ಡನ್ ತಕ್ಷಣ ಬೇಕಾಗಿದ್ದಾರೆ ಬ್ರಾಹ್ಮಣರಿಗೆ ಮಾತ್ರ
ವಯೋಮಿತಿ : 25–55 ವರ್ಷದ ಒಳಗೆ
ಆಸಕರು ಸಂಪರ್ಕಿಸಿ: ದಿ.ಅನಾಥಾಲಯ #604, ನಾರಾಯಣಶಾಸ್ತ್ರೀ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು–570004
8152076187

100% TEAK WOOD
FACTORY FINISH DOORS & FRAMES
@ FACTORY DEPOT RATES

10 YEARS WARRANTY
9845426862
9901291267

ಮನೆ ಬಾಡಿಗೆಗೆ/ ಭೋಗ್ಯಕ್ಕೆ ಇದೆ
ಗೌರಿಶಂಕರ ನಗರದಲ್ಲಿ 2ನೇ ಫ್ಲೋರ್‌ನಲ್ಲಿ 2 ಬೆಡ್ ರೂಂ ಮನೆ ಇದೆ
9972605463

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
College ಕ್ಯಾಂಟೀನ್‌ಗೆ ನುರಿತ ಅಡುಗೆ ಭಟ್ಟರು ಬೇಕಾಗಿದ್ದಾರೆ. ವಸತಿ ಸೌಲಭ್ಯ ಒದಗಿಸಲಾಗುವುದು. ಕೂಡಲೇ ಸಂಪರ್ಕಿಸಿ.
6362933519
9353548339

ಸೈಟ್ ಫಾರ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್ 8.7 ಮೀ x 12ಮೀ
(1124 ಚದುರಡಿ)
ಮುಡಾ ಖಾತಾ (ಇ–ಖಾತಾ)
ಚದುರಡಿಗೆ 3500 ರೂ. ಸ್ವಲ್ಪ ನೆಗೋಷಿಯಬಲ್,
ಡೈರೆಕ್ಟ್ ಓನರ್
9342123373

ಕೆಲಸಕ್ಕೆ ಬೇಕಾಗಿದ್ದಾರೆ
ಉನ್ನತ ಕಂಪನಿಗಳಲ್ಲಿ, ಕಾರ್ಖಾನೆಗಳಲ್ಲಿ, ಹೋಟೆಲ್‌ಗಳಲ್ಲಿ, ಆಫೀಸ್‌ಗಳಲ್ಲಿ ಕೆಲಸ ಮಾಡಲು Helper ಗಳು ಸೆಕ್ಯೂರಿಟಿಗಳು, ಹೌಸ್‌ಕೀಪಿಂಗ್. Receptionist, ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ ವಿದ್ಯಾರ್ಹತೆ: 7th 10th PUC. Any Degree. (ಬಿ.ಕಾಂ.) & ITI, Diploma, (ಕುರ್ಗಳ್ಳಿ, ಹೆಬ್ಬಾಳ ಮೇಟಗಳ್ಳಿ, ಹಿನಕಲ್ ವಿಜಯನಗರ 3ನೇ ಹಂತ, ಕುವೆಂಪುನಗರ ಹಾಗೂ ತಾಂಡವಪುರ). ESI, PF ಸೌಲಭ್ಯವಿರುತ್ತದೆ. ಉನ್ನತ ಸಂಬಳ 10000 ರಿಂದ 20000 ರವರೆಗೆ. ಕೋ–ಆಪರೇಟಿವ್ ಸೊಸೈಟಿ ಹಿನಕಲ್ ಇಲ್ಲಿ ಫೀಲ್ಡ್ ಕಲೆಕ್ಟರ್ ಹಾಗೂ ಫೀಲ್ಡ್ ಆಫೀಸರ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ, (ವೇತನ ಮತ್ತು Incentive ಸೌಲಭ್ಯವಿರುತ್ತದೆ.)
9036461347 / 9611208553

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಷಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (*ಸಂಬಳ: 18000rs ಇಂದ 30000rs + ಇನ್ಸೆಂಟಿವ್ಸ್*) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7411273440

ಸಾಲ / LOANS
House/Site Purchase
Mortgage Loan
Construction Loan
(Muda, Corporation & Revenue Property
98807-18980

FOR SALE
East facing Residential Property
50x60 Old house for Sale in Yadavagiri Rs.3 Cr
9731316229

ಮನೆ ಮಾರಾಟಕ್ಕಿದೆ
20x30 ದಕ್ಷಿಣ ದಿಕ್ಕಿನಲ್ಲಿರುವ G/F 1st Floor ಪೂರ್ವಬಾಗಿಲು ಮನೆ ಮಾರಾಟಕ್ಕಿದೆ. ಲಾಲ್‌ಬಹದ್ದೂರು ಶಾಸ್ತ್ರೀನಗರ, BVL ಬಡಾವಣೆ ಹತ್ತಿರ, ಬೆಲೆ : ರೂ.70 ಲಕ್ಷ ನೆಗೋಷಿಯಬಲ್
8970713888

ಬೇಕಾಗಿದ್ದಾರೆ ಸೆಕ್ರೆಟರಿ
ಪದವೀಧರ ಉತ್ತಮ ಪರಿಜ್ಞಾನ ವಿರುವ ಪುರುಷ ಪ್ರತಿಷ್ಠಿತ ಸಂಸ್ಥೆಯ ಮಾಲೀಕರೊಂದಿಗೆ ಚಿಕ್ಕಮಗಳೂರು ಮತ್ತು ಮೈಸೂರಿನಲ್ಲಿ ವ್ಯವಹಾರ ನೋಡಿಕೊಳ್ಳಲು ಅನುಭವವಿರುವ ಕನ್ನಡ ಇಂಗ್ಲಿಷ್ ಟೈಪಿಂಗ್ ಗೊತ್ತಿರುವವರು. ಊಟ ವಸತಿ ಉಚಿತ.
ಸಂಪರ್ಕಿಸಿ: sssfkcci@jirsm.com
9379399998

ವಧು–ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(IInd Marriage also)
Mob: 9343175000

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ MNC ಕಂಪನಿಗಳಿಗೆ 7th, 10th, PUC, ITI, Diploma, Any Degree, MA, MBA, M.Com., BA, B.Com. ಆದವರಿಗೆ Cashier, Billing, Data Entry, Production, Packing, Helper, Telecalling, Admin, HR, Driver ಇತ್ಯಾದಿ ಕೆಲಸಗಳಿಗೆ ಯುವಕ–ಯುವತಿಯರು ಬೇಕಾಗಿದ್ದಾರೆ. ESI, PF ನೊಂದಿಗೆ + OT ಸಂಬಳ: 18,000 ದಿಂದ 46,000. ಸಂಪರ್ಕಿಸಿ:
9901493657, 8951413287

SITE FOR SALE
MUDA approved site (South face & Opp. Park) for sale in Basaveshwar Layout, Near SVEI School, Vijayanagar 4th Stage.
9845452922 & 9845233998

ಪ್ರಮಾಣ ಪತ್ರ
ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಇಗ್ಗಲೂರು ಅಂಚೆ, ನಿಡಗೋಡಿ ಗ್ರಾಮದಲ್ಲಿ ವಾಸವಾಗಿರುವ ಎಸ್.ಬಿ. ಲಕ್ಷ್ಮಿ, ತಿಳಿಸುವುದೇನೆಂದರೆ, ನನ್ನ ಹೆಸರನ್ನು ನನ್ನ ಶಾಲೆ ಮತ್ತು ಇತರೆ ದಾಖಲಾತಿಗಳಲ್ಲಿ ಬಿ. ಚಿಕ್ಕಮ್ಮ ಎಂದು ನಮೂದು ಮಾಡಲಾಗಿರುತ್ತದೆ. ಇನ್ನು ಕೆಲವು ದಾಖಲಾತಿಗಳಲ್ಲಿ ನನ್ನ ಹೆಸರು ಎಸ್.ಬಿ. ಲಕ್ಷ್ಮಿ ಎಂದು ನಮೂದು ಮಾಡಲಾಗಿದೆ. ನಾನು ಪ್ರಮಾಣೀಕರಿಸುವುದೇನೆಂದರೆ, ಬಿ. ಚಿಕ್ಕಮ್ಮ ಮತ್ತು ಎಸ್.ಬಿ. ಲಕ್ಷ್ಮಿ ಈ ಎರಡೂ ಹೆಸರುಗಳು ನನ್ನದೇ ಆಗಿರುತ್ತದೆ ಎಂದು ನೋಟರಿ ವಾಸುದೇವರವರ ಎದುರು ದಿನಾಂಕ 15–12–2024ರಂದು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಎಸ್.ಬಿ. ಲಕ್ಷ್ಮಿ

ಬೈಟೆಕ್ ಕೆಫೆಗೆ
ಪಿಜ್ಜಾ ಬರ್ಗರ್ ಅಶೋಕಪುರಂ ಪೊಲೀಸ್ ಸ್ಟೇಷನ್ ಎದುರು, ಕುವೆಂಪುನಗರ, ಸೂಪರ್‌ವೈಸರ್‌ಗೆ ಆಸಕ್ತಿಯುಳ್ಳ ಯುವತಿಯರು ಬೇಕಾಗಿದ್ದಾರೆ
9448960740

ಸೈಟು ಮಾರಾಟಕ್ಕಿದೆ
30x40, 55 ಲಕ್ಷಗಳು (Negotiable)
ಆದೀಶ್ವರ ಲೇಔಟ್ ವಿಜಯನಗರ 4ನೇ ಹಂತ ಬಾರ್ಡರ್ ಮೈಸೂರು.
ಹರೀಶ್:
9663311557

2 BHK for Rent
1st Floor with Italian kitchen wardrobes & solar
#MUDA Employees Layout, behind YMS Badminton Academy, Kuvempunagar, Mysore.
Mob: 9945655125

SITE FOR SALE
30x40 East face Maple Green Layout
Near R.T. Nagar
Mob: 9740069393

Car Driving Training
(10 years experience teaching driving)
Door to door service available. All RTO work done here. Near Passport Office, Metagalli, Mysore.
Mob: 7022026630

REQUIRED
Receptionist
Dattagalli, Mysuru. Contact:
7760098181, 7090566667

WANTED
A Female Helper to look after a 1 and half years baby from 8 am to 8 pm in Lakshmipuram.
Call: 9632866616

ಸ್ವಚ್ಛತೆ ಸಿಬ್ಬಂದಿ (Scavengers) ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತ ಕೆಲಸ ನಿರ್ವಹಿಸಲು ಸ್ವಚ್ಛತಾ ಸಿಬ್ಬಂದಿ (Scavengers) ಬೇಕಾಗಿದ್ದಾರೆ
ವಯೋಮಿತಿ 35 ವರ್ಷದೊಳಗೆ
ವೇತನ: ರೂ.12000/–,
PF ಹಾಗೂ ESI ಇರುತ್ತದೆ.
6361765969
8792815411

ಬೇಕಾಗಿದ್ದಾರೆ
ದೋಸೆ ಭಟ್ರು ,
ಕೌಂಟರ್ (Food parcel) ,
ವೇಟರ್ (Supplier),
ಅಡುಗೆ ಭಟ್ರು– Kitchen All Rounder (Poori, chapati),
House Keeping 2nd Shift
ಸ್ಥಳ : ಮೈಸೂರು – ಕಾಳಿದಾಸ ರೋಡ್ , ಒಂಟಿಕೊಪ್ಪಲ್ ಹತ್ತಿರ
7899028086

FOR SALE
3000 sq.ft. building on Madhavachar Road, Agrahara.
Mob: 9591408910

SITE FOR SALE
40x60 S/F
SBM Bogadi, Parallel to Main Road.
9900518089, 9342183358

SITE FOR SALE
Ready for registration (Bank loan available).
20x30, 30x40
Srirampura Ring Road, Mysore.
Mob: 9945321020

Godown for Rent
1800 to 2500 sq.ft.
Add: Opp. Navakis School, Mysore-Bannur Main Road.
Mob: 9481941924, 9886520048, 9742072042

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೆ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

ಬೇಕಾಗಿದ್ದಾರೆ
ಸಪ್ತಗಿರಿ ಕಾರ್ಗೋ ಮೂವರ್ಸ್‌ನಲ್ಲಿ ಕೆಲಸ ಮಾಡಲು ಡ್ರೈವರ್ 20,000, ಡೆಲಿವರಿ ಬಾಯ್–14,000 ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ:
9740408488

ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಗಂಡ ಮತ್ತು ಹೆಂಡತಿ ಬೇಕಾಗಿದ್ದಾರೆ.
8296022797

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SBIT TRAVELS
Group Tour
6N7D THAILAND
(Bangkok, Krabi, Phuket)
Air tickets | Hotel | All meals
Sightseeing | Entry tickets | Travel insurance| All tours and transfers
25 Jan | 19,24 Feb| 22 Mar
5, 18 Apr | 3, 20, 26 May 2025
9343524127
(Saraswathipuram, Mysuru)

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನೀಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ ರೂ. 7600 (24 CT)
Mob: 9108146123

GKV CATERING
ನಮ್ಮಲ್ಲಿ ಶುದ್ಧ ಸಸ್ಯಹಾರಿ ಮನೆ ಊಟ ಮತ್ತು ಬೆಳಗಿನ ತಿಂಡಿ ದೊರೆಯುತ್ತದೆ, ಉಚಿತ ಹೋಂ ಡೆಲಿವರಿ ಮಾಡಲಾಗುತ್ತದೆ ತಿಂಗಳಿಗೊಮ್ಮೆ ಹಣ ಪಾವತಿಸಲು ಅವಕಾಶವಿರುತ್ತದೆ (ವಿದ್ಯಾರ್ಥಿಗಳಿಗೆ ಹಾಗೂ ನೌಕರರಿಗೆ ಅನುಕೂಲ ವಾಗುವ ದರದಲ್ಲಿ ಕೊಡಲಾಗುವುದು) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ವ್ಯವಸ್ಥಾಪಕರು
Mob: 6364926039

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ (ಪುರುಷರು) ಹೌಸ್ ಕೀಪಿಂಗ್ (ಮಹಿಳೆಯರು) ಸಂಬಳ: ಪಿಎಫ್, & ಇಎಸ್‌ಐ ವಾರದ ರಜ ಇರುತ್ತದೆ. ಈ ಸೌಲಭ್ಯಗಳು ದೊರೆಯುತ್ತದೆ.
(ಬನ್ನಿಮಂಟಪ ಸುತ್ತಮುತ್ತ)
9945442467
9902420326

ಬೇಕಾಗಿದ್ದಾರೆ
Line Sales ಹೋಗುವ Goods ಗಾಡಿಗೆ ಡ್ರೈವರ್ ಮತ್ತು Helpersಗಳು ಬೇಕಾಗಿದ್ದಾರೆ.
ವೇತನ 15000-20000
ಉಚಿತ ವಸತಿ ವ್ಯವಸ್ಥೆ ಇರುತ್ತದೆ.
0821-2491755

SITE FOR SALE
30X40 N/F
KBL SILICON CITY BASTIPURA, (HOOTAGALLI K.R.S. ROAD)
Rs. 45 LAKH (NEGOTIABLE)
9945632875

ಸೈಟು ಬೇಕಾಗಿದೆ
ವರುಣ, ವಾಜಮಂಗಲ ATME ಕಾಲೇಜು ಬ್ಯಾಂಕರ್ಸ್ ಲೇಔಟ್ ಮಹಾಲಕ್ಷ್ಮೀ ಲೇಔಟ್ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ.ನರಸೀಪುರ ರಸ್ತೆ, ಬನ್ನೂರು ರಸ್ತೆ
9686071750

ತಕ್ಷಣ ಬೇಕಾಗಿದ್ದಾರೆ
ಮದ್ದೂರಿನ ಸುತ್ತಮುತ್ತಲಿರುವ ಹೊಟೆಲ್‌ನಲ್ಲಿ ಕೆಲಸ ಮಾಡಲು, ಹೌಸ್‌ಕೀಪಿಂಗ್, ಸೆಕ್ಯೂರಿಟಿ, ಡಾಟಾ ಎಂಟ್ರಿ ಆಪ್‌ರೇಟರ್, ಡ್ರೈವರ್ ಕೆಲಸಗಳಿಗೆ ಗಂಡಸರು ಹಾಗೂ ಹೆಂಗಸರು ಬೇಕಾಗಿದ್ದಾರೆ
9741515772
7899752014

ನಿವೃತ್ತರಿಗೆ ವಿಶೇಷ ಅವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶ ಬಿಸಿನೆಸ್ ವಲಯ ಹಾಗೂ ಗೃಹಿಣಿಯರಿಗೂ ಅವಕಾಶ, Salary + PF + ESI + ಇನ್ಸೆಂಟೀವ್ಸ್ ಮತ್ತು ವಿದೇಶ ಪ್ರವಾಸದ ಅವಕಾಶ ಬೇಕಾಗುವ ದಾಖಲಾತಿಗಳು:
1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್,
4) ಬ್ಯಾಂಕ್ ಪಾಸ್‌ಬುಕ್ ಮೊದಲನೇ ಪೇಜ್,
5) ವಿದ್ಯಾರ್ಹತೆ ದಾಖಲಾತಿ. ಸ್ಥಳ : ಮಯೂರ ಹೊಯ್ಸಳ ಹೋಟೆಲ್, ಮೆಟ್ರೋಪೋಲ್ ಸರ್ಕಲ್ ಹತ್ತಿರ, ದಿನಾಂಕ: 02–12–2024 (ಊಟದ ವ್ಯವಸ್ಥೆ ಇದೆ.
9663136318
9611198345,9900251230

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ ಮೈಸೂರು ನಗರ
ಸಂಬಳ: 12000/–
6364748485

ಬೇಕಾಗಿದ್ದಾರೆ
ಶ್ರೀ ಛಾಯಾದೇವಿ ಮತ್ತು ದತ್ತು ಕೇಂದ್ರ ಮೈಸೂರು ಇಲ್ಲಿ ಚಿಕ್ಕ–ಚಿಕ್ಕ ಮಕ್ಕಳನ್ನು ಸಂಸ್ಥೆಯಲ್ಲೇ ಉಳಿದುಕೊಂಡು ನೋಡಿಕೊಳ್ಳುವವರು ಕೆಲಸಕ್ಕೆ ಬೇಕಾಗಿದ್ದಾರೆ. ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ.
8431750240
9482163177

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು
1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್,
4) ಬ್ಯಾಂಕ್ ಪಾಸ್‌ಬುಕ್. ಸ್ಥಳ: ಮೌರ್ಯ ರೆಸಿಡೆನ್ಸಿ, ಶ್ರೀ ಹರ್ಷ ರಸ್ತೆ, ಮೈಸೂರು. ದಿ.3–12–24, ಸಮಯ: ಬೆಳಿಗ್ಗೆ 11.00. Followed by Lunch
9448376423,9886883858

ಸದ್ಗುರು ಜ್ಯೋತಿಷ್ಯಂ
ಫೋನಿನ ಮೂಲಕ ಸಂಪರ್ಕಿಸಿ ಮದುವೆ ವಿಳಂಬ, ಹಣಕಾಸಿನ ತೊಂದರೆ, ವ್ಯಾಪಾರದಲ್ಲಿ ನಷ್ಟ, ಸಾಲಭಾದೆ, ಆರೋಗ್ಯ ಸಮಸ್ಯೆ, ಗಂಡ ಹೆಂಡತಿ ಜಗಳ, ಶತ್ರುಗಳ ಕಾಟ, ಇನ್ನೂ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ
6361740552

ಸೂರ್ಯಮಂಡಲ ಯೋಗಶಾಲಾ ಗೋಕುಲಂ, ಮೈಸೂರು
ನಗರ ವಾಸಿಗಳಿಗೆ ಯೋಗ ಅಭ್ಯಾಸ ತರಗತಿಗಳು ಮಧುಮೇಹ, ರಕ್ತದೊತ್ತಡ, ತೂಕ ಇಳಿಕೆ, PCOD/os, ಗರ್ಭಧಾರಣೆ, ಒತ್ತಡ, ನಿರ್ವಹಣೆ, ಪ್ರಾಣಾಯಾಮ ಮತ್ತು ಧ್ಯಾನ, ಸೋಮವಾರದಿಂದ ಶನಿವಾರದವರೆಗೆ. ಹೆಚ್ಚಿನ ಮಾಹಿತಿಗಾಗಿ ಈ ಸಂಖ್ಯೆಗೆ ಕರೆ ಮಾಡಿ.
9538578015

ಮನೆ ಮಾರಾಟಕ್ಕಿದೆ
ಮನೆ ನಂ. 910, 11ನೇ ಕ್ರಾಸ್, ಮಯೂರ ಸರ್ಕಲ್ ಹೆಬ್ಬಾಳ್ 2ನೇ ಹಂತ, (ಬ್ರೋಕರ್ ಇಲ್ಲ)
9880232403

ಕಬಾಬ್ ರಾಮಣ್ಣ ನಂಜುಮಳಿಗೆ ಮೈಸೂರು
ಎಗ್ ರೈಸ್ ಹಾಗೂ ಕಬಾಬ್ ಮಾಡಲು ಅನುಭವವಿರುವ ಹುಡುಗರು ಬೇಕಾಗಿದ್ದಾರೆ.
9481336330

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

1.18 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಹುಣಸನಾಳು ಗ್ರಾಮದಲ್ಲಿ ಶಾಸಕ ದರ್ಶನ್ ಮಾತನಾಡಿದರು.

ನಂಜನಗೂಡು/ಮಲ್ಲುಂಡಿ, ನ.29– ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಜಾರಿ ಜೊತೆಗೆ ಅಭಿವೃದ್ಧಿಗೂ ಆದ್ಯತೆ ನೀಡಿದ್ದು, ತಾಲೂಕಿನ ವಿವಿಧ ಗ್ರಾಮಗಳಲ್ಲಿ 1.18 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಮತ್ತು ಸಮುದಾಯ ಭವನಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ಶುಕ್ರವಾರ ಸಿಂಧುವಳ್ಳಿಪುರ, ಹುಣಸನಾಳು, ಸಿಂಧುವಳ್ಳಿ, ಬಾಗೂರು, ಕಸುವಿನಹಳ್ಳಿ, ದೇಪೇಗೌಡನಪುರ ಗ್ರಾಮಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಮತ್ತು ಸಮುದಾಯ ಭವನ ನಿರ್ಮಾಣ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಹುಣಸನಾಳು ಗ್ರಾಮದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ಬಡವರಿಗೆ ನೆರವಾಗುವ ಜೊತೆಗೆ ಅಭಿವೃದ್ಧಿ ಕಾಮಗಾರಿಗಳಿಗೂ ಆದ್ಯತೆ ನೀಡಿ ಅನುದಾನ ನೀಡಿದ್ದಾರೆ. ಕ್ಷೇತ್ರಕ್ಕೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ 25 ಕೋಟಿಗಳನ್ನು ಬಿಡುಗಡೆಗೊಳಿಸಿದ್ದಾರೆ. 20 ಕೋಟಿ ರೂ.ಗಳನ್ನು ತಾಲೂಕಿನ ವಿವಿಧ ಗ್ರಾಮಗಳ ಸಾಮಾನ್ಯ ಬೀದಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು ಮೀಸಲಿಟ್ಟಿದ್ದೇವೆ. 2.5 ಕೋಟಿ ರೂ.ಗಳನ್ನು ಕನಕ, ಅಂಬೇಡ್ಕರ್, ವಾಲ್ಮೀಕಿ ಸೇರಿದಂತೆ ವಿವಿಧ ಸಮುದಾಯ ಭವನಗಳ ನಿರ್ಮಾಣಕ್ಕೆ ಅನುದಾನ ಮೀಸಲಿಟ್ಟಿದ್ದೇವೆ. ಪ್ರಸ್ತುತ ಪ್ರಾಥಮಿಕ ಹಂತದಲ್ಲಿ 8 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಕಳೆದ 3 ದಿನಗಳ ಹಿಂದೆ ದೇಬೂರು, ದೇವರಸನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ 2.35 ಕೋಟಿ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗಿತ್ತು. ಹುಲ್ಲಹಳ್ಳಿ ಭಾಗದಲ್ಲೂ 1.5 ಕೋಟಿ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇಂದು ತಾಲೂಕಿನ ಸಿಂಧುವಳ್ಳಿಪುರ ಗ್ರಾಮದಲ್ಲಿ 20 ಲಕ್ಷ, ಹುಣಸನಾಳು ಗ್ರಾಮದಲ್ಲಿ 20 ಲಕ್ಷ, ಕಸುವಿನಹಳ್ಳಿ ಗ್ರಾಮದಲ್ಲಿ 30 ಲಕ್ಷ, ಸಿಂಧುವಳ್ಳಿ ಗ್ರಾಮದಲ್ಲಿ 5 ಲಕ್ಷ ವೆಚ್ಚದಲ್ಲಿ ಅಂಬೇಡ್ಕರ್ ಸಮುದಾಯ ಭವನ, 5 ಲಕ್ಷ ವೆಚ್ಚದಲ್ಲಿ ವಿಶ್ವಕರ್ಮ ಸಮುದಾಯ ಭವನ, ತಾಲೂಕಿನ ದೇಪೇಗೌಡನಪುರ, ಹಲ್ಲರೆ ಗ್ರಾಮದಲ್ಲಿ ತಲಾ 5 ಲಕ್ಷ ವೆಚ್ಚದಲ್ಲಿ ಕನಕ ಸಮುದಾಯ ಭವನ, ಹುಸ್ಕೂರು ಮತ್ತು ಅಂಬಳೆ ಗ್ರಾಮದಲ್ಲಿ 5 ಲಕ್ಷ ವೆಚ್ಚದಲ್ಲಿ ಬಸವ ಸಮುದಾಯ ಭವನ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಶೀಘ್ರದಲ್ಲಿ ಕಾಮಗಾರಿ ಮುಕ್ತಾಯಗೊಂಡು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದರು.

ಸಮುದಾಯ ಭವನಗಳಿಗೆ ಪ್ರಾಥಮಿಕ ಹಂತದಲ್ಲಿ ತಲಾ 5 ಲಕ್ಷ ಅನುದಾನ ನೀಡಲಾಗಿದ್ದು, ಶೀಘ್ರದಲ್ಲೇ ಶಾಸಕರ ಪ್ರದೇಶ ಅಭಿವೃದ್ಧಿ ಅನುದಾನದ ಅಡಿ ಹೆಚ್ಚಿನ ಅನುದಾನ ನೀಡಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. ಅದಕ್ಕಾಗಿ ಸಾರ್ವಜನಿಕರು ನನಗೆ ಸ್ವಲ್ಪ ಸಮಯ ಹಾಗೂ ಕಾಲಾವಕಾಶ ನೀಡಬೇಕು ಎಂದರು.

ಇದೇ ವೇಳೆ ಮುಖಂಡ ಬಸವಣ್ಣ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಮಾಜಿ ಶಾಸಕ ಕೇಶವಮೂರ್ತಿ, ನಂ.ಗೂಡು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ಸಿಂಧುವಳ್ಳಿ ಗ್ರಾಪಂ ಅಧ್ಯಕ್ಷ ಹೊಣಕಾರ ನಾಯಕ, ಕಸುವಿನಹಳ್ಳಿ ಗ್ರಾಪಂ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ವನಜಾಕ್ಷಮ್ಮ, ಸದಸ್ಯ ಮಲ್ಲೇಶ್, ಹಲ್ಲರೆ ಗ್ರಾಪಂ ಅಧ್ಯಕ್ಷೆ ದೇವಮ್ಮ, ಉಪಾಧ್ಯಕ್ಷ ರೆಹಮತ್ ಉಲ್ಲಾ, ಪಿಎಸಿಎಸ್ ಅಧ್ಯಕ್ಷ ಚಿನ್ನಸ್ವಾಮಿ, ಇಂಜಿನಿಯರ್ ಪುರುಷೋತ್ತಮ್, ಮುಖಂಡರಾದ ಕಳಲೆ ರಾಜೇಶ್, ಉಪ್ಪಿನಹಳ್ಳಿ ಶಿವಣ್ಣ, ಎನ್.ಎಸ್. ಮಾದಪ್ಪ, ಕೂಡ್ಲಾಪುರ ರಾಜು, ಕೆ.ಎಂ.ಬಸವರಾಜು, ಸಿದ್ದರಾಜು, ಕೆ.ಎನ್.ಶಿವಮೂರ್ತಿ, ಬಸವಣ್ಣ, ಶಿವಪ್ಪ ದೇವರು, ರಂಗಸ್ವಾಮಿ ಸೇರಿದಂತೆ ಇತರರಿದ್ದರು.

ಧರ್ಮದ ಹೆಸರಲ್ಲಿ ರಾಜಕೀಯ ಮಾಡಬಾರದು

ಸುಡುಗಾಡಮ್ಮ, ವೀರಭದ್ರೇಶ್ವರ ದೇವಾಲಯ ಉದ್ಘಾಟಿಸಿದ ಡಾ.ಯತೀಂದ್ರ



ಸುಡುಗಾಡಮ್ಮ, ವೀರಭದ್ರೇಶ್ವರ ದೇವಾಲಯವನ್ನು ಎಂಎಲ್‌ಸಿ ಡಾ.ಯತೀಂದ್ರ ಉದ್ಘಾಟಿಸಿದರು.

ಕೆ.ಆರ್.ನಗರ, ನ.29– ಧರ್ಮ ಪ್ರತಿಯೊಬ್ಬ ಮನುಷ್ಯನಿಗೂ ಅಗತ್ಯವಾಗಿರಬೇಕು. ಆದರೆ ಅದರ ಹೆಸರಿನಲ್ಲಿ ಮೂಢ ನಂಬಿಕೆ ಬಿತ್ತಿ ರಾಜಕೀಯ ಮಾಡಬಾರದು ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.

ತಾಲೂಕಿನ ಕೆಸ್ತೂರುಕೊಪ್ಪಲು ಗ್ರಾಮದಲ್ಲಿ ನೂತನ ಸುಡುಗಾಡಮ್ಮ ಮತ್ತು ವೀರಭದ್ರೇಶ್ವರ ದೇವಾಲಯ ಉದ್ಘಾಟಿಸಿ ಮಾತನಾಡಿದ ಅವರು ಇತ್ತೀಚೆಗೆ ರಾಜಕೀಯ ನಾಯಕರು ಧರ್ಮವನ್ನು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿರುವುದು ಅಪಾಯಕಾರಿಯಾಗಿದೆ. ಯಾವ ದೇಶದಲ್ಲಿ ಧರ್ಮದೊಳಗೆ ರಾಜಕಾರಣ ಬೆರೆಸುತ್ತಾರೊ ಅವುಗಳು ಸರ್ವ ನಾಶವಾದ ಉದಾಹರಣೆ ನಮ್ಮ ಮುಂದಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸಿ ನುಡಿದಂತೆ ನಡೆಯುತ್ತಿರುವ ಜನನಾಯಕರಾಗಿದ್ದಾರೆ. ಇಂತಹ ನಾಯಕರಿಗೆ ತಾವು ಸದಾ ಬೆನ್ನೆಲುಬಾಗಿ ನಿಲ್ಲಬೇಕು ಎಂದು ಮನವಿ ಮಾಡಿದರು. ಶಾಸಕ ಡಿ.ರವಿಶಂಕರ್ ಮಾತನಾಡಿ, ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಮತ ನೀಡುವ ಗ್ರಾಮಗಳು ಕಳೆದ 15 ವರ್ಷಗಳಿಂದ ಅಭಿವೃದ್ಧಿಯಲ್ಲಿ ಕುಂಠಿತಗೊಂಡಿದ್ದು, ಅವುಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಕೊಡಿಸಬೇಕೆಂದು ವಿಧಾನ ಪರಿಷತ್ ಸದಸ್ಯರಿಗೆ ಮನವಿ ಮಾಡಿದರು.

ಕೆ.ಆರ್.ನಗರ ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಕಪ್ಪಡಿ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲು 25 ಕೋಟಿ ಅನುದಾನ ನೀಡಲು ಗುರುವಾರ ನಡೆದ ಸಚಿವ ಸಂಪುಟದ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು. ಕಾಗಿನೆಲೆ ಕನಕ ಗುರುಪೀಠದ ಕೆ.ಆರ್.ನಗರ ಶಾಖಾ ಮಠದ ಶಿವಾನಂದ ಪುರಿಶ್ರೀಗಳು ಆಶೀರ್ವಚನ ನೀಡಿದರು. ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಮಾತನಾಡಿದರು. ದೇವಾಲಯದಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜೆ ಮತ್ತು ಹೋಮ ಹವನ ನಡೆಸಿ ಮಹಾಮಂಗಳಾರತಿ ಮಾಡಿ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಡಿಡಿಪಿಐ ಎಸ್.ಟಿ.ಜವರೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಮೇಶ್, ತಾಪಂ ಮಾಜಿ ಅಧ್ಯಕ್ಷೆ ಹರಿಣಿ, ಮಾಜಿ ಸದಸ್ಯೆ ರಮ್ಯ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ದೇವಾಲಯ ಸಂಯೋಜಕ ಆರ್.ಭಾಸ್ಕರ್, ಎಂ.ಎಸ್. ರಾಮಯ್ಯ, ಮೆಡಿಕಲ್ ಕಾಲೇಜು ವೈದ್ಯ ಡಾ.ಆರ್.ವೀರಣ್ಣ, ಬೆಂಗಳೂರು ಮದರ್ ಡೈರಿ ಕಾರ್ಯದರ್ಶಿ ಆರ್.ಕನಕರಾಜು, ಯಜಮಾನರಾದ ಕೆ.ಶಿವಚಂದ್ರ, ಬಸವರಾಜು, ಜವರೇಗೌಡ, ಕಾಳೇಗೌಡ, ಮೇಲ್ವಿಚಾರಕ ಕೆ.ಎಲ್.ಲೋಕೇಶ್, ಕೆಸ್ತೂರು ಗ್ರಾಪಂ ಅಧ್ಯಕ್ಷೆ ಮಂಜುಳ, ಮಾಜಿ ಅಧ್ಯಕ್ಷ ಕೆ.ಎಂ.ಜಗದೀಶ್, ನಾಗಮಣಿ ಮತ್ತು ಗ್ರಾಮಸ್ಥರು ಹಾಜರಿದ್ದರು.

ಹುಟ್ಟುಹಬ್ಬದ ಶುಭಾಶಯ



ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಮಹದೇಶ್ ಅವರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಹುಟ್ಟುಹಬ್ಬದ ಶುಭ ಕೋರಿದರು. ಈ ವೇಳೆ ಭಾಗ್ಯ ಮಾದೇಶ್ ಇನ್ನಿತರರಿದ್ದರು.

ಇಂದು ಪೂರ್ವಭಾವಿ ಸಭೆ

ಸರಗೂರು, ನ.29– ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆ ನ.30ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ ತಿಳಿಸಿದ್ದಾರೆ. ಪಟ್ಟಣದಲ್ಲಿ ಜ.17ರಂದು ನಡೆಯುವ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆ ಇಲ್ಲಿನ ಪ್ರವಾಸಿ ಮಂದಿರದಲ್ಲಿ ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಕಸಾಪ ಪದಾಧಿಕಾರಿಗಳು, ಸದಸ್ಯರು, ಸಂಘ ಸಂಸ್ಥೆಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಭೆ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ವಸ್ತುಪ್ರದರ್ಶನ ಮಕ್ಕಳ ಜ್ಞಾನ ವೃದ್ಧಿಗೆ ಸಹಕಾರಿ



ವಸ್ತು ಪ್ರದರ್ಶನವನ್ನು ಜೆಎಸ್‌ಎಸ್ ಕಾಲೇಜಿನ ಉಪನ್ಯಾಸಕ ಮಹದೇವಸ್ವಾಮಿ ಉದ್ಘಾಟಿಸಿದರು.

ಸರಗೂರು, ನ.29– ವಸ್ತು ಪ್ರದರ್ಶನ ಮಕ್ಕಳ ಜ್ಞಾನ ವೃದ್ಧಿಗೆ ಸಹಕಾರಿ ಎಂದು ಮುಖ್ಯಶಿಕ್ಷಕ ಅಂಜುಂ ಪಾಷ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ವಸ್ತು ಪ್ರದರ್ಶನದಲ್ಲಿ ಮಾತನಾಡಿದ ಅವರು, ವಸ್ತು ಪ್ರದರ್ಶನಗಳು ಸೀಮಿತ ಅವಧಿಯಲ್ಲಿ ತಾತ್ಕಾಲಿಕವಾಗಿ ಪ್ರಾರಂಭವಾಗಿ ಮುಕ್ತಾಯವಾಗುತ್ತದೆ. ಆದರೆ ಶೈಕ್ಷಣಿಕ ವಸ್ತು ಪ್ರದರ್ಶನದಲ್ಲಿ ಪಡೆಯುವ ಜ್ಞಾನ ಶಾಶ್ವತವಾಗಿ ವಿದ್ಯಾರ್ಥಿಗಳ ಮನದಲ್ಲಿ ಉಳಿದುಕೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು. ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಜೆಎಸ್‌ಎಸ್ ಕಾಲೇಜಿನ ಉಪನ್ಯಾಸಕ ಮಹದೇವಸ್ವಾಮಿ, ಇಂತಹ ವಸ್ತು ಪ್ರದರ್ಶನಗಳಿಂದ ಮಕ್ಕಳ ಮುಂದಿನ ಭವಿಷ್ಯ, ಜ್ಞಾನ ಸಂಪಾದನೆ ದೃಷ್ಟಿಯಿಂದ, ಸರ್ವ ರೀತಿಯಲ್ಲೂ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲಿದೆ. ಇದರಿಂದ ಶೈಕ್ಷಣಿಕವಾಗಿ ಎಲ್ಲಾ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳಲು ಸಹಕಾರಿಯಾಗುತ್ತದೆ ಎಂದರು.

ಪ್ರಾಂಶುಪಾಲ ಕೆ.ಎಸ್.ಮಹದೇವಸ್ವಾಮಿ ಮಾತನಾಡಿ, ವಿದ್ಯಾರ್ಥಿಗಳು ಕ್ರಿಯಾಶೀಲರಾಗಲು ಹಾಗೂ ವೈಜ್ಞಾನಿಕವಾಗಿ ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಲು ಇಂತಹ ಕಾರ್ಯಕ್ರಮ ಅನಿವಾರ್ಯ. ಇದರಿಂದ ಜ್ಞಾನ ಲಭಿಸುತ್ತದೆ ಎಂದರು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕ ಶ್ರೀನಿವಾಸ್ ಮೂರ್ತಿ, ಶಾಲಾ ಕಾಲೇಜಿನ ಅಧ್ಯಾಪಕ ವೃಂದ ಉಪಸ್ಥಿತರಿದ್ದರು. ಪೋಷಕರು ಹಾಗೂ ಸಾರ್ವಜನಿಕರು ವಸ್ತು ಪ್ರದರ್ಶನ ವೀಕ್ಷಿಸಿ ಸಲಹೆ ಮತ್ತು ಮಾರ್ಗದರ್ಶನ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಅತ್ಯುತ್ತಮ ಮಾದರಿಗಳಿಗೆ ಬಹುಮಾನ ವಿತರಿಸಲಾಯಿತು.

ಮೈಕ್ರೋ ಫೈನಾನ್ಸ್‌ನವರ ಕಿರುಕುಳ

ಕ್ರಿಮಿನಾಶಕ ಸೇವಿಸಿ ಗೃಹಿಣಿ ಆತ್ಮಹತ್ಯೆ



ಹುಣಸೂರು, ನ.29– ಮೈಕ್ರೋ ಫೈನಾನ್ಸ್‌ನವರ ಕಿರುಕುಳ ತಾಳಲಾರದೇ ಗೃಹಿಣಿಯೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕಿರಿಜಾಜಿ ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ಸಣ್ಣಕಾಳಯ್ಯ ಅವರ ಪತ್ನಿ ಸುಶೀಲ(48) ಆತ್ಮಹತ್ಯೆ ಮಾಡಿಕೊಂಡವರು. ಈಕೆ ನಗರದ ಫಾರ್ಚುನ್ ಮೈಕ್ರೋ ಫೈನಾನ್ಸ್‌ನಲ್ಲಿ 40 ಸಾವಿರ ರೂ. ಸಾಲ ಪಡೆದಿದ್ದು, ಸಕಾಲಕ್ಕೆ ಸಾಲ ಮರು ಪಾವತಿಸುತ್ತಿದ್ದರು. ಆದರೆ ಈ ಬಾರಿ ಸಾಲದ ಕಂತಿನ ಹಣ ಪಾವತಿಸಲು ಸಾಧ್ಯವಾಗಿರಲಿಲ್ಲ. ನ.29ರಂದು ಪಾವತಿಸುವುದಾಗಿ ತಿಳಿಸಿದ್ದರು. ಸಾಲ ವಸೂಲಿಗೆ ಬಂದಿದ್ದ ಮೈಕ್ರೋ ಫೈನಾನ್ಸ್ ನೌಕರ ಉಮೇಶ್ ಹಾಗೂ ನಾಲ್ವರು ಸಮಯ ನೀಡಲು ಸಾಧ್ಯವಿಲ್ಲ. ಕೂಡಲೇ ಹಣ ಪಾವತಿಸುವಂತೆ ಗುರುವಾರ ಮಧ್ಯಾಹ್ನ ಮನೆ ಮುಂದೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಆರೋಪಿಸಲಾಗಿದೆ. ಸಾಲ ತೀರಿಸಲು 1 ದಿನ ಕಾಲಾವಕಾಶ ಕೇಳಿದರೂ ನೀಡದೆ ಗಲಾಟೆ ಮಾಡಿದ್ದರಿಂದ ಮನ ನೊಂದ ಸುಶೀಲ ಅವರು ಮನೆಯಲ್ಲೇ ಕೀಟನಾಶಕ ಕಾಳು ಸೇವಿಸಿ ಅಸ್ವಸ್ಥಗೊಂಡಿದ್ದರು. ಈ ವೇಳೆ ಅವರನ್ನು ಪಕ್ಕದ ಮನೆಯವರು ಹುಣಸೂರು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಂಜೆ ವೇಳೆಗೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಪುತ್ರ ನವೀನ್ ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಫೈನಾನ್ಸ್ ಕಂಪನಿಯ ಉಮೇಶ್ ಸೇರಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಹಿಟ್ನೆ ಹೆಬ್ಬಾಗಿಲು ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಮುಖಂಡರು ಸನ್ಮಾನಿಸಿದರು.

ಕಂಪಲಾಪುರ, ನ.29– ಸಮೀಪದ ಹಿಟ್ನೆ ಹೆಬ್ಬಾಗಿಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಹೆಚ್.ಎಸ್.ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಮಹೇಶ್ ನಾಯ್ಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ, ಉಪಾಧ್ಯಕ್ಷರಾಗಿದ್ದ ವಿನೋದ್ ಕುಮಾರ್ ಹಾಗೂ ಈರೇಗೌಡರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕುಮಾರ್, ಉಪಾಧ್ಯಕ್ಷ ಸ್ಥಾನಕ್ಕೆ ಮಹೇಶ್ ನಾಯಕ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಜೆ.ಹಿತೀಂದ್ರ ಘೋಷಿಸಿದರು.

ಇದೇ ವೇಳೆ 'ಸಹಕಾರಿ ರತ್ನ' ಪ್ರಶಸ್ತಿ ಪುರಸ್ಕೃತ ಹಿರಿಯ ಸಹಕಾರಿ ಹಿಟ್ನಳ್ಳಿ ಪರಮೇಶ್ ಅವರನ್ನು ಸನ್ಮಾನಿಸಲಾಯಿತು. ಎಂಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಮಹದೇವಯ್ಯ, ಸಿಇಓ ಜಯರಾಂ, ಮೈಸೂರು ಜಿಲ್ಲಾ ಯೂನಿಯನ್ ಬ್ಯಾಂಕ್ ನಿರ್ದೇಶಕ ಕೆ.ಕೆ.ಹರೀಶ್, ನಿರ್ದೇಶಕರಾದ ಈರೇಗೌಡ, ಹೆಚ್.ಡಿ.ಮಹದೇವ, ವಿನೋದ್ ಕುಮಾರ್, ಹೆಚ್.ಸಿ. ಮಹದೇವ, ಪಾರ್ವತಿ, ಕಾವೇರಮ್ಮ, ಸಿಬ್ಬಂದಿ ನಟರಾಜ್, ಶ್ರೀನಿವಾಸ್, ಸಂತೋಷ್ ಮತ್ತಿತರರಿದ್ದರು.

ಸಿಎಂಗೆ ಅಭಿನಂದನೆ



ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಜಯ ಗಳಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಶಾಸಕ ಸಿ.ಪಿ.ಯೋಗೇಶ್ವರ್, ತಿ.ನರಸೀಪುರ ಪುರಸಭಾ ಸದಸ್ಯ ಬಾದಾಮಿ ಮಂಜು, ಡಾ.ಡೇವಿಡ್ ರಾಜು, ನಿಂಗರಾಜು ಸೇರಿದಂತೆ ಇತರರಿದ್ದರು.

ಡಿ.5, ಹಾಸನದಲ್ಲಿ ಕಾಂಗ್ರೆಸ್ ಸ್ವಾಭಿಮಾನಿ ಸಮಾವೇಶ

ತಿ.ನರಸೀಪುರದಿಂದ 10 ಸಾವಿರ ಮಂದಿ ಭಾಗಿ

▶ 150 ಬಸ್ ವ್ಯವಸ್ಥೆ ▶ ಮುಖ್ಯಮಂತ್ರಿ ಕೈ ಬಲಪಡಿಸಲು ಸಮಾವೇಶ ಆಯೋಜನೆ



ಸಭೆಯಲ್ಲಿ ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ ಮಾತನಾಡಿದರು.

ತಿ.ನರಸೀಪುರ, ನ.29– ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಬಲ ತುಂಬಲು ಡಿ.5ರಂದು ಹಾಸನದಲ್ಲಿ ನಡೆಯುವ ಕಾಂಗ್ರೆಸ್ ಸ್ವಾಭಿಮಾನಿ ಸಮಾವೇಶದಲ್ಲಿ ಕ್ಷೇತ್ರದ 10 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ ಎಂದು ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ ತಿಳಿಸಿದರು.


ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸ್ವಾಭಿಮಾನಿ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು 2 ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿ ಮತ್ತು ಜನಪರ ಯೋಜನೆಗಳನ್ನು ಜನರ ಮುಂದಿಡಲು ಸಮಾವೇಶ ಆಯೋಜಿಸಿರುವುದರಿಂದ ನರಸೀಪುರದಿಂದಲೂ ಜನರನ್ನು ಕರೆದೊಯ್ಯಲು 150 ಬಸ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದರು.

ಇತ್ತೀಚೆಗೆ ರಾಜ್ಯದಲ್ಲಿ ನಡೆದ ಮೂರು ಕ್ಷೇತ್ರಗಳ ಉಪ ಚುನಾವಣೆಯಲ್ಲಿ 'ಕೈ' ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಸಿದ್ದರಾಮಯ್ಯನವರಿಗೆ ರಾಜ್ಯದ ಜನತೆ ಶಕ್ತಿ ತುಂಬಿದ್ದಾರೆ. ಸಿದ್ದರಾಮಯ್ಯ ಸೇರಿದಂತೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರ ನಾಯಕತ್ವ ಬಲಪಡಿಸಲು ಕ್ಷೇತ್ರದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಸಮಾವೇಶದಲ್ಲಿ ಭಾಗವಹಿಸುವಂತೆ ಕಾರ್ಯಕರ್ತರು ಶ್ರಮಿಸಬೇಕು ಎಂದು ಮನವಿ ಮಾಡಿದರು.

ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚೆನ್ನಕೇಶವ, ತಾಪಂ ಮಾಜಿ ಸದಸ್ಯ ಕುಕ್ಕೂರು ಗಣೇಶ್ ಮಾತನಾಡಿ, ಸಮಾವೇಶದಲ್ಲಿ ನಾವೆಲ್ಲರೂ ಪಾಲ್ಗೊಳ್ಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕಾರಾವಧಿಯ ಜನಪರ ಕಾರ್ಯಗಳಿಗೆ ಬೆಂಬಲ ಸೂಚಿಸಬೇಕು. ಆ ಮೂಲಕ ವಿಪಕ್ಷಗಳಿಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ಸಂದೇಶ ರವಾನಿಸಬೇಕು ಎಂದರು.

ಸಭೆಯಲ್ಲಿ ಡೈರಿ ಅಧ್ಯಕ್ಷ ಹೆಮ್ಮಿಗೆ ಶೇಷಾದ್ರಿ, ಮಾಜಿ ಜಿಪಂ ಸದಸ್ಯ ಹೊನ್ನನಾಯಕ, ಸೋಸಲೆ ಮಹ ದೇವಸ್ವಾಮಿ, ಹಿರಿಯೂರು ವೀರೇಂದ್ರ, ತಾಪಂ ಮಾಜಿ ಸದಸ್ಯರಾದ ನರಸಿಂಹ ಮಾದನಾಯಕ, ಕೆಬ್ಬೆ ರಂಗಸ್ವಾಮಿ, ಗದ್ದೆಮೊಳೆ ಸಿದ್ದರಾಜು, ಉಕ್ಕಲಗೆರೆ ಬಸವಣ್ಣ, ಮಾದ್ರಳ್ಳಿ ಎಸ್.ಶಿವಮೂರ್ತಿ, ಬೆನಕನಹಳ್ಳಿ ಶಿವಮಲ್ಲಪ್ಪ, ಹೆಚ್.ಎನ್. ಉಮೇಶ್, ಎಂ.ಬಿ.ಸಾಗರ್, ಡಾ.ಬಿ.ಕೆ. ಜ್ಞಾನಪ್ರಕಾಶ್, ಡಾ.ಕೆ.ಎನ್. ಬಸವ ರಾಜು, ಸೋಸಲೆ ಪರಶಿವಮೂರ್ತಿ, ಕನ್ನಹಳ್ಳಿ ಲಕ್ಷ್ಮಣ್, ಎಸ್.ರಾಜೇಶ್, ಸಚಿವರ ಆಪ್ತ ಸಹಾಯಕ ಬಸವರಾಜು ಇತರರಿದ್ದರು.

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಮನವಿ



ಸಭೆಯಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿದರು.

ಹುಣಸೂರು: ಹಾಸನದಲ್ಲಿ ಡಿ.5 ರಂದು ನಡೆಯುವ ಸಿದ್ದರಾಮಯ್ಯರ ಸ್ವಾಭಿಮಾನಿ ಜನಾಂದೋಲನ ಸಮಾವೇಶದಲ್ಲಿ ತಾಲೂಕಿನ 10 ಸಾವಿರ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಿದ್ದರಾಮಯ್ಯರ ಅಭಿಮಾನಿಗಳು ಭಾಗವಹಿಸುವಂತೆ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಮನವಿ ಮಾಡಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯರ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ದಿನಕ್ಕೊಂದು ಕ್ಯಾತೆ ತೆಗೆದು ಅವರನ್ನು ತೇಜೋವಧೆ ಮಾಡುವ ಜೊತೆಗೆ ಪ್ರತಿಭಟನೆ, ಪಾದಯಾತ್ರೆ ನಡೆಸಿದ್ದವು. ಖಜಾನೆ ಖಾಲಿಯಾಗಿದೆ. ಚುನಾವಣೆ ನಂತರ ಗ್ಯಾರಂಟಿಗಳನ್ನು ರದ್ದು ಮಾಡುತ್ತಾರೆಂಬ ಹೇಳಿಕೆ ನೀಡಿ ಜನರಲ್ಲಿ ಅನುಮಾನ ಮೂಡುವಂತೆ ಮಾಡಿದ್ದವು. ಸಂಡೂರಲ್ಲಿ ವಾಲ್ಮೀಕಿ ಹಗರಣ, ಈ ಭಾಗದಲ್ಲಿ ಮುಡಾ ಹಗರಣ ಬಿಟ್ಟಿದ್ದರು. ಆದರೆ ಸ್ವಾಭಿಮಾನಿ ಮತದಾರರು ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಪಕ್ಷಕ್ಕೆ ಮತ್ತೊಮ್ಮೆ ಆಶೀರ್ವಾದ ಮಾಡಿದ್ದಾರೆ ಎಂದರು.

ಸಮಾವೇಶಕ್ಕೆ 10 ಸಾವಿರ ಮಂದಿ: ಸಮಾವೇಶಕ್ಕೆ 100 ಬಸ್‌ಗಳನ್ನು ಕಳುಹಿಸುವಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಹೆಚ್ಚಿನ ಬಸ್ ಬೇಕಿದ್ದಲ್ಲಿ ಮಾಹಿತಿ ನೀಡುವಂತೆ ತಿಳಿಸಿದ ಅವರು ಸಮಾವೇಶದಲ್ಲಿ ತಾಲೂಕಿನಿಂದ 10 ಸಾವಿರ ಮಂದಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಕಾರ್ಯಾಧ್ಯಕ್ಷ ಪುಟ್ಟರಾಜು, ಜಿಪಂ ಮಾಜಿ ಸದಸ್ಯ ಕುನ್ನೇಗೌಡ, ಪ್ರಭಾಕರ್ ಮಾತನಾಡಿದರು. ನಗರಾಧ್ಯಕ್ಷ ರಮೇಶ್, ಕಾರ್ಯಾಧ್ಯಕ್ಷ ಬಸವರಾಜಪ್ಪ, ಪ್ರೇಮಕುಮಾರ್, ಸುರೇಶ್, ನಗರಸಭೆ ಮಾಜಿ ಉಪಾಧ್ಯಕ್ಷೆ ಸುನೀತಾ, ತಾಪಂ ಮಾಜಿ ಸದಸ್ಯರಾದ ಅಣ್ಣಯ್ಯ ನಾಯಕ, ಪುಟ್ಟಮ್ಮ, ಮುಖಂಡರಾದ ಎ.ಪಿ.ಸ್ವಾಮಿ, ಬಸವರಾಜು, ಶಿವಣ್ಣ, ಚಿಕ್ಕಸ್ವಾಮಿ, ರಾಮಸ್ವಾಮಿ, ಚೌಡನಾಯಕ, ಮಂಜು, ಹೊನ್ನಪ್ಪ, ಬಸವರಾಜು, ಶಾಂತ, ನೇತ್ರಾವತಿ, ರೇಖಾ, ರೇಣುಕಾ ಇನ್ನಿತರರಿದ್ದರು.

ಪತ್ರಕರ್ತರು, ಸಿಬ್ಬಂದಿ, ಕುಟುಂಬವರ್ಗಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಇತ್ತೀಚೆಗೆ ಆಯುರ್ವೇದಕ್ಕೆ ಫುಲ್ ಡಿಮ್ಯಾಂಡ್: ಶಾಸಕ ಶ್ರೀವತ್ಸ

ಮೈಸೂರು,ನ.29(ಎಂಟಿವೈ)– ಇತ್ತೀಚಿನ ದಿನಗಳಲ್ಲಿ ಆಯುರ್ವೇದ ಚಿಕಿತ್ಸಾ ಪದ್ಧತಿಗೆ ಹೆಚ್ಚಿನ ಮನ್ನಣೆ ದೊರಕುತ್ತಿರುವುದು ಉತ್ತಮ ಬೆಳವಣಿಗೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಜಿಲ್ಲಾ ಪತ್ರಕರ್ತರ ಸಂಘ, ಸರ್ಕಾರಿ ಆಯುರ್ವೇದ ಸಂಶೋಧನಾ ಸಂಸ್ಥೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಚಿರಂತ್ ಆಯುರ್ವೇದ ಕ್ಲಿನಿಕ್, ಶಾಂತವೇರಿ ಗೋಪಾಲಗೌಡ , ಆರ್ಯ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಸ್ಪರ್ಶ ಕಣ್ಣಿನ ಆಸ್ಪತ್ರೆ, ಜೆಎಸ್‌ಎಸ್ ದಂತ ವೈದ್ಯಕೀಯ ಆಸ್ಪತ್ರೆ ಹಾಗೂ ವಿವಿಧ ಆಸ್ಪತ್ರೆಗಳ ಆಸ್ಪತ್ರೆಗಳ ಸಹಯೋಗದಲ್ಲಿ ಪತ್ರಕರ್ತರು, ಕಚೇರಿ ಸಿಬ್ಬಂದಿ, ಪತ್ರಿಕಾ ವಿತರಕರು ಹಾಗೂ ಅವರ ಕುಟುಂಬದ ಸದಸ್ಯರಿಗಾಗಿ ಆಯೋಜಿಸಿದ್ದ 'ಆರೋಗ್ಯ ತಪಾಸಣಾ ಶಿಬಿರ'ದಲ್ಲಿ ಮಾತನಾಡಿದ ಅವರು, ಆಯುರ್ವೇದ ಔಷಧಿಯಿಂದ ಗಂಭೀರ ಸ್ವರೂಪದ ವಿವಿಧ ರೋಗಗಳು ಸಂಪೂರ್ಣವಾಗಿ ಗುಣವಾಗುತ್ತಿರುವುದನ್ನು ಮನಗಂಡ ಜನರು, ಇತ್ತೀಚಿನ ವರ್ಷಗಳಲ್ಲಿ ಆಯುರ್ವೇದ ಚಿಕಿತ್ಸೆ ಮತ್ತು ಔಷಧಿಗಳ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಮೊರೆ ಹೋಗುತ್ತಿದ್ದಾರೆ. ಇದರಿಂದ ಆಯುರ್ವೇದ ಪದ್ಧತಿಯ ಬಗ್ಗೆ ಜನರಲ್ಲಿದ್ದ ಅಭಿಪ್ರಾಯ ಬಹಳಷ್ಟು ಬದಲಾಗಿದೆ. ಈ ಚಿಕಿತ್ಸಾ ಪದ್ಧತಿಯಿಂದ ಗುಣವಾಗುವುದು ತಡವಾಗಲಿದೆ ಎಂದು ಬಹುತೇಕರು ಇಂಗ್ಲಿಷ್ ಮೆಡಿಸಿನ್ ಮೊರೆ ಹೋಗುತ್ತಿದ್ದರು. ಆದರೆ ಆಯುರ್ವೇದದಲ್ಲಿಯೂ ಅದೇ ರೀತಿಯ ಔಷಧಿಗಳಿವೆ ಎಂಬುದು ಎಲ್ಲರಿಗೂ ಅರಿವಾಗುತ್ತಿದೆ ಎಂದರು.

ಕೋವಿಡ್, ಚಿಕನ್ ಗುನ್ಯಾ ಸಂದರ್ಭದಲ್ಲಿ ಬಹುತೇಕರು ಆಯುರ್ವೇದದ ಮೊರೆ ಹೋದರು. ಇತ್ತೀಚಿನ ದಿನಗಳಲ್ಲಿ ಎಲ್ಲಾ ರೋಗಗಳಿಗೂ ಆಯುರ್ವೇದ ಪದ್ಧತಿಯಲ್ಲಿ ಪರಿಣಾಮಕಾರಿ ಔಷಧಿಗಳಿರುವುದರಿಂದ ಹೆಚ್ಚಿನ ಜನರು ಆಯುರ್ವೇದ ಪದ್ಧತಿಯನ್ನು ಅವಲಂಭಿಸಿದ್ದಾರೆ ಎಂದು ತಿಳಿಸಿದರು.

ಜೆಎಸ್‌ಎಸ್ ಮಾಧ್ಯಮ ಸಂಸ್ಥೆಯ ಶ್ರೀಹರಿ ದ್ವಾರಕಾನಾಥ್ ಮಾತನಾಡಿ, ನಗರದಲ್ಲಿ ಕೊರೊನಾ ನಿರ್ವಹಣೆ ಉತ್ತಮ ವಾಗಿತ್ತು. ಇದಕ್ಕೆ ವೈದ್ಯರೂ ಕಾರಣ. ಇನ್ನು ಪತ್ರಕರ್ತರು ಸದಾ ಒತ್ತಡದ ನಡುವೆ ಕೆಲಸ ಮಾಡುತ್ತಿರುತ್ತಾರೆ. ಹೀಗಾಗಿ ಮಾನಸಿಕ ಹಾಗೂ ದೈಹಿಕ ಸಮಸ್ಯೆಗಳು ಕಾಡುತ್ತವೆ. ಹೀಗಾಗಿ ಇವರ ಆರೋಗ್ಯದತ್ತ ಕಾಳಜಿಗಾಗಿ ಈ ಶಿಬಿರ ಆಯೋಜಿಸಲಾಗಿದೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಮಾತನಾಡಿ, ಪತ್ರಕರ್ತರ ಬಗ್ಗೆ ಸಮಾಜದಲ್ಲಿ ಹಲವರಿಗೆ ಕಾಳಜಿ ಇದೆ. ಹೀಗಾಗಿ ಅವರ ನೆರವು ಪಡೆದು ಈ ಶಿಬಿರ ಆಯೋಜಿಸಲಾಗಿದೆ. ಆರೋಗ್ಯ ಮತ್ತು ಬಲ ಇರುವವರೆಗೂ ಪತ್ರಕರ್ತರಿಗೆ ಎಲ್ಲರೂ ಗೌರವ ನೀಡುತ್ತಾರೆ. ಇವು ಇಲ್ಲವಾದ ಬಳಿಕ ಯಾರೂ ಮಾತನಾಡಿಸುವುದಿಲ್ಲ. ಹೀಗಾಗಿ ಪತ್ರಕರ್ತರು ಆರೋಗ್ಯದತ್ತ ಗಮನ ಹರಿಸಬೇಕೆಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಆರೋಗ್ಯ ಶಿಬಿರವನ್ನು ಅವಧೂತ ಅರ್ಜುನ್ ಗುರೂಜಿ ಉದ್ಘಾಟಿಸಿದರು. ಶಿಬಿರದಲ್ಲಿ 60ಕ್ಕೂ ಹೆಚ್ಚು ಮಂದಿ ವೈದ್ಯರು, ಸಿಬ್ಬಂದಿ ಆರೋಗ್ಯ ತಪಾಸಣೆ ನಡೆಸಿದರು. ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ನಡೆದ ಶಿಬಿರದಲ್ಲಿ 350ಕ್ಕೂ ಅಧಿಕ ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು, ಆಯುರ್ವೇದ ಸಂಶೋಧನಾ ಕೇಂದ್ರದ ವತಿಯಿಂದ ಆಯುರ್ವೇದ ಔಷಧವನ್ನು ಉಚಿತವಾಗಿ ವಿತರಿಸಲಾಯಿತು. ಶಿಬಿರದಲ್ಲಿ ಬಿಪಿ, ಶುಗರ್, ಇಸಿಜಿ, ಸಾಮಾನ್ಯ ತಪಾಸಣೆ, ನೇತ್ರ, ದಂತ ಪರೀಕ್ಷೆ ನಡೆಸಲಾಯಿತು. ಈ ಸಂದರ್ಭದಲ್ಲಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಎಲ್.ಎನ್. ಶೆಣೈ, ಡಾ.ಎಂ. ಜಿ.ಆರ್. ಅರಸ್, ನರರೋಗ ತಜ್ಞ ಡಾ.ಶುಶ್ರುತ್ ಗೌಡ, ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ ಇನ್ನಿತರರು ಇದ್ದರು.

ಬಳ್ಳಾರಿ ಆಸ್ಪತ್ರೆಯ 5 ಬಾಣಂತಿಯರ ಸಾವಿಗೆ ಕಳಪೆ ಗ್ಲೂಕೋಸ್ ಕಾರಣ!

ಬಳ್ಳಾರಿ, ನ.29–ಕೇವಲ 15 ದಿನಗಳ ಅಂತರದಲ್ಲಿ 5 ಮಂದಿ ಬಾಣಂತಿಯರ ಸಾವಿನ ಮೂಲಕ ರಾಜ್ಯಾದ್ಯಂತ ವ್ಯಾಪಕ ಸುದ್ದಿಗೆ ಗ್ರಾಸವಾಗಿದ್ದ ಬಳ್ಳಾರಿ ಸರ್ಕಾರಿ ಆಸ್ಪತ್ರೆ ಪ್ರಕರಣ ಇದೀಗ ಮತ್ತೆ ಸುದ್ದಿಯಾಗುತ್ತಿದೆ. ಬಳ್ಳಾರಿ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಕಳೆದ 15 ದಿನಗಳಲ್ಲಿ ಐದು ಬಾಣಂತಿ ಯರ ಸಾವಿಗೆ ಕಾರಣವೇನು ಎಂಬುದು ಕೊನೆಗೂ ಬಹಿರಂಗವಾಗಿದ್ದು, ಬಾಣಂತಿಯರಿಗೆ ಸಿಸೇರಿಯನ್ ವೇಳೆ ನೀಡಿದ್ದ ಕಳಪೆ ಮಟ್ಟದ IV ಗ್ಲೂಕೋಸ್‌ನಿಂದ ಬಾಣಂತಿಯರು ಮೃತಪಟ್ಟಿದ್ದಾರೆ ಎಂದು ತನಿಖಾ ಸಂಸ್ಥೆ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ ಉಲ್ಲೇಖವಾಗಿದೆ ಎಂದು ಹೇಳಲಾಗಿದೆ

ಈ ಬಗ್ಗೆ ಸುದ್ದಿ ಮಾಧ್ಯಮವೊಂದು ವರದಿ ಮಾಡಿದ್ದು, ಅಂದು ಬಾಣಂತಿಯರಿಗೆ ನೀಡಿದ್ದ ಐವಿ (ಇಂಟ್ರಾವೆನಸ್ ದ್ರಾವಣ) ಕಳಪೆ ಗುಣಮಟ್ಟದಿಂದ ಕೂಡಿತ್ತು. ಆದರೂ, ಕೂಡ ವೈದ್ಯರು ಸಿಸೇರಿಯನ್ ವೇಳೆ IV ಗ್ಲುಕೋಸ್ ನೀಡಿದ್ದರಿಂದ ಬಾಣಂತಿಯರು ಮೃತಪಟ್ಟಿದ್ದಾರೆ ಎಂದು ತನಿಖಾ ತಂಡ ಪತ್ತೆ ಹಚ್ಚಿದೆ. ಹೀಗಾಗಿ, ಇಂಟ್ರಾವೆನಸ್ ದ್ರಾವಣ (IV ಗ್ಲುಕೋಸ್) ಬಳಕೆ ಮಾಡದಂತೆ ಆರೋಗ್ಯ ಇಲಾಖೆ ಎಲ್ಲ ಸರ್ಕಾರಿ ಆಸ್ಪತ್ರೆಗಳಿಗೆ ಸೂಚನೆ ನೀಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಏನಿದು ಪ್ರಕರಣ?: ಬಳ್ಳಾರಿ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದ ಗರ್ಭಿಣಿಯರಿಗೆ ಸಿಸೇರಿಯನ್ ಮಾಡಲಾಗಿತ್ತು. ಸಿಸೇರಿಯನ್ ಬಳಿಕ ಬಾಣಂತಿಯರ ಆರೋಗ್ಯದಲ್ಲಿ ಏರು ಪೇರಾಗುತ್ತಿತ್ತು. ನವೆಂಬರ್ 9ರಂದು ಹೆರಿಗೆ ಬಳಿಕ ಏಕಾಏಕಿ 7 ಜನ ಬಾಣಂತಿಯರ ಆರೋಗ್ಯದಲ್ಲಿ ಏರು ಪೇರಾಗಿತ್ತು ಆರೋಗ್ಯದಲ್ಲಿನ ಏರುಪೇರಿಂದ ಕೇವಲ 15 ದಿನಗಳಲ್ಲಿ 5 ಬಾಣಂತಿಯರು ಮೃತಪಟ್ಟಿದ್ದು. ಈ ವಿಚಾರ ರಾಜ್ಯಾದ್ಯಂತ ವ್ಯಾಪಕ ಸುದ್ದಿಗೆ ಗ್ರಾಸವಾಗಿತ್ತು.

ಈ ನಡುವೆ ಬಾಣಂತಿಯರ ಸಾವಿಗೆ ಕಾರಣವೇನು ಎಂಬುದನ್ನು ತಿಳಿಯಲು ಸರ್ಕಾರ ತಜ್ಞರ ಸಮಿತಿ ರಚಿಸಿತ್ತು. ಡಾ. ಸವಿತಾ, ಡಾ. ಭಾಸ್ಕರ್ ಮತ್ತು ಡಾ. ಹರ್ಷ ಅವರನ್ನು ಒಳಗೊಂಡ ತಜ್ಞರ ಸಮಿತಿಯನ್ನು ಸರ್ಕಾರ ರಚನೆ ಮಾಡಿದ್ದು, ಈ ಕೂಡಲೇ ಬಳ್ಳಾರಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಸಾವಿಗೆ ಏನು ಕಾರಣ ಎಂದು ತನಿಖೆ ನಡೆಸಬೇಕು ಎಂದು ಸೂಚಿಸಿತ್ತು.

ಅಲ್ಲದೆ ತನಿಖೆ ಬಳಿಕ ಸರ್ಕಾರಕ್ಕೆ ತುರ್ತು ವರದಿಯನ್ನ ಸಲ್ಲಿಕೆ ಮಾಡಬೇಕೆಂದು ಸೂಚನೆ ನೀಡಿತ್ತು ತನಿಖೆ ನಡೆಸಿದ ತಂಡ ಸಾವಿಗೆ ಕಾರಣ ವೇನು ಎಂದು ಸರ್ಕಾರಕ್ಕೆ ವರದಿ ಸಲ್ಲಿಸಿದೆ ಐವಿ ಗ್ಲೂಕೋಸ್ ನೀಡಿರುವುದೇ ಗರ್ಭಿಣಿಯರ ಸಾವಿಗೆ ಕಾರಣ ಎಂದು ತನಿಖಾ ತಂಡ ವರದಿ ನೀಡಿದೆ ಎಂದು ಹೇಳಲಾಗಿದೆ.

ಪ್ರವಾಸಿ ವಾಹನಗಳ ಚಾಲಕರು ಪ್ರವಾಸೋದ್ಯಮದ ರಾಯಭಾರಿಗಳು

ಕನ್ನಡ ರಾಜ್ಯೋತ್ಸವದಲ್ಲಿ ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಭಿಪ್ರಾಯ

ಮೈಸೂರು, ನ.29(ಜಿಎ)–ಪ್ರವಾಸಿ ವಾಹನ ಚಾಲಕರು ಕೇವಲ ವಾಹನಗಳ ಸಾರಥಿಯಲ್ಲ. ಅವರು ಪ್ರವಾಸೋದ್ಯಮದ ರಾಯಭಾರಿಗಳು ಎಂದು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಸಾಹಿತ್ಯ ಭವನದಲ್ಲಿ ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರು ಮತ್ತು ಮಾಲೀಕರ ಯೋಗ ಕ್ಷೇಮಾಭಿವೃದ್ಧಿ ಸಂಘ ಮತ್ತು ಪ್ರವಾಸಿ ವಾಹನ ಚಾಲಕರ ಸಹಕಾರ ಸಂಘದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಸಾಹಿತ್ಯ ಭವನದಲ್ಲಿ ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರು ಮತ್ತು ಮಾಲೀಕರ ಯೋಗ ಕ್ಷೇಮಾಭಿವೃದ್ಧಿ ಸಂಘ ಮತ್ತು ಪ್ರವಾಸಿ ವಾಹನ ಚಾಲಕರ ಸಹಕಾರ ಸಂಘದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಉದ್ಘಾಟಿಸಿದರು.

ಈ ಪ್ರವಾಸೋದ್ಯಮ ರಾಯಭಾರಿಗಳು ನೀವು ಸ್ವಲ್ಪ ಎಡವಿದರೆ ಸಂಸ್ಕೃತಿಯೂ ಹಳಿ ತಪ್ಪಲಿದೆ. ಆದರೆ, ಈವರೆಗೂ ಯಾವುದೇ ಚಾಲಕರು ಪ್ರವಾಸೋದ್ಯಮಕ್ಕೆ ಕಪ್ಪು ಚುಕ್ಕಿ ತಂದಿಲ್ಲ ಸೈನಿಕರಂತೆ ಅವರು ಶಿಸ್ತಿನಿಂದ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಇತ್ತೀಚೆಗೆ ಆಸ್ಟ್ರೇಲಿಯಾ ಪ್ರವಾಸಕ್ಕೆ ತೆರಳಿದಾಗ ಅಲ್ಲಿನ ಚಾಲಕರ ಸ್ಥಿತಿ ನೋಡಿದಾಗ ಆಶ್ಚರ್ಯವಾಯಿತು. ಅಲ್ಲಿನ ಚಾಲಕರು ತೆರಿಗೆ ಕಟ್ಟುತ್ತಿದ್ದಾರೆ. ನಮ್ಮ ಚಾಲಕರು ಈ ಹಂತಕ್ಕೆ ತಲುಪಬೇಕು. ಆದರೆ, ಇಲ್ಲಿನ ಸರ್ಕಾರದ ಮುಂದೆ ಅಧಿಕಾರಿಗಳು ಅಸಹಾಯಕರಾಗುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷನಾಗಿ ಕಳೆದ ಎರಡು ವರ್ಷಗಳಿಂದ ಸಾವಿರಕ್ಕೂ ಹೆಚ್ಚು ಕಾರ್ಯಕ್ರಮವನ್ನು ಮಾಡಿದ್ದು, ಅದರಲ್ಲಿ ಸುಮಾರು 200 ಕಾರ್ಯಕ್ರಮ ಆಯೋಜಿಸಿದ್ದವರು ತಮ್ಮ ಆಹ್ವಾನ ಪತ್ರಿಕೆಯಲ್ಲಿ ಕನ್ನಡವನ್ನು ತಪ್ಪಾಗಿ ಮುದ್ರಣ ಮಾಡಿಸಿದ್ದಾರೆ. ಆದರೆ, ನೀವು ಅಚ್ಚುಕಟ್ಟಾಗಿ ಮುದ್ರಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿ, ಕಳೆದ 14 ವರ್ಷಗಳ ರಾಜ್ಯೋತ್ಸವದ ಕಾರ್ಯಕ್ರಮ ಮಾಡಿರುವುದರಿಂದ ಉತ್ತಮವಾಗಿ ಕಾರ್ಯಕ್ರಮ ಆಯೋಜನೆ ಮಾಡಿದೀರಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಪ್ರವಾಸಿ ವಾಹನ ಚಾಲಕರ ಸಹಕಾರ ಸಂಘದ ಅಧ್ಯಕ್ಷ ಎಸ್.ನಾಗರಾಜು, ಕಾರ್ಮಿಕ ಇಲಾಖೆ ಅಧಿಕಾರಿ ಚೇತನ್ ಕುಮಾರ್, ಬಿ.ಐ.ಟಿ. ನಿರ್ದೇಶಕ ಮಹೇಂದ್ರ ಸಾಲಿಯಾನ, ಟ್ರಾವೆಲ್ ಪಾರ್ಕ್ ಮಾಲೀಕ ಸಿ.ಎ.ಜಯಕುಮಾರ್, ಕನ್ನಡ ರಾಜ್ಯೋತ್ಸವದ ಕಮಿಟಿ ಅಧ್ಯಕ್ಷ ಮಹಮದ್ ಸೌಲತ್ ಆಲಿ ಉಪಸ್ಥಿತರಿದ್ದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ನ.29– ಕೆಲಸದ ನಿಮಿತ್ತ ಡಿಸೆಂಬರ್ 1, 3, 5, 7, 9, 11, 13 ಹಾಗೂ 15 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಗುಂಗ್ರಾಲ್‌ಛತ್ರ, ಯಡ್ಡಹಳ್ಳಿ, ಯಾಚೇಗೌಡನಹಳ್ಳಿ, ಹೊಸಕೋಟೆ, ದಡದಕಲ್ಲಹಳ್ಳಿ, ಛತ್ರದ ಕೊಪ್ಪಲು, ರಾಮೇನಹಳ್ಳಿ, ಕಲ್ಲೂರು ನಾಗನಹಳ್ಳಿ, ಕಲ್ಲೂರು, ಮೀನಾಕ್ಷಿಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗುವುದು ಹಾಗೂ ಈ ಮೇಲ್ಕಂಡ ಪ್ರದೇಶಗಳ ವ್ಯಾಪ್ತಿಯಲ್ಲಿನ ಕೃಷಿ ಪಂಪ್‌ಸೆಟ್‌ಗಳಿಗೆ ಸದರಿ ದಿನಗಳಂದು ರಾತ್ರಿ 10 ಗಂಟೆಯಿಂದ ಮಾರನೇ ದಿನದ ಬೆಳಿಗ್ಗೆ 10 ಗಂಟೆಯವರೆಗೆ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ದರಪಟ್ಟಿ ಆಹ್ವಾನ

ಮೈಸೂರು,ನ.29– ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ಜಿಲ್ಲಾ ಎನ್.ಸಿ.ಡಿ ಕೋಶ, ಮೈಸೂರು ವತಿಯಿಂದ ಎನ್.ಪಿ–ಎನ್.ಸಿ.ಡಿ ಕಾರ್ಯಕ್ರಮದಡಿಯಲ್ಲಿ ಸಿ.ಹೆಚ್.ಸಿ ಎನ್.ಸಿ.ಡಿ ಕ್ಲಿನಿಕ್‌ಗಳಿಗೆ ಸಾದಿಲ್ವಾರುಗಳನ್ನು ಸರಬರಾಜು ಮಾಡಲು ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

ಮುಚ್ಚಿದ ಲಕೋಟೆಯನ್ನು ನಜರ್‌ಬಾದ್‌ನ ನಾಗಮ್ಮ ಆಸ್ಪತ್ರೆ ಅವರಣದಲ್ಲಿರುವ ಜಿಲ್ಲಾ ಎನ್.ಸಿ.ಡಿ.ಕೋಶದ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಿಗೆ ಡಿಸೆಂಬರ್ 05 ರ ಸಂಜೆ 4 ಗಂಟೆಯೊಳಗೆ ಸಲ್ಲಿಸುವುದು. ಸೀಲಾದ ಲಕೋಟೆಯ ಮೇಲೆ "ಎನ್.ಪಿ–ಎನ್.ಸಿ.ಡಿ ಕಾರ್ಯಕ್ರಮಡಿಯಲ್ಲಿ ಸಿ.ಹೆಚ್.ಸಿ ಎನ್.ಸಿ.ಡಿ ಕ್ಲಿನಿಕ್‌ಗಳಿಗೆ ಸಾದಿಲ್ವಾರುಗಳನ್ನು ಸರಬರಾಜು ಮಾಡಲು ದರಪಟ್ಟಿಯನ್ನು ಆಹ್ವಾನಿಸುತ್ತಿರುವ ಬಗ್ಗೆ' ಎಂದು ತಪ್ಪದೆ ನಮೂದಿಸುವುದು ಎಂದು ಜಿಲ್ಲಾ ಎನ್.ಸಿ.ಡಿ ಘಟಕದ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರ ಮೈಸೂರು ಜಿಲ್ಲಾ ಪ್ರವಾಸ

ಮೈಸೂರು,ನ.29– ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಅವರು ನ.30 ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದು, ಅಂದು ರಾತ್ರಿ 7.30 ಗಂಟೆಗೆ ಕೆ.ಆರ್ ನಗರ ತಾಲೂಕಿನಲ್ಲಿ ನಡೆಯುವ ಚುಂಚನಕಟ್ಟೆ ಜಲಪಾತೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಡಿ.1 ರಂದು ಬೆಳಗ್ಗೆ 11 ಗಂಟೆಗೆ ಶ್ರೀ ಗುರು ಮಲ್ಲೇಶ್ವರ ಮಠದ ಆವರಣದಲ್ಲಿರುವ ದೇವನೂರು ಸರ್ಕಾರಿ ಆಸ್ಪತ್ರೆಯ ಮುಂಭಾಗದಲ್ಲಿ ಏರ್ಪಡಿಸಲಾಗಿರುವ, ನಂಜನಗೂಡು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶ್ರೀ ಗುರು ಮಲ್ಲೇಶ್ವರ ಮಠದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಲೋಕೋಪಯೋಗಿ ಇಲಾಖೆ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಎನ್.ಟಿ.ಎನ್ ರಸ್ತೆಯಿಂದ ದೊಡ್ಡಕವಲಂದೆ ಗ್ರಾಮಕ್ಕೆ ದೇವನೂರು ಗ್ರಾಮದ ಮಾರ್ಗ ಸೇರುವ ರಸ್ತೆ ಸುಧಾರಣೆ ಕಾಮಗಾರಿಯ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಆಪ್ತ ಕಾರ್ಯದರ್ಶಿ ಸಿ.ಎಂ ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ಬದಿ ವ್ಯಾಪಾರಿಗಳ ಕೆಂಗಣ್ಣಿಗೆ ಗುರಿಯಾದ ಸೈಕಲ್ ಪಥದ ಬುಲಾರ್ಡ್ಸ್!

ವಾಹನ ಪಾರ್ಕಿಂಗ್‌ಗಾಗಿ ಮಹತ್ವಾಕಾಂಕ್ಷಿ ಯೋಜನೆ ಹಾಳು



ಸೈಕಲ್ ಪಥದಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿರುವುದು

> ರಾಮಕೃಷ್ಣನಗರದ ರಾಮಕೃಷ್ಣ ಪರಮಹಂಸ ವೃತ್ತದ ಬಳಿ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಎಳೆನೀರು ವ್ಯಾಪಾರಿ ಸೇರಿದಂತೆ ಕೆಲ ಬೀದಿ ಬದಿ ವ್ಯಾಪಾರಿಗಳು ಸೈಕಲ್ ಪಥಕ್ಕೆ ಅಳವಡಿಸಿದ್ದ ಬುಲಾರ್ಡ್ಸ್‌ಗಳನ್ನು ಕೀಳುತ್ತಿದ್ದಾರೆ. ಎಳನೀರು ವ್ಯಾಪಾರಿಯೊಬ್ಬರು ಬುಲಾರ್ಡ್ಸ್ ಕತ್ತರಿಸಿದ್ದ ಬಗ್ಗೆ ಈ ಹಿಂದೆ ಗುತ್ತಿಗೆದಾರರು ದೂರು ನೀಡಿದ್ದರು. ಎಳನೀರು ಕುಡಿಯಲು ಗ್ರಾಹಕರು ಬರಲೆಂದು ಸೈಕಲ್ ಪಥಕ್ಕೆ ಅಳವಡಿಸಿದ್ದ ಬುಲಾರ್ಡ್ಸ್ ಕತ್ತರಿಸುತ್ತಿರುವ ಖಚಿತ ಮಾಹಿತಿ ಲಭ್ಯವಾಗಿದ್ದು, ಈ ಸಂಬಂಧ ಪೊಲೀಸರಿಂದ ಎಚ್ಚರಿಕೆ ನೀಡಲಾಗಿದೆ. ಮೈಸೂರಲ್ಲಿ ಸೈಕಲ್ ಬಳಸುವವರನ್ನು ಉತ್ತೇಜಿಸಲು ಇನ್ನಷ್ಟು ರಸ್ತೆಗಳಲ್ಲಿ ಸೈಕಲ್ ಪಥ ನಿರ್ಮಿಸಲು ಉದ್ದೇಶಿಸಿರುವ ಸಂದರ್ಭದಲ್ಲಿಯೇ, ಇಂತಹ ಘಟನೆಗಳು ಜರುಗುತ್ತಿವೆ. ಹಾನಿಯುಂಟು ಮಾಡುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.
>
> – ಸಿಂಧು, ಎಸ್‌ಸಿ, ಮಹಾನಗರ ಪಾಲಿಕೆ (ಸೂಪರಿಂಟೆಂಡೆಂಟ್ ಇಂಜಿನಿಯರ್)

ಮೈಸೂರು,ನ.29(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಸೈಕಲ್ ಸವಾರಿ ಉತ್ತೇಜಿಸುವ ನಿಟ್ಟಿನಲ್ಲಿ ವಿವಿಧೆಡೆ ನಿರ್ಮಿಸಲಾಗಿರುವ ಸೈಕಲ್ ಪಥಕ್ಕೆ ಅಳವಡಿಸಿರುವ 'ಬುಲಾರ್ಡ್ಸ್'ಗಳು ರಸ್ತೆ ಬದಿ ವ್ಯಾಪಾರಿಗಳ ಕೆಂಗಣ್ಣಿಗೆ ಗುರಿಯಾಗಿ ಛಿದ್ರಗೊಳ್ಳುತ್ತಿದ್ದು, ಸೈಕಲ್ ಟ್ರ್ಯಾಕ್‌ಗೆ ಹಾನಿಯುಂಟು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮೈಸೂರಲ್ಲಿ ಈಗಾಗಲೇ ಟ್ರಿಣ್ ಟ್ರಿಣ್ ಸೈಕಲ್ ಯೋಜನೆ ಜಾರಿಗೊಳಿಸಿದ್ದು, ಸೈಕಲ್ ಬಳಸುವವರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸೈಕಲ್ ಹೊಡೆಯುವವರಿಗೆ ಉತ್ತೇಜನ ನೀಡಲು ಒಂದೂವರೆ ವರ್ಷದ ಹಿಂದೆ ಮೈಸೂರಲ್ಲಿ ಸೈಕಲ್ ಟ್ರ್ಯಾಕ್ ನಿರ್ಮಿಸಲಾಗಿದ್ದು, ಆ ಸೈಕಲ್ ಪಥದಲ್ಲಿ ಸೈಕಲ್ ಸವಾರರು ಮಾತ್ರ ಸಂಚರಿಸಲು ಅವಕಾಶ ಕಲ್ಪಿಸಲಾಗಿತ್ತು. ಸೈಕಲ್ ಸವಾರರ ಸುರಕ್ಷತೆಗಾಗಿ ರಿಫ್ಲೆಕ್ಟರ್ ಸ್ಟಿಕ್ಕರ್‌ವುಳ್ಳ ಬುಲಾರ್ಡ್ಸ್ ಅಳವಡಿಸಲಾಗಿತ್ತು. ರಸ್ತೆಯಿಂದ ಎರಡು ಅಡಿ ಎತ್ತರ ಬುಲಾರ್ಡ್ಸ್‌ಗಳು ಸೈಕಲ್ ಪಥ ಇರುವಿಕೆಯನ್ನು ವಾಹನ ಸವಾರರಿಗೆ ತೋರ್ಪಡಿಸಲು ಸಹಕಾರಿಯಾಗುತ್ತಿತ್ತು. ಆದರೆ ಕೆಲವರಿಗೆ ಅದು ನುಂಗಲಾರದ ತುತ್ತಾಗಿದ್ದು, ಬೇಕಂತಲೇ ಫೈಬರ್‌ನಿಂದ ತಯಾರಿಸಿರುವ ಬುಲಾರ್ಡ್ಸ್‌ಗಳನ್ನು ತುಂಡರಿಸುತ್ತಿದ್ದಾರೆ.

1.5 ಕಿಮಿ ಸೈಕಲ್ ಪಥ: ಮೈಸೂರಿನ ಕುವೆಂಪು ನಗರದ ವಿಶ್ವಮಾನವ ಜೋಡಿ ರಸ್ತೆ ಹಾಗೂ ಲಕ್ಷ್ಮೀಪುರಂನಲ್ಲಿ ಜೆಎಲ್‌ಬಿ ರಸ್ತೆಯಲ್ಲಿ ಸೈಕಲ್ ಪಥ ನಿರ್ಮಿಸಲಾಗಿದೆ. 1.05 ಕಿಮಿ ದೂರದ ಸೈಕಲ್ ಪಥ ನಿರ್ಮಾಣ ಮಾಡಲಾಗಿದ್ದು, ಸೈಕಲ್ ಬಳಕೆಗೆ ಮೀಸಲಿಡಲಾಗಿದೆ.

ಆದರೆ, ವಿಶ್ವಮಾನವ ಜೋಡಿ ರಸ್ತೆಯಲ್ಲಿ ರಾಮಕೃಷ್ಣ ಪರಮಹಂಸ ವೃತ್ತದಿಂದ ಸೋಮಾನಿ ಕಾಲೇಜು ಜಂಕ್ಷನ್‌ವರೆಗೆ ನಿರ್ಮಿಸಿರುವ ಸೈಕಲ್ ಪಥ ಕೆಲವು ಬೀದಿ ಬದಿ ವ್ಯಾಪಾರಿಗಳಿಗೆ ಸಹಿಸದಾಗಿದೆ. ರಸ್ತೆ ಬದಿ ಇರುವ ಎಳನೀರು ವ್ಯಾಪಾರಿಗಳು, ಫಾಸ್ಟ್‌ಫುಡ್ ಸೇರಿದಂತೆ ಇನ್ನಿತರೆ ವ್ಯಾಪಾರಿಗಳು ತಮ್ಮ ಬಳಿ ಬರುವ ಗ್ರಾಹಕರ ವಾಹನ ನಿಲುಗಡೆಗಾಗಿ ಸೈಕಲ್ ಪಥದ ಬುಲಾರ್ಡ್ಸ್‌ಗಳನ್ನು ಬೇಕಂತಲೇ ಕಿತ್ತು ಹಾಕುತ್ತಿರುವ ಆರೋಪ ಕೇಳಿ ಬಂದಿದ್ದು, ಪಾಲಿಕೆ ಅಧಿಕಾರಿಗಳು ಪೊಲೀಸರ ಮೂಲಕ ವ್ಯಾಪಾರಿಗಳಿಗೆ ಎಚ್ಚರಿಕೆಯನ್ನು ನೀಡಿದ್ದಾರೆ.

ರಾಮಕೃಷ್ಣ ಪರಮಹಂಸ ವೃತ್ತದ ಸಮೀಪ ಬೀದಿ ಬದಿ ವ್ಯಾಪಾರಿಗಳಿರುವ ಸ್ಥಳದಲ್ಲಿ ಒಂದೇ ಕಡೆ 15ರಿಂದ 20 ಬುಲಾರ್ಡ್ಸ್‌ಗಳ ಕಿತ್ತು ಹಾಕಲಾಗಿದೆ. ಅಲ್ಲದೆ, ಇನ್ನಿತರ ಸ್ಥಳಗಳಲ್ಲೂ ಸೈಕಲ್ ಪಥವನ್ನು ವಿರೂಪಗೊಳಿಸಲು ಬುಲಾರ್ಡ್ಸ್‌ಗಳನ್ನು ಕಿತ್ತಿದ್ದಾರೆ. ಸೈಕಲ್ ಪಥ ನಿರ್ಮಾಣದ ಟೆಂಡರ್ ಪಡೆದಿದ್ದ ಸಂಸಂಸ್ಥೆಗೆ ಒಂದು ವರ್ಷ ನಿರ್ವಹಣೆ ಮಾಡಬೇಕೆಂಬ ಷರತ್ತು ವಿಧಿಸಲಾಗಿತ್ತು. ಆದರೆ, ಸೈಕಲ್ ಪಥ ನಿರ್ಮಾಣವಾಗಿ ಒಂದೂವರೆ ವರ್ಷ ಆಗಿರುವುದರಿಂದ ಟೆಂಡರ್ ಪಡೆದ ಸಂಸ್ಥೆ ಜವಾಬ್ದಾರಿಯಿಂದ ತಪ್ಪಿಸಿಕೊಂಡಿದೆ ಇದೀಗ ಅದನ್ನು ನಿರ್ವಹಣೆ ಮಾಡಬೇಕಾದ ಹೊಣೆ ಪಾಲಿಕೆಗೆ ಸೇರಿದೆ. ಆದರೆ, ಕೆಲವರು ಬೇಕಂತಲೇ ಮುರಿಯುತ್ತಿರುವುದರಿಂದ ಪಾಲಿಕೆ ತಲೆನೋವಾಗಿ ಪರಿಣಮಿಸಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅಮರನ್(ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜಲಂಧರ(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ಕಿ ವಿದ್ಯಾ ಕಾ ವೋ ವಾಲಾ ವಿಡಿಯೋ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಲಂಧರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮೆಕ್ಯಾನಿಕ್ ರಾಕಿ (ತೆ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಘೀರ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ.
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

56ನೇ ವಾರ್ಡ್‌ನಲ್ಲಿ ಶಾಸಕ ಶ್ರೀವತ್ಸ ಪಾದಯಾತ್ರೆ



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿ ಶುಕ್ರವಾರ ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಪಾದಯಾತ್ರೆ ನಡೆಸಿ ನಿವಾಸಿಗಳಿಂದ ಅಹವಾಲು ಸ್ವೀಕರಿಸಿದರು. ಈ ವೇಳೆ ಪಿಟಿ ಕೃಷ್ಣ, ವಿಶ್ವ, ಕಿಟ್ಟಿ ಸೋಮು, ದೀಪು, ರಾಜೇಶ್, ಪ್ರದೀಪ್ ಕುಮಾರ್, ಜೋಗಿ ಮಂಜು, ಕಿಶೋರ್ ಹಾಗೂ ವಾರ್ಡಿಗೆ ಸಂಬಂಧ ಪಟ್ಟ ಎಲ್ಲಾ ಅಧಿಕಾರಿಗಳು ಉಪಸ್ಥಿತರಿದ್ದರು.

ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಮೈಸೂರು ಡಿಸಿ ಕಚೇರಿ ಬಳಿ ಪ್ರತಿಭಟನೆ

ಮೈಸೂರು, ನ.29(ಜಿಎ)–ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ವಿಶ್ವ ಹಿಂದೂ ಪರಿಷತ್ ಮೈಸೂರು ನಗರ ಜಿಲ್ಲಾ ಘಟಕದ ವತಿಯಿಂದ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಮಹೇಶ್ ಕಾಮತ್ ಮಾತನಾಡಿ, ಭಾರತದ ಹಿಂದೂಗಳು ಯಾವಾಗಲೂ ಶಾಂತಿ ಪ್ರಿಯರು. ಎಲ್ಲಾ ಧರ್ಮದ ಜನರೊಂದಿಗೆ ಹೊಂದಾಣಿಕೆಯಿಂದ ಬದುಕುವವರು. ಎಲ್ಲಾ ಧರ್ಮೀಯರ ಜತೆಗೆ ಉತ್ತಮ ಸಾಮರಸ್ಯದಿಂದ ಇರಲು ಬಯಸುತ್ತಾರೆ. ಆದರೆ ಬಾಂಗ್ಲಾದೇಶದಲ್ಲಿ ಇಸ್ಲಾಮಿಕ್ ಮೂಲಭೂತವಾದಿ ಜಿಹಾದಿಗಳು ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರ ಮೇಲೆ ನಿರಂತರ ಕಿರುಕುಳ ನೀಡುತ್ತಿದ್ದಾರೆ. ಹಿಂದೂ ದೇವಾಲಯಗಳು, ಪ್ರತಿಮೆಗಳನ್ನು ಅಪವಿತ್ರಗೊಳಿಸಿ, ಹಿಂದೂಗಳ ಆಸ್ತಿ ನಾಶ ಮಾಡುತ್ತಿದ್ದಾರೆ. ಇದನ್ನು ತಡೆಯಲು ಸರಕಾರ ಯಾವುದೇ ಗಂಭೀರ ಪ್ರಯತ್ನ ಮಾಡುತ್ತಿಲ್ಲ ಎಂದು ಕಿಡಿ ಕಾರಿದರು.

ವಿಶ್ವ ಸಮುದಾಯ ಮತ್ತು ಭಾರತ ಸರ್ಕಾರ ನಿರೀಕ್ಷೆಯಂತೆ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಭದ್ರತೆ ಮತ್ತು ಸಂಘಟನೆಗಾಗಿ ಹಿಂದೂ ಸಮಾಜವನ್ನು ಜಾಗೃತಗೊಳಿಸಿದ ನಾಯಕ ಚಿನ್ಮಯ್ ಕೃಷ್ಣ ದಾಸ್ ಪ್ರಭು ಅವರನ್ನು ಬಂಧಿಸಲಾಗಿದೆ. ಜಾಮೀನು ಸಹ ನಿರಾಕರಿಸಲಾಗಿದೆ. ಕೂಡಲೇ ಹಿಂದೂ ನಾಯಕನ ಬಿಡುಗಡೆ ಮಾಡಬೇಕು. ಬಾಂಗ್ಲಾ ದೇಶದ ಹಿಂದೂಗಳ ರಕ್ಷಣೆ ಮಾಡಬೇಕು. ಕೂಡಲೇ ವಿಶ್ವ ಸಂಸ್ಥೆ ಮಧ್ಯ ಪ್ರವೇಶಿಸಿ ಚಿನ್ಮಯ್ ಕೃಷ್ಣ ದಾಸ್ ಅವರನ್ನು ಬಿಡುಗಡೆ ಮಾಡಲು ಸಹಕರಿಸಿ ಹಿಂದುಗಳು ಹಾಗೂ ದೇವಸ್ಥಾನದ ಭದ್ರತೆಗೆ ಸಹಕರಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಉಪಾಧ್ಯಕ್ಷೆ ಅಂಬಿಕಾ, ಕಾರ್ಯದರ್ಶಿ ಮಧು ಶಂಕರ, ಮಮತಾ, ಬಾಜಪ ರಾಷ್ಟ್ರೀಯ ಸದಸ್ಯೆ ಸವಿತಾ ಘಾಟ್ಕೆ, ಗೋಪಾಲ್, ಶಿವಕುಮಾರ, ವಿಜಯೇಂದ್ರ, ರಾದಾಕೃಷ್ಣ.ಆರ್, ಸಹ ಕಾರ್ಯದರ್ಶಿ, ಜಯಶ್ರೀ, ಚೇತನ, ಮಂಜುನಾಥ ಮತ್ತಿತರರು ಪಾಲ್ಗೊಂಡಿದರು.



ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ವಿಶ್ವ ಹಿಂದೂ ಪರಿಷತ್ ಮೈಸೂರು ನಗರ ಜಿಲ್ಲಾ ಘಟಕದ ವತಿಯಿಂದ ಮೈಸೂರು ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಲಾಯಿತು.

ವೈಕುಂಠ ಸಮಾರಾಧನೆ



ಜನನ: 18–8–1942 । ಮರಣ: 21–11–2024

ಶ್ರೀ ಗೋವಿಂದೇಗೌಡರವರು

ನಿವೃತ್ತ ಮುಖ್ಯೋಪಾಧ್ಯಾಯರು,
ಉಪಾಧ್ಯಕ್ಷರು : ಮಹಾತ್ಮ ಗಾಂಧಿ ಶಿಕ್ಷಣ ಸಂಸ್ಥೆಗಳು, ಮೈಸೂರು,
ಉಪಾಧ್ಯಕ್ಷರು : ಗೀತಾಂಜಲಿ ಶಿಕ್ಷಣ ಸಂಸ್ಥೆಗಳು, ಮೈಸೂರು.

ಇಂತಿ ದುಃಖತಪ್ತರು : ಮೃತರ ಪತ್ನಿ,
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಬಂಧು ವರ್ಗದವರು



ಲೇ|| ಚುರುಮುರಿ ರಾಮಣ್ಣರವರು, ಮಾಲೀಕರು

ರಾಮಣ್ಣ ಅಂಡ್ ಸನ್ಸ್ ಚುರುಮುರಿ, ದಾಳಿಂಬೆ ಚುರುಮುರಿ ಕಾರ್ನರ್, ದಸರಾ ವಸ್ತು ಪ್ರದರ್ಶನ ಮೈದಾನ, ಮೈಸೂರು

ನೀವು ನಮ್ಮನ್ನಗಲಿ ಇಂದಿಗೆ 21 ವರ್ಷ ಕಳೆದರೂ

ಸದಾ ನಿಮ್ಮ ಪ್ರೀತಿ, ಆದರ್ಶಗಳು ನಮಗೆ ದಾರಿದೀಪವಾಗಿದೆ, ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.

ಸದಾ ನಿಮ್ಮ ನೆನಪಿನಲ್ಲಿರುವ

ಧರ್ಮಪತ್ನಿ ಶ್ರೀಮತಿ ಜಯಮ್ಮ, ಮಗ ಮತ್ತು ಸೊಸೆ ಶ್ರೀಮತಿ ಹೆಚ್. ಪವಿತ್ರ ಮತ್ತು ಶ್ರೀ ಆರ್. ಪರಮೇಶ ಮೊಮ್ಮಕ್ಕಳಾದ : ಪಿ. ದವ್ಯಂತಿ, ಪಿ. ಚೇತನ ಹಾಗೂ ಮೊಮ್ಮಗ : ಪೂರ್ವಿಕ್ ಪಿ. ಗೌಡ ಹಾಗೂ ಕುಟುಂಬವರ್ಗದವರು, ದೇವರಾಜ ಮೊಹಲ್ಲಾ, ಮೈಸೂರು.

ನಾಯಿ ಕಾಣೆಯಾಗಿದೆ



ನಾಯಿಯ ಹೆಸರು: ಸ್ಕೈ

ಶಿಟ್ಜು ಎಂಬ ತಳಿಯ 6 ವರ್ಷದ ಗಂಡು ನಾಯಿ
ಭುಜದ ಮೇಲೆ ಪಟ್ಟಿ ಮತ್ತು ನೀಲಿ ಬೆಲ್ಟ್ ಇರುವ ಸ್ಕೈ ಎಂಬ
ಹೆಸರಿನ ನಾಯಿ ಕಾಣೆಯಾಗಿದೆ. ಯಾರಿಗಾದರು ಸಿಕ್ಕಲಿ
ದಯವಿಟ್ಟು ಕೆಳಗಿನ ವಿಳಾಸಕ್ಕೆ ತಿಳಿಸಿ. #825, ಈ & ಎಫ್
ಬ್ಲಾಕ್, ಮನುಜಪಥ ರಸ್ತೆ, ಕುವೆಂಪುನಗರ, ಮೈಸೂರು

99869 66229

ತಂದುಕೊಟ್ಟವರಿಗೆ ಸೂಕ್ತ ಬಹುಮಾನ ದೊರೆಯುತ್ತದೆ.

LOSS OF DOCUMENT

It is hereby informed to the General Public that I KK Subramani s/o Late MS Krishnoji residing No.76 Bommuru Agrahara Srirangapatna 571438 have lost the Original Sale Deed & related land documents executed between Karntaka Housing Board represented by Assistant Executive Engineer, Karnataka Housing Board Mysore and me Dtd 08-09-2014 registered on 15-09-2014 vide Doc No. BNN-1-01979-2014-15 and CD No.BNND57 of my Property at Bannur.

I have also lodged complaint at Srirangpatna Police Station vide DPL218/2024 Dtd 26/11/24

Anyone finding same is requested to kindly return the same.

Place : Srirangpatna,
Date : 26-11-2024

ಪುರಸಭೆ ಕಾರ್ಯಾಲಯ, ವಿರಾಜಪೇಟೆ,
ಕೊಡಗು ಜಿಲ್ಲೆ – 571218
ದೂರವಾಣಿ ಸಂಖ್ಯೆ: – 08274-257332 । ಇಮೇಲ್: itstaff_ulb_virajpet@yahoo.com ।
ವೆಬ್‌ಸೈಟ್: www.virajpettown.mrc.gov.in

ಕ್ರ.ಸಂ.ನಂ.ಪು.ವಿ/ಎಸ್.ಎಫ್.ಸಿ.ವಿ.ಅ.ಎಸ್.ಎಫ್.ಸಿ.ಕು.ನೀ.ಸ.ಪ.ಅ/ಟಿ-09/2024-25 ದಿನಾಂಕ: 29/11/2024

ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ 2023–24ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ಮತ್ತು 2024–25 ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿಯಲ್ಲಿ, ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 1ರ ನಿಯಮಗಳಿಗನುಸಾರ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ : 29/11/2024 ರಿಂದ 16/12/2024 17:30ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 16/12/2024 ಸಂಜೆ 17:30ಗಂಟೆಗೆ
3. ಟೆಂಡರ್ ತೆರೆಯುವ ದಿನಾಂಕ : 18/12/2024 ಬೆಳಗ್ಗೆ 11.30 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ : ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್: www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡಬಹುದಾಗಿದೆ.

ಸಹಿ/–	ಸಹಿ/–	ಸಹಿ/–
(ಶ್ರೀಮತಿ. ಎಂ.ಕೆ ದೇಚಮ್ಮನವರ)	(ಶ್ರೀಮತಿ, ಫಸಿಹಾ ತಬಸಮ್)	(ಶ್ರೀ ಚಂದ್ರ ಕುಮಾರ್ ಎ)
ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.	ಉಪಾಧ್ಯಕ್ಷರು, ಪುರಸಭೆ, ವಿರಾಜಪೇಟೆ.	ಮುಖ್ಯಾಧಿಕಾರಿ. ಪುರಸಭೆ, ವಿರಾಜಪೇಟೆ.

ಕಛೇರಿ ಸ್ಥಳಾಂತರಿಸಲಾಗಿದೆ

ಮೈಸೂರು ಜಿಲ್ಲಾ ಎಂಪ್ಲಾಯಿಸ್ ಗೃಹ ನಿರ್ಮಾಣ ಸಹಕಾರಸಂಘ, ನಿ. ಮೈಸೂರು, ನಂ. 1197 ಬಾಲಕೃಷ್ಣರಾವ್ ರಸ್ತೆ, ಚಾಮರಾಜಮೊಹಲ್ಲಾ ಮೈಸೂರು. ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಛೇರಿಯನ್ನು ಈ ಕೆಳಗಿನ ವಿಳಾಸಕ್ಕೆ ಸ್ಥಳಂತರಿಸಲಾಗಿದೆ. ಮಾನ್ಯ ಸದಸ್ಯರುಗಳು ಈ ಕೆಳಗಿನ ವಿಳಾಸದಲ್ಲಿ ಇನ್ನು ಮುಂದೆ ವ್ಯವಹರಿಸಬೇಕಾಗಿ ಕೋರಲಾಗಿದೆ.

ನಂ. 1201, ವಿಷ್ಣುವರ್ಧನ ರಸ್ತೆ, (ನ್ಯೂ ಡಯಕೇರ್ ಸೆಂಟರ್ & ಪಾಲಿಕ್ಲಿನಿಕ್ ಹಿಂಭಾಗ) ಚಾಮರಾಜಮೊಹಲ್ಲಾ, ಮೈಸೂರು ಹಾಲಿ ಇರುವ ಕಛೇರಿ ಹಿಂಭಾಗದ ರಸ್ತೆ. ಈ ನೂತನ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ದೂ: 9113601715 ಮುಖ್ಯ ಕಾರ್ಯನಿರ್ವಾಣಧಿಕಾರಿ
ನಾಗರಾಜು ಬಿ.ಕೆ

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ
ಪಿರಿಯಾಪಟ್ಟಣ ಮೈಸೂರು ಜಿಲ್ಲೆ –571107
ಕಛೇರಿ : 08223-273036, ಇಮೇಲ್ : itstaff_ulb_periyapatna@yahoo.com

ಸಂ: ಪಿಪುಸ/ತಾಂತ್ರಿಕ/ಜೆಇ2/ಟೆಂಡರ್–14/2024–25 ದಿನಾಂಕ: 28.11.2024

ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಎಸ್.ಎಫ್.ಸಿ. ಕುಡಿಯುವ ನೀರಿನ ಅನುದಾನ ಮತ್ತು ಪುರಸಭಾ ಅನುದಾನದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮಂಟ್ (ಕೆ.ಡಬ್ಲ್ಯೂ–1) ನಿಯಮಾವಳಿಯಂತೆ ಕನಿಷ್ಠ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸದರಿ ವೆಬ್‌ಸೈಟ್ ಮುಖಾಂತರ ಸಲ್ಲಿಸಬಹುದು.

ಕ್ರ. ಸಂ.	ಇಂಡೆಂಟ್ ನಂ.	ಅಂದಾಜು ಮೊತ್ತ ರೂ.ಗಳಲ್ಲಿ	ಇಎಂಡಿ ಮೊತ್ತ ರೂ.ಗಳಲ್ಲಿ
1	DMA/2024-25/WS/WORK_INDENT32858	2,50,000/–	6,250/–

ಟೆಂಡರ್ ಸಲ್ಲಿಸುವ ವಿವರ

1)	ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	30.11.2024 ರಿಂದ 16.12.2024ರ ವರೆಗೆ
2)	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	16.12.2024 ರ ಸಂಜೆ 04.00 ಗಂಟೆಗೆ
3)	ಟೆಂಡರ್‌ಗಳನ್ನು ತೆರೆಯುವ ದಿನಾಂಕ	18.12.2024 ರ ಸಂಜೆ 04.00 ಗಂಟೆಗೆ

ಸೂಚನೆ : ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಗಳ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

	ಸಹಿ/–	ಸಹಿ/–
	ಆಡಳಿತಾಧಿಕಾರಿಗಳು, ಪುರಸಭೆ	ಮುಖ್ಯಾಧಿಕಾರಿಗಳು
DIPR/MYS/KAVITA/874/2024-25	ಪಿರಿಯಾಪಟ್ಟಣ.	ಪುರಸಭೆ, ಪಿರಿಯಾಪಟ್ಟಣ

ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಜಿಲ್ಲಾ ನಗರಾಭಿವೃದ್ಧಿ ಕೋಶ) ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂಖ್ಯೆ :ಎಂಯುಎನ್/ವಾಹನ ಟೆಂಡರ್/ಸಿಆರ್/406/2017–18 ದಿನಾಂಕ: 27.11.2024

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಜಿಲ್ಲಾ ನಗರಾಭಿವೃದ್ಧಿ ಕೋಶ ಚಾಮರಾಜನಗರ ಜಿಲ್ಲೆ ಕಛೇರಿಯ ಯೋಜನಾ ನಿರ್ದೇಶಕರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕಛೇರಿ ಉಪಯೋಗಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ ಜನವರಿ 2024 ಅಥವಾ ತದನಂತರದ ಹೊಸ ಮಾಡಲ್‌ನ ವಾಹನದ ಸೇವೆ ಅವಶ್ಯಕತೆ ಇರುವುದರಿಂದ ವಾಹನ ಮಾಲೀಕರಿಂದ ಅಥವಾ ನೋಂದಾಯಿತ ಟ್ರಾವೆಲ್ಸ್ ಏಜೆನ್ಸಿದಾರರಿಂದ ಸ್ಟ್ಯಾಂಡರ್ಸ್ ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆ.ಪಿ.ಪಿ. ಪೋರ್ಟಾಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಂಖ್ಯೆ: No. DUDC/Vehicle Tender/CR/406/2017-18, ಯೋಜನಾ ನಿರ್ದೇಶಕರ ವಾಹನಕ್ಕೆ ಅಂದಾಜುಮೊತ್ತ ರೂ. 4.80 ಲಕ್ಷಗಳು, ಇ.ಎಂ.ಡಿ ಮೊತ್ತ ರೂ. 12000.00 ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರ ವಾಹನಕ್ಕೆ ಅಂದಾಜುಮೊತ್ತ ರೂ.4.20 ಲಕ್ಷಗಳು, ಇ.ಎಂ.ಡಿ ಮೊತ್ತ ರೂ. 10,500.00 ಗಳು ಆಸಕ್ತಿಯುಳ್ಳ ಗುತ್ತಿಗೆದಾರರು ಟೆಂಡರ್ ವಿವರಗಳನ್ನು www.kppp.karnataka.gov.in ಪೋರ್ಟಾಲ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ನ್ನು ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್‌ಗೆ ಬಿಡ್ ಸಲ್ಲಿಸಲು ಅಂತಿಮ ದಿನಾಂಕ: 07.12.2024ರ ಸಂಜೆ 5.30 ಗಂಟೆಗೆ. ಟೆಂಡರ್ ತೆರೆಯುವ ದಿನಾಂಕ: 09.12.2024 ರ ಬೆಳಗ್ಗೆ 10.30 ಗಂಟೆಗೆ ಹೆಚ್ಚಿನ ಮಾಹಿತಿ ಕಾಮಗಾರಿ ನಿಬಂಧನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಹಾಗೂ www.chamarajanagardudc.mrc.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.

(ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ) ಸಹಿ/– ಯೋಜನಾ ನಿರ್ದೇಶಕರು,
ಸಂ: ವಾಸಾಸಂಇ:ಚಾನಗರ:440:2024–25 ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ.